
# ದಲಿತ ತತ್ವಪದಕಾರ
# ಕಾಶೀನಾಥ ಪಂಚಶೀಲ ಗವಾಯಿ

ಡಾ॥ ಮಲ್ಲಿಕಾರ್ಜುನ ಜೆ. ಅಮ್ಣೆ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ದಲಿತ ತತ್ವಪದಕಾರ

# ಕಾಶೀನಾಥ ಪಂಚಶೀಲ ಗವಾಯಿ

*ಲೇಖಕರು:*

**ಡಾ॥ ಮಲ್ಲಿಕಾರ್ಜುನ ಜೆ. ಅಮ್ಣೆ**

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಬೆಂಗಳೂರು-೫೬೦ ೦೦೨

**DALITA TATVAPADAKARA KASHINATH PANCHASHEELA GAVAI :**
by Dr. Mallikarjun J. Amne, Sonekera - 585418, Humanabad Tq., Bidar Dist.
Published by **Ashoka N. Chalavadi**, Administrative Officer, Kannada Book Authority, J.C. Road, Bangalore - 560 002

© : ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ

Pages : x + 94

Price : Rs. 40/-

First Edition : 2008

Copies : 1,000

ISBN : 81-7713-282-2

ಪ್ರಕಾಶಕರು
**ಅಶೋಕ್ ಎನ್. ಚಲವಾದಿ**
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು – 560 002

ಪುಟಗಳು : x + ೯೪
ಬೆಲೆ : ರೂ. ೪೦/-
ಪ್ರಥಮ ಮುದ್ರಣ : ೨೦೦೮
ಪ್ರತಿಗಳು : ೧೦೦೦
ಕರಡು ತಿದ್ದಿದವರು: ಲೇಖಕರು

ಮುದ್ರಣ
**ಇಳಾ ಮುದ್ರಣ**
ನಂ. ೩೬, ೪೦ ಅಡಿ ರಸ್ತೆ, ರಾಘವನಗರ
ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು - ೫೬೦ ೦೨೬
☎ : ೨೬೭೫೭೧೫೯

# ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು-ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು-ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡ ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ, ಅದೊಂದು ಸಮುದಾಯ ಪ್ರಜ್ಞೆ, ಶಂಕುತಲಾ ದೇವಿಯವರ ಜ್ಞಾನಶಕ್ತಿ ೨x೨=೪ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹು ಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರತಿಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷತ ಲೋಕದ ಚಲನೆ ಹಲವು ಸನಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ನಿತ್ಯದ ಭಯಗಳಾಗಿ ನಮ್ಮೆದುರು ಬಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗಧಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ

ಭಾಷೆಯ ಸ್ಥಿತಿ ಏನು? ಇದು ಇಂದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿಭಾವನೆಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು; ಆಡಳಿತ ಶಿಕ್ಷಣ ಸಂಪರ್ಕ ಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ, ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಿಂದ ಮೊದಲ್ಗೊಂಡ ಹಿತಮಿತ ಮೃದುವಚನ, ನುಡಿ ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಹಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ ಹಿಂದೆಂದಿನ ಆಕ್ರಮಣ ಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರ ವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ.ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯ ದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾ ವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯನ್ನು ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರ ಲೋಕ ಸೃಜನಶಿಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದು ಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ

ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ, ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ, ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ಮುಖೇನ ವಿಷಯಜ್ಞಾನವನ್ನು ಅರಗಿಸಿ ಕೊಂಡು ಭಾಷೆ ಬೆಳೆಯಬೇಕಿದೆ. ಕನ್ನಡದ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲ ವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ–

ಹಿಂದಣ ಅನಂತವನು ಮುಂದಣ ಅನಂತವನು
ಒಂದು ದಿನ ಒಳಕೊಂಡಿತ್ತು ನೋಡಾ
ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ
ಕಂಡು ಬಲ್ಲವರಾರಯ್ಯ
ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
ಅಂತೆ ಹೋದರು ಕಾಣಾ ಗುಹೇಶ್ವರ

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲ ವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸ ಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆ ಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ಧಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆಂದರೆ, ಜೀವನ ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಅಕ್ಷರಲೋಕಕ್ಕಿದೆ. ಏಕರೂಪೀ ಗುಣದಿಂದ ಕೂಡಿದ ಗಣಕೀಕರಣದ ಏಕಾಧಿಪತ್ಯಕ್ಕಿಂತ

ಬಹುರೂಪೀ ಗುಣದ ಪ್ರತಿಭಾ ಸಂಪನ್ನತೆಯಿಂದ ಹೊಳೆವ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ, ವೈವಿಧ್ಯತೆಗಳೊಳಗಿನ ಸೃಜಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಕ್ಷರ ಲೋಕದ ಮೂರ್ತರೂಪಗಳು; ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ. ವಾಚನಾಭಿರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನಾ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಅಗತ್ಯವಾಗಿ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ. **ದಲಿತ ತತ್ವಪದಕಾರ ಕಾಶೀನಾಥ ಪಂಚಶೀಲ ಗವಾಯಿ** ಒಂದು ಅಪರೂಪದ ಕೃತಿ. ಕನ್ನಡ ಬದುಕಿನಲ್ಲಿ ತತ್ವಪದಕಾರರ ಪ್ರಭಾವ ಅಪಾರವಾದುದು. ಹಾದಿ ತಪ್ಪಿದ ಪ್ರಭುತ್ವಕ್ಕೆ ತತ್ವಪದಕಾರರು ನೀಡಿದ ಮಾತಿನ ಚಾಟಿಯೇಟು ಚರಿತ್ರೆಯ ಅಧ್ಯಯನದಲ್ಲಿ ವಿಶೇಷವಾಗಿ ಪರಿಗಣಿಸಬೇಕಾದ ಸೂಕ್ತಿಗಳು. ಹೊರನೋಟದಲ್ಲಿ ಪರಕ್ಕೆ ಜೋತು ಬಿದ್ದವರಂತೆ ಕಂಡರೂ ಇವರಷ್ಟು ಆಳವಾಗಿ ಬದುಕನ್ನು ಅನ್ವೇಶಿಸಿದ ಸಾಧಕರು ಯಾರೂ ಇಲ್ಲ. ಸಮಾಜದ ಆರೋಗ್ಯಕ್ಕಾಗಿ ಹಗಲಿರುಳು ಧೇನಿಸಿದ ಚಿಂತಕರು ಇವರು. ಇಂಥ ಮಹಾಸಾಧಕರಲ್ಲಿ ಪಂಚಶೀಲ ಗವಾಯಿಗಳೂ ಒಬ್ಬರು. ದಲಿತ ಜಗತ್ತಿನ ದುಃಖ ದುಮ್ಮಾನಗಳನ್ನು ಆತ್ಮವಿಶ್ವಾಸದ ಅಪರಿಮಿತ ಶಕ್ತಿಯಿಂದ ದಾಟಿದವರು ಗವಾಯಿಗಳು. ಇವರ ಬದುಕಿನ ಚಿತ್ರಣವನ್ನೊಳಗೊಂಡ ಈ ಕೃತಿಯನ್ನು ರಚಿಸಿಕೊಟ್ಟ ಡಾ. ಮಲ್ಲಿಕಾರ್ಜುನ ಜೆ.ಅಮ್ಮೆ ಅವರಿಗೆ ಪ್ರಾಧಿಕಾರದ ಕೃತಜ್ಞತೆಗಳು.

**ಪ್ರೊ ಎಸ್. ಜಿ. ಸಿದ್ಧರಾಮಯ್ಯ**
ಅಧ್ಯಕ್ಷರು

# ಲೇಖಕರ ಮಾತು

ಇದು ನನ್ನ ನಾಲ್ಕನೆಯ ಕೃತಿ. ಇದು ಹೈದ್ರಾಬಾದ ಕರ್ನಾಟಕ ಭಾಗದ ಹಿರಿಯ ತತ್ವಪದಕಾರರಾಗಿದ್ದ ಕಾಶೀನಾಥ ಪಂಚಶೀಲ ಗವಾಯಿಗಳ ಬದುಕನ್ನು ಕುರಿತುದಾಗಿದೆ. ಬಾಲ್ಯದಲ್ಲಿಯೇ ತಮ್ಮ ಎರಡೂ ಕಣ್ಣುಗಳನ್ನು ಕಳೆದುಕೊಂಡು ಅಂಧರಾಗಿದ್ದ ಗವಾಯಿಗಳು ಬಹುಮುಖ ಪ್ರತಿಭೆಯುಳ್ಳವರಾಗಿದ್ದರು. ಅವರೊಬ್ಬ ಕವಿ, ಗಾಯಕ, ಸಂಗೀತಗಾರ ಹಾಗೂ ಹೋರಾಟಗಾರರಾಗಿದ್ದರು. ನೂರಾರು ತತ್ವಪದಗಳನ್ನು ರಚಿಸಿ, ಹಾಡಿ ಜನರನ್ನು ಜಾಗೃತಗೊಳಿಸಿದರು; ಆ ಮೂಲಕ ಜನಮನವನ್ನು ಗೆದ್ದರು. ಪ್ರಗತಿಪರ ನಿಲುವು ಹಾಗೂ ಪ್ರಖರ ವೈಚಾರಿಕತೆಯಿಂದಾಗಿ ಅವರ ತತ್ವಪದಗಳು ಗಮನ ಸೆಳೆಯುತ್ತವೆ. ೫೦-೬೦ರ ದಶಕದಲ್ಲಿಯೇ ಬುದ್ಧ-ಅಂಬೇಡ್ಕರರ ವಿಚಾರಗಳನ್ನು ತಮ್ಮ ಹಾಡುಗಾರಿಕೆ ಹಾಗೂ ಭಾಷಣಗಳ ಮೂಲಕ ದಲಿತರ ಮನೆ ಮನೆಗೆ ತಲುಪಿಸಿದ ಕೀರ್ತಿ ಗವಾಯಿಗಳಿಗೆ ಸಲ್ಲುತ್ತದೆ. ದಲಿತ ಸಮುದಾಯದಲ್ಲಿ ಅಂಬೇಡ್ಕರ ಪ್ರಜ್ಞೆ ಮೂಡಿಸಿದ ಮೊದಲ ಕವಿ ಕಾಶೀನಾಥ ಗವಾಯಿ. ಸುಮಾರು ಐದು ದಶಕಗಳ ಕಾಲ ದಲಿತ ಸಮಾಜದ ಬದಲಾವಣೆಗಾಗಿ ಗವಾಯಿಗಳು ಸತತವಾಗಿ ಶ್ರಮಿಸಿದ್ದಾರೆ; ಅತ್ಯಂತ ನಿಷ್ಠೆ ಹಾಗೂ ಪ್ರಮಾಣಿಕತೆಯಿಂದ ದುಡಿದ್ದಾರೆ. ಇಷ್ಟಾದರೂ ಕಾಶೀನಾಥ ಗವಾಯಿಗಳ ಜೀವನ ಮತ್ತು ಸಾಧನೆ ಕುರಿತು ವಿವರವಾದ ಚರ್ಚೆ ನಡೆದಿಲ್ಲವೆಂದೇ ಹೇಳಬೇಕು. ಆ ನಿಟ್ಟಿನಲ್ಲಿ ಸಣ್ಣದೊಂದು ಪ್ರಯತ್ನ ನಾನಿಲ್ಲಿ ಮಾಡಿದ್ದೇನೆ.

ಈ ಕೃತಿಯು ಸಂಪೂರ್ಣವಾಗಿ ಕ್ಷೇತ್ರಕಾರ್ಯವನ್ನು ಆಧರಿಸಿ ರಚಿಸಲಾಗಿದೆ. ಗವಾಯಿಗಳ ಬದುಕಿನ ವಿವರಗಳನ್ನು ಪಡೆಯಲು ಅವರ ಬದುಕಿಗೆ ಸಂಬಂಧಿಸಿದ ಅನೇಕ ಹಳ್ಳಿಗಳನ್ನು ಸುತ್ತಾಡಿದ್ದೇನೆ, ಮತ್ತು ಅವರ ನಿಕಟವರ್ತಿಗಳು, ಬಂಧು-ಮಿತ್ರರು ಹಾಗೂ ಅಭಿಮಾನಿಗಳೊಂದಿಗೆ ಸಂದರ್ಶನ ನಡೆಸಿ. ಜನರ ಸ್ಮೃತಿಪಟಲದಿಂದಲೇ ಅವರ ಜೀವನ ಚರಿತ್ರೆಯನ್ನು ಹೊರತೆಗೆದು ದಾಖಲಿಸಿದ್ದೇನೆ. ಕ್ಷೇತ್ರಕಾರ್ಯಕ್ಕೆಂದು ನಾನು ಹಿಲಾಲಪೂರ, ಸಿರಕಟನಳ್ಳಿ (ಚಿಟ್ನಳ್ಳಿ), ಖಾನಾಪೂರ, ಘಾಟಹಿಪ್ಪರಗಾ, ಬೀದರ ಮುಂತಾದ ಊರುಗಳಿಗೆ ಹೋದಾಗ ಅನೇಕರು ಗವಾಯಿಗಳ ಬದುಕಿನ ವಿವರಗಳನ್ನು ನೀಡಿದ್ದಾರೆ. ಅವರೆಲ್ಲರನ್ನೂ ನಾನು ಕೃತಜ್ಞತೆಯಿಂದ ನೆನೆಯುತ್ತೇನೆ. ಅದರಲ್ಲೂ

ಮಾಣಿಕರಾವ ಜ್ಯೋತಿ ಬೀದರ, ಅಮೀರಲಿ ಮಾಸ್ತರ ಹಾಗೂ ಫಾತಿಮಾ ಸಿರಕಟನಹಳ್ಳಿ, ಲಕ್ಷ್ಮಿ ದೇವಿಂದ್ರ, ಪ್ರಕಾಶ ಖಾನಾಪೂರ ಇವರನ್ನು ವಿಶೇಷವಾಗಿ ಸ್ಮರಿಸುತ್ತೇನೆ.

ಕೃತಿ ರಚನೆಯ ಸಂದರ್ಭದಲ್ಲಿ ಗೆಳೆಯರು ನೀಡಿದ ಸಹಾಯ ಸಹಕಾರವನ್ನು ನೆನೆಯದೆ ಇರಲಾರೆ. ಗೆಳೆಯ ಡಾ. ಮನ್ಮತ್‌ಡೋಳೆಯವರು ಗವಾಯಿಗಳ ತತ್ವಪದಗಳನ್ನು ಒದಗಿಸಿಕೊಟ್ಟಿದ್ದಾರೆ, ಶ್ರೀ ಸುಭಾಶ ರಾಜೋಳೆಯವರು ನನ್ನೊಡನೆ ಕ್ಷೇತ್ರಕಾರ್ಯಕ್ಕೆಂದು ಘಾಟಹಿಪ್ಪರಗಾದವರೆಗೂ ಬಂದಿದ್ದಾರೆ, ಡಾ. ಸೂರ್ಯಕಾಂತ ಸುಜ್ಯಾತ್ ದೇಗಾಂಕರ್ ರವರು ಇಡೀ ಹಸ್ತಪ್ರತಿಯನ್ನು ಕೂಲಂಕಷವಾಗಿ ಓದಿ ಕೆಲವು ಸಲಹೆಗಳನ್ನು ನೀಡಿದ್ದಾರೆ, ಡಾ. ಜಯಕುಮಾರ ಸಿಂಧೆ, ಡಾ. ಚಂದ್ರಪ್ಪ ಭತಮುರ್ಗೆ, ಡಾ. ಯಾದವ ಬೊಡಕೆ ಇವರೆಲ್ಲರೂ ಕಾಳಜಿಯಿಂದ ಕೃತಿಯ ಬಗ್ಗೆ ಆಗಾಗ ವಿಚಾರಿಸಿದ್ದಾರೆ. ಈ ಎಲ್ಲ ಗೆಳೆಯರ ಪ್ರೀತಿ ಪ್ರೋತ್ಸಾಹಕ್ಕೆ ನಾನು ಋಣಿಯಾಗಿದ್ದೇನೆ.

ಈ ಕೃತಿಯು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಪ್ರಾಧಿಕಾರದ ವತಿಯಿಂದ ಪುಸ್ತಕ ಪ್ರಕಟವಾಗುವುದೇ ಒಂದು ದೊಡ್ಡ ಸಂಗತಿ. ಅಂಥದರಲ್ಲಿ ನನ್ನ ಈ ಕೃತಿಯನ್ನು ಪ್ರಾಧಿಕಾರವು ಪ್ರಕಟನೆಗೆ ಆಯ್ಕೆ ಮಾಡಿಕೊಂಡಿದೆ. ಅದಕ್ಕಾಗಿ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಜಿ.ಎಸ್. ಸಿದ್ಧರಾಮಯ್ಯನವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಕೃತಿ ಪ್ರಕಟವಾಗಲು ಪ್ರಾಧಿಕಾರದ ಸದಸ್ಯರಾದ ಡಾ. ಕಾಶೀನಾಥ ಅಂಬಲಗೆಯವರು ವಿಶೇಷ ಕಾಳಜಿಯನ್ನು ತೋರಿಸಿದ್ದಾರೆ. ಬಹುಶಃ ಅವರು ಕಾಳಜಿ ವಹಿಸದಿದ್ದರೆ ಈ ಕೃತಿ ಪ್ರಕಟವಾಗುತ್ತಿತ್ತೊ ಇಲ್ಲವೊ, ಕಾರಣ ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಅಲ್ಲದೆ ನನ್ನ ವಿದ್ಯಾಗುರುಗಳಾದ ಡಾ. ಪಿ.ಕೆ. ಖಂಡೋಬಾ, ಡಾ. ವೀರಣ್ಣದಂಡೆ ಹಾಗೂ ಇತರ ಗುರುವೃಂದಕ್ಕೂ ಸ್ಮರಣೆಗಳು ಸಲ್ಲುತ್ತವೆ. ತಮ್ಮ ಓಂಕಾರನ ಸಹಕಾರವೂ ಮರೆಯಲಾರೆ.

ಈ ಕೃತಿಯನ್ನು ಕುರಿತು ಟೀಕೆ-ಟಿಪ್ಪಣಿ, ಸಲಹೆ-ಸೂಚನೆಗಳೇನಾದರೂ ಇದ್ದರೆ, ಓದುಗರು, ತಮ್ಮ ಅಭಿಪ್ರಾಯಗಳನ್ನು ಬರೆದು ತಿಳಿಸಲಿ. ಓದುಗರ ಅಭಿಪ್ರಾಯಕ್ಕೆ ಸದಾ ಸ್ವಾಗತವಿದೆ.

ಸೋನಕೇರಾ **ಡಾ. ಮಲ್ಲಿಕಾರ್ಜುನ ಜೆ. ಅಮ್ಲೆ**
೨೫-೧೨-೨೦೦೭

# ಪರಿವಿಡಿ

೧. ಜೀವನ

ಹಿನ್ನೆಲೆ
ಜನನ ಮತ್ತು ತಂದೆ ತಾಯಿ
ಬಾಲ್ಯಕಾಲ
ಅಂಧ ಬಾಲಕನ ಕಷ್ಟದ ಬದುಕು
ಸಂಗೀತ ಕಲಿಯಲು ಅಲೆದಾಟ
ತಿರುಗಿ ಹಿಲಾಲಪೂರಕ್ಕೆ
ಬುದ್ಧ-ಅಂಬೇಡ್ಕರ ತತ್ವದೆಡೆಗೆ
ಹಿಂಸಾತ್ಮಕ "ಕಾರ್ಯ" ತಡೆಯಲು ಹೋರಾಟ
ಮದುವೆ ಮತ್ತು ದಾಂಪತ್ಯ
ಹಿಲಾಲಪೂರದಿಂದ ಬೀದರಕ್ಕೆ
ಸಮಾನತೆಗಾಗಿ ಹೋರಾಟ
ಪ್ರಶಸ್ತಿ ಹಾಗೂ ಗೌರವ
ಕೊನೆಯ ದಿನಗಳು
ವ್ಯಕ್ತಿತ್ವ

೨. ಸಾಹಿತ್ಯ

ದಲಿತ ಸಮಾಜ ಹಾಗೂ ಸಂಸ್ಕೃತಿ
ಬುದ್ಧ-ಅಂಬೇಡ್ಕರ್
ವೈಚಾರಿಕತೆ
ಪುರಾಣ ಮತ್ತು ಚರಿತ್ರೆ
ರಾಷ್ಟ್ರಪ್ರೇಮ ಮತ್ತು ರಾಜಕೀಯ ವಿಚಾರ
ಕಥನ ಗೀತೆಗಳು

೩. ಅನುಬಂಧ

ಕಾಶೀನಾಥ ಪಂಚಶೀಲ ಗವಾಯಿಗಳ ಕೆಲವು ರಚನೆಗಳು
ಆಕರಗಳು
ಸಂದರ್ಶಕರ ಯಾದಿ
ಶಬ್ದಾರ್ಥ

# ಜೀವನ

# ಹಿನ್ನೆಲೆ

ಕರ್ನಾಟಕದ ತುಟ್ಟ ತುದಿಯಲ್ಲಿರುವ ಬೀದರ ಜಿಲ್ಲೆಗೆ ಬಹಳ ಪ್ರಾಚೀನವಾದ ಇತಿಹಾಸವಿದೆ. ರಾಮಾಯಣ, ಮಹಾಭಾರತದೊಂದಿಗೆ ಸಂಬಂಧ ಕಲ್ಪಿಸುವ ಸ್ಥಳನಾಮಗಳು ಇಲ್ಲಿವೆ. ರಾಮನು ವನವಾಸದ ಕಾಲದಲ್ಲಿ ಸೀತೆಯನ್ನು ಹುಡುಕುತ್ತಾ ಲಕ್ಷ್ಮಣನೊಂದಿಗೆ ದಕ್ಷಿಣ ಭಾರತಕ್ಕೆ ಬಂದಾಗ, ಬೀದರಿನ ಪಾಪನಾಶ ಲಿಂಗದ ದರ್ಶನ ಮಾಡಿ ಪೂಜೆ ಸಲ್ಲಿಸಿದನೆಂದು ಪ್ರತೀತಿ. ಮಹಾಭಾರತದ ವಿದುರನ ರಾಜಧಾನಿ ಬೀದರ, ವಿದುರನಿಂದ ಬೀದರೆಂಬ ಹೆಸರು ಬಂದಿತೆಂದು ವಾದಿಸುವವರೂ ಇದ್ದಾರೆ. ಐತಿಹಾಸಿಕ ಹಾಗೂ ಸಾಂಸ್ಕೃತಿಕ ವಾಗಿಯೂ ಬೀದರ ತನ್ನ ಶ್ರೇಷ್ಠತೆಯನ್ನು ಮೆರೆದಿದೆ. ಚಾಲುಕ್ಯರ ರಾಜಧಾನಿಯಾಗಿದ್ದ ಕಲ್ಯಾಣ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ವೈಭವದ ತುಟ್ಟತುದಿಯನ್ನು ಮುಟ್ಟಿತ್ತು. ಅವನ ಆಸ್ಥಾನದಲ್ಲಿ ಬಿಲ್ಹಣ ಮತ್ತು ವಿಜ್ಞಾನೇಶ್ವರ ಎಂಬ ವಿದ್ವಾಂಸರು ಇದ್ದರು. ಜಗತ್ತಿನಲ್ಲಿ 'ಕಲ್ಯಾಣದಂತಹ ನಗರ ಹಿಂದೆ ಇರಲಿಲ್ಲ, ಮುಂದೆ ಇರದು' ಎಂದು ವಿಜ್ಞಾನೇಶ್ವರ ಕಲ್ಯಾಣವನ್ನು ಕೊಂಡಾಡಿದ್ದಾನೆ. ಬಹಮನಿ ರಾಜರ ಕಾಲದಲ್ಲಿ ಮಂತ್ರಿ ಯಾಗಿದ್ದ ಮಹಮ್ಮದ ಗವಾನನು ಶ್ರೇಷ್ಠ ಶಿಕ್ಷಣಪ್ರೇಮಿಯಾಗಿದ್ದನು. ಬೀದರನಲ್ಲಿ ಅವನು ಸ್ಥಾಪಿಸಿದ ಮದರಸಾ ಆಗಿನ ಕಾಲದ ವಿಶ್ವವಿದ್ಯಾಲಯವಾಗಿತ್ತು. ತುರ್ಕಿ, ಪರ್ಶಿಯಾ ದೇಶದಿಂದಲೂ ವಿದ್ಯಾರ್ಥಿಗಳು ಓದಲು ಬರುತ್ತಿದ್ದರು. ವಿಶ್ವದಲ್ಲಿಯೇ ಅಪರೂಪವೆನಿಸಿದ ಬಸವಾದಿ ಶರಣರ ವಿನೂತನವಾದ ಪರಿವರ್ತನೆಯ ಚಳುವಳಿ ನಡೆದದ್ದು ಕಲ್ಯಾಣದಲ್ಲಿ. ಅನೇಕ ಕೋಟೆಕೊತ್ತಲುಗಳು, ಅರಮನೆಗಳು, ದೇವಾಲಯಗಳು ಇಲ್ಲಿನ ಕಲೆಯ ಶ್ರೇಷ್ಠತೆಯನ್ನು ಸಾರಿ ಹೇಳುತ್ತಿವೆ. ಬಿದರಿ ಕಲೆಗಂತೂ ಬೀದರ ವಿಶ್ವವಿಖ್ಯಾತವಾಗಿದೆ.

ಬೀದರ ಜಿಲ್ಲೆಯಲ್ಲಿ ಅನೇಕ ಸಂತರು, ಶರಣರು, ಮಹಾಪುರುಷರು, ತತ್ವಪದಕಾರರು ಆಗಿ ಹೋಗಿದ್ದಾರೆ. ಸಿಖ್ಖರ ಧರ್ಮಗುರು ಗುರುನಾನಕರು ಉತ್ತರಭಾರತದಿಂದ ಬೀದರಕ್ಕೆ ಬಂದ ಇತಿಹಾಸವಿದೆ. ಮಾಣಿನಗರದ ಮಾಣಿಕ ಪ್ರಭು, ನಾವದಗಿಯ ರೇವಪಯ್ಯ ಶರಣರು, ಸಿದ್ಧಾರೂಢಸ್ವಾಮಿಗಳು, ಕನಕನಳ್ಳಿಯ ಬಕ್ಕಪ್ರಭು, ನಿಡವಂಚಿಯ ಭದ್ರೇಶ್ವರರು, ಭಾಲ್ಕಿಯ ಚನ್ನಬಸವ ಪಟ್ಟದ್ದೇವರು ಮುಂತಾದ ಮಹಾಪುರುಷರು ತಮ್ಮ ಅನುಭಾವದಿಂದ ಜನಮನವನ್ನು ಬೆಳಗಿದ್ದಾರೆ; ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ಸಾಹಿತ್ಯಿಕವಾಗಿಯೂ ಬೀದರ ಜಿಲ್ಲೆಗೆ ತನ್ನದೇ ಆದ ಪರಂಪರೆ ಇದ್ದರೂ ಹೊಸಗನ್ನಡ ಸಾಹಿತ್ಯದ ಆರಂಭದ ಕಾಲಘಟ್ಟದಲ್ಲಿ ಇಲ್ಲಿ ಯಾರೂ ಸಾಹಿತ್ಯ ರಚನೆಯಲ್ಲಿ ತೊಡಗಿದಂತೆ

ಕಾಣುವುದಿಲ್ಲ. ಅದಕ್ಕೆ ಕಾರಣ ಹಲವು. ಆದರೆ ಸರಿ ಸುಮಾರು ಅದೇ ಕಾಲದಲ್ಲಿ ಅಥವಾ ಅದಕ್ಕಿಂತಲೂ ಸ್ವಲ್ಪ ಮುಂಚಿತವಾಗಿಯೇ ಇಲ್ಲಿ ಅನೇಕ ತತ್ವಪದಕಾರರು ಸಾವಿರಾರು ತತ್ವಪದಗಳನ್ನು ರಚಿಸಿ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಅವರಲ್ಲಿ ಪ್ರಮುಖರೆಂದರೆ, ದುಮ್ಮನಸೂರಿನ ಸಿದ್ಧಪ್ರಭು, ನಿಡವಂಚಿಯ ನಿಜಲಿಂಗಭದ್ರೇಶ್ವರ, ಮರಕುಂದಿಯ ಬಸವಣ್ಣಪ್ಪ, ಲಾಡಗೇರಿಯ ಶಾಂತಲಿಂಗ ಸ್ವಾಮಿಗಳು, ಚಿಟಗುಪ್ಪದ ಶಿಲ್ಲಪ್ಪಕವಿ, ಮಂಗಲಗಿಯ ನನ್ನಾಸಾಬ, ಲಾಧಾದ ಶಿವರಾಯ ಮುಚಳಂಬಿ, ಲಾಡವಂತಿಯ ಲಾಡ ಮದನಸಾಬ, ಕೊಳ್ಳೂರಿನ ಹುಸನಸಾಬ, ಅಣದೂರಿನ ಜಹೂರಶಾ, ಹಾರಕೂಡದ ಬಸವಣ್ಣಪ್ಪ ಮುಂತಾದವರು. ಆದರೆ ಧೋರಣೆ ಮತ್ತು ಪ್ರೇರಣೆಯ ದೃಷ್ಟಿಯಿಂದ ಇವರೆಲ್ಲರಿಗಿಂತಲೂ ಭಿನ್ನವಾಗಿ ನಿಲ್ಲುವವರು ಹಿಲಾಲಪೂರದ ದಲಿತ ತತ್ವಪದಕಾರ ಕಾಶೀನಾಥ ಪಂಚಶೀಲ ಗವಾಯಿಗಳು. ಇತರ ತತ್ವಪದಕಾರರಂತೆ ಗವಾಯಿಗಳು ಆತ್ಮ-ಪರಮಾತ್ಮ, ಶರೀರದ ನಶ್ವರತೆಯ ಬಗ್ಗೆ ತಮ್ಮ ತತ್ವಪದಗಳಲ್ಲಿ ಮಹತ್ವ ಕೊಡದೆ, ಜನಪರ ಚಿಂತನೆಗೆ ಹಾಗೂ ಸಾಮಾಜಿಕ ಸಮಸ್ಯೆಗಳಿಗೆ ಹೆಚ್ಚು ಮಹತ್ವವನ್ನು ನೀಡಿದರು. ಆದ್ದರಿಂದ ಗವಾಯಿಗಳನ್ನು ಜನಪರ ಕಾಳಜಿಯ ತತ್ವಪದಕಾರರೆನ್ನಬಹುದು.

ದಲಿತ ಸಮಸ್ಯೆಗಳು, ದಲಿತರ ಶೋಷಣೆಯ ವಿರುದ್ಧ ಪ್ರತಿಭಟನೆ, ಸಂಪ್ರದಾಯ, ಮೂಢನಂಬಿಕೆಗೆ ವಿರೋಧ ಇವರ ತತ್ವಪದಗಳಲ್ಲಿ ಕಾಣುತ್ತೇವೆ. ಪಟ್ಟಭದ್ರರ ವಿರುದ್ಧದ ಗಟ್ಟಿಧ್ವನಿ ಕಾಶೀನಾಥ ಪಂಚಶೀಲ ಗವಾಯಿ.

### ಜನನ ಮತ್ತು ತಂದೆ-ತಾಯಿ

ಹುಮನಾಬಾದದಿಂದ ಬೀದರಕ್ಕೆ ಹೋಗುವ ರಸ್ತೆಯಲ್ಲಿ ೨೦ ಕಿ.ಮೀ. ಕ್ರಮಿಸಿದರೆ ಸಿಗುವ ಒಂದು ದೊಡ್ಡ ಊರು ಹಳ್ಳಿಖೇಡ (ಬಿ). ಇದು ಕನ್ನಡದ ಮೊದಲ ಗದ್ಯಕೃತಿ ವಡ್ಡಾರಾಧನೆಯ ಕರ್ತೃ ಬ್ರಾಜಿಷ್ಣುವಿನ ಊರೂ ಹೌದು. ಇಲ್ಲಿಂದ ಆಗ್ನೇಯಕ್ಕೆ ೮ ಕಿ.ಮೀ ದೂರದಲ್ಲಿ ಹಿಲಾಲಪೂರವೆಂಬ ಚಿಕ್ಕದೊಂದು ಹಳ್ಳಿ ಇದೆ. ಇದುವೇ ತತ್ವಪದಕಾರ ಕಾಶೀನಾಥ ಪಂಚಶೀಲ ಗವಾಯಿಗಳ ಊರು. ಈ ಭಾಗದ ಎಲ್ಲ ಹಳ್ಳಿಗಳಂತೆ ಇದು ಕೂಡ ಒಂದು ಕುಗ್ರಾಮವಾಗಿಯೇ ಉಳಿದುಕೊಂಡಿದೆ. ಇವೊತ್ತಿಗೂ ಊರಲ್ಲೊಂದು ರಸ್ತೆ ಇಲ್ಲದೆ ನಾಗರಿಕ ಸೌಲಭ್ಯಗಳಿಂದ ವಂಚಿತವಾಗಿದೆ. ಊರ ಸುತ್ತಮುತ್ತಲು ಹೊಲ-ತೋಟಗಳಿವೆ. ಹತ್ತಿರದಲ್ಲಿ ಕಾರಂಜಾ ನದಿ ಹರಿಯುತ್ತದೆ. ಆ ನದಿಗೆ ಕಟ್ಟಿದ ಅಣೆಕಟ್ಟಿನಲ್ಲಿ ನೀರು ಸಂಗ್ರಹವಾದಾಗ ಅದರ ಹಿನ್ನೀರು ಹಿಲಾಲಪೂರದವರೆಗೆ ಬರುತ್ತದೆ.

ಹಿಲಾಲಪೂರ ಕುಗ್ರಾಮವಾದರೂ ಕಾಶೀನಾಥ ಗವಾಯಿಗಳ ಕಾರಣಕ್ಕಾಗಿ ಪ್ರಸಿದ್ಧಿ ಮತ್ತು ಪ್ರಚಾರವನ್ನು ಪಡೆದು, ಜನರ ನಾಲಿಗೆಯ ಮೇಲೆ ಉಳಿದುಕೊಂಡು ಬಂದಿದೆ. ಕಾರಣ ಗವಾಯಿಗಳು ತಮ್ಮ ಹಾಡುಗಳ ಮುಕ್ತಾಯದಲ್ಲಿ ಬಹಳಷ್ಟು ಕಡೆಗೆ ತಮ್ಮ ಅಂಕಿತನಾಮವಾದ 'ಪಂಚಶೀಲ ಕಾಶೀನಾಥ ಗವಾಯಿ' ಎಂಬುದರ ಜೊತೆಗೆ 'ಹಿಲಾಲಪೂರ' ಎಂಬ ಹೆಸರನ್ನೂ ಯಥೇಚ್ಛವಾಗಿ ಬಳಸಿದ್ದಾರೆ. ಹೀಗಾಗಿ ಇದಕ್ಕೆ ಪ್ರಚಾರ ಸಿಕ್ಕಿದೆ. ಶರೀಫರಿಂದಾಗಿ 'ಶಿಶುನಾಳ' ಪ್ರಚಾರ ಪಡೆದಂತೆ ಕಾಶೀನಾಥ ಗವಾಯಿಗಳಿಂದಾಗಿ ಹಿಲಾಲಪೂರ ಪ್ರಸಿದ್ಧಿಯನ್ನು ಪಡೆದಿದೆ.

ಹಿಲಾಲಪೂರದ ಸಿಂಗೆ ಮನೆತನಕ್ಕೆ ಸೇರಿದ ಕಾಳಪ್ಪ ಮತ್ತು ಶಾಂತಾಬಾಯಿ ದಂಪತಿಗಳ ಹಿರಿಯ ಮಗನೇ ಕಾಶೀನಾಥ ಗವಾಯಿ. ಅಸ್ಪೃಶ್ಯ ಹೊಲೆಯ ಜಾತಿಗೆ ಸೇರಿದ ಕಾಳಪ್ಪ ಮತ್ತು ಶಾಂತಾಬಾಯಿಗೆ ಒಟ್ಟು ಹನ್ನೊಂದು ಜನ ಮಕ್ಕಳು. ಅವರಲ್ಲಿ ಬದುಕಿ ಉಳಿದವರು ಐದು ಜನ ಮಾತ್ರ, ಕಾಶೀನಾಥ, ಲಕ್ಷ್ಮಿ, ರುದ್ರಮ್ಮಾ, ಶರಣಮ್ಮಾ ಹಾಗೂ ಪುಂಡಲಿಕ. ಕಾಶೀನಾಥನ ತಾಯಿ ಶಾಂತಾಬಾಯಿಯ ತವರೂರು ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ಖಾನಾಪೂರ. ಅಜ್ಜ ಬಸಪ್ಪ (ತಾಯಿಯ ತಂದೆ) ಖಾನಾಪೂರನ್ನು ಬಿಟ್ಟು ಕೆಲಸ ಅರಸಿಕೊಂಡು ಪಕ್ಕದ ಹಳ್ಳಿ ಚಂದನಕೇರಿಗೆ ಬಂದು ನೆಲೆ ನಿಂತನು. ಹೆಂಡತಿ ಮಕ್ಕಳೊಂದಿಗೆ ಸುಮಾರು ೩೦-೩೫ ವರ್ಷಗಳ ಕಾಲ ಚಂದನಕೇರಿಯಲ್ಲಿಯೇ ಉಳಿದುಕೊಂಡನು. ಚಂದನಕೇರಿಯ ಅಜ್ಜನ ಮನೆಯಲ್ಲಿಯೇ ಕ್ರಿ.ಶ. ೧೪.೪.೧೯೩೩ರಂದು ಕಾಶೀನಾಥ ಗವಾಯಿಗಳ ಜನನವಾಯಿತು. ಮಗು ತುಸು ಕಪ್ಪಾದರೂ ದುಂಡು ದುಂಡಾಗಿ ಮುದ್ದಾಗಿ ಇತ್ತು. ಕಾಳಪ್ಪ ಮತ್ತು ಶಾಂತಾಬಾಯಿ ದಂಪತಿಗಳ ಆನಂದಕ್ಕೆ ಪಾರವೇ ಇರಲಿಲ್ಲ. ಅಜ್ಜ ಬಸಪ್ಪನಿಗೆ ಮೊಮ್ಮಗನನ್ನು ಕಂಡು ಖುಷಿಯೋ ಖುಷಿ.

## ಬಾಲ್ಯಕಾಲ

ಕಾಶೀನಾಥ ಗವಾಯಿಗಳ ಬಾಲ್ಯ ಹಿಲಾಲಪೂರ ಮತ್ತು ಚಂದನಕೇರಿಯಲ್ಲಿ ಕಳೆಯಿತು. ಬಾಲ್ಯದಲ್ಲಿ ಬಾಲಕ ಕಾಶೀನಾಥ ಬಹಳ ತುಂಟನಾಗಿದ್ದನು. ಕುಳಿತಲ್ಲಿ ಸುಮ್ಮನೆ ಕೂಡುತ್ತಿರಲಿಲ್ಲ. ತನ್ನ ಸರೀಕರಿಗೆ ಹೊಡೆದಾದರೂ ನೋಡುತ್ತಿದ್ದ, ಇಲ್ಲವೆ ಚಿವುಟಿಯಾದರೂ ನೋಡುತ್ತಿದ್ದ. ಚಂಡು, ಗೋಲಿ, ಚಿಣಿ ಆಟ ಆಡುವುದರಲ್ಲಿ ಮುಂಚೂಣಿಯಲ್ಲಿ ಇರುತ್ತಿದ್ದನು. ನೀರಾಟ ಆಡಲು ಇತರ ಬಾಲಕರೊಂದಿಗೆ ಹತ್ತಿರದ ಹೊಳೆಗೆ ಹೋಗುತ್ತಿದ್ದನು. ಅಲ್ಲಿಯೂ ಇವನ ತುಂಟಾಟ ಮುಂದುವರೆಯುತ್ತಿತ್ತು. ಹೊಳೆಯಲ್ಲಿ ಇತರ ಹುಡುಗರನ್ನು ಮುಳುಗಿಸಿ ತಾನು ಅವರ ಕೈಗೆ ಸಿಗದ ಹಾಗೆ ನೀರಿನಲ್ಲಿ ಸರ್ರನೆ ಜಾರಿ ದೂರವಾಗುತ್ತಿದ್ದನು. ನೀರಾಟದಲ್ಲಿ ಕೈಗೆ ಸಿಕ್ಕವರನ್ನು ಹಣ್ಣುಗಾಯಿ ನೀರುಗಾಯಿ ಮಾಡುತ್ತಿದ್ದನು.

ಒಂದು ಸಲ ದಾರಿಯಲ್ಲಿ ಕುರುಡನೊಬ್ಬ ಕೋಲು ಊರುತ್ತಾ ನಡೆದುಕೊಂಡು ಬರುತ್ತಿದ್ದ. ಬಾಲಕ ಕಾಶೀನಾಥ ಅವನನ್ನು ನೋಡಿದ. ಆ ಕುರುಡನ ಬಗ್ಗೆ ಬಾಲಕ ಕಾಶೀನಾಥನಿಗೆ ಕುತೂಹಲವುಂಟಾಯಿತು. ಕಣ್ಣು ಕಾಣದಿದ್ದರೂ ಈತ ಹೇಗೆ ದಾರಿ ಬಿಡದೆ ನಡೆದುಕೊಂಡು ಹೋಗುತ್ತಾನೆ ಎಂದು ಆಶ್ಚರ್ಯ ಪಟ್ಟನು. ಈ ಕುರುಡನನ್ನು ಪರೀಕ್ಷಿಸಿ ನೋಡಬೇಕೆಂದು ಯೋಚಿಸಿದನು. ಕೂಡಲೆ ಪಕ್ಕದಲ್ಲಿದ್ದ ಮುಳ್ಳಿನ ಪೊದೆಯೊಂದನ್ನು ತಂದು ಆ ಕುರುಡ ನಡೆದುಕೊಂಡು ಬರುತ್ತಿದ್ದ ದಾರಿಯ ಮೇಲೆ ಇಟ್ಟನು. ಆದರೆ ಆ ಕುರುಡ ದಾರಿಯ ಮೇಲಿಟ್ಟ ಮುಳ್ಳನ್ನು ತುಳಿಯದೆ ಹಾಗೇ ನಡೆದು ದಾಟಿಕೊಂಡು ಹೋದನು. ಆಗ ಕುರುಡರು ಎಷ್ಟು ಸೂಕ್ಷ್ಮಮತಿಗಳಾಗಿರುತ್ತಾರೆಂದು ಬಾಲಕ ಕಾಶೀನಾಥನಿಗೆ ಆಶ್ಚರ್ಯವಾಯಿತಂತೆ. ಆದರೆ ಮುಂದೊಂದು ದಿನ ತಾನೂ ಕುರುಡನಾಗುತ್ತೇನೆಂಬ ಕಲ್ಪನೆ ಆಗ ಕಾಶೀನಾಥನಿಗೆ ಇರಲಿಲ್ಲ.

ಕಾಶೀನಾಥ ಗವಾಯಿಗಳು ಚಿಕ್ಕವರಾಗಿದ್ದಾಗ ಆಗಿನ್ನು ಹಿಲಾಲಪೂರದಲ್ಲಿ ಶಾಲೆ ಇರಲಿಲ್ಲ. ಓದು ಕಲಿಯಬೇಕಾದರೆ ಪಕ್ಕದ ಹಳ್ಳಿ ಹಳ್ಳಿಖೇಡ (ಬಿ), ಇಲ್ಲವೆ ಖೇಣಿ ರಂಜೋಳಕ್ಕೆ ಹೋಗಬೇಕಾಗುತ್ತಿತ್ತು. ಆಗಿನ ಜನ ಹೆಚ್ಚಾಗಿ ಖಾಸಗಿ ಶಾಲೆಯನ್ನು ಅವಲಂಬಿಸಿದ್ದರು. ಮೋಡಿ ಇಲ್ಲವೆ ಉರ್ದುವಿನಲ್ಲಿ ಕಲಿಯುತ್ತಿದ್ದರು. ಅದು ಕೂಡ ಉಚ್ಚವರ್ಗದ ಶ್ರೀಮಂತರ ಮಕ್ಕಳು ಮಾತ್ರ ಶಿಕ್ಷಣ ಕಲಿಯಬಹುದಾಗಿತ್ತು. ಅಸ್ಪೃಶ್ಯರಿಗೆ ಶಿಕ್ಷಣ ಕನಸಿನ ಮಾತಾಗಿತ್ತು. ಕಾಶೀನಾಥರ ತಂದೆ ಕಾಳಪ್ಪನಿಗೆ ತನ್ನ ಮಗ ಶಿಕ್ಷಣ ಪಡೆಯಬೇಕೆಂಬ ಬಯಕೆಯೇನೂ ಇರಲಿಲ್ಲ. ತಾನು ಊರಿನ ಗೌಡರ ಹೊಲದಲ್ಲಿ ದುಡಿಯಲು ನೌಕರಿ ಇರುತ್ತಿದ್ದನು. ಮಗನು ದೊಡ್ಡವನಾಗಿ ತನ್ನ ಹಾಗೆ ಗೌಡರಲ್ಲಿ ಚಾಕರಿ ಮಾಡಿದರೆ ಸಾಕೆಂದು ಭಾವಿಸಿದನು. ಆದರೆ ಚಂದನಕೇರಿಯ ಅಜ್ಜ ಬಸಪ್ಪನಿಗೆ ಮೊಮ್ಮಗನ ಬಗ್ಗೆ ಕನಸುಗಳಿದ್ದವು; ಅವನು ಓದಲಿ ಎಂಬ ಆಶೆಯಿತ್ತು. ಕಾಶೀನಾಥ ಐದಾರು ವರ್ಷದ ಬಾಲಕನಿರಬಹುದು, ಒಂದು ದಿನ ಬಸಪ್ಪಜ್ಜ ಹಿಲಾಲಪೂರಕ್ಕೆ ಬಂದು ಕಾಶೀನಾಥನನ್ನು ಕರೆದುಕೊಂಡು ಚಂದನಕೇರಿಗೆ ಹೋದನು. ಚಂದನಕೇರಿಯಲ್ಲಿ ಕಾಶೀನಾಥನಿಗೆ ಶಾಲೆಗೆ ಸೇರಿಸಲಾಯಿತು. ಅದು ಒಂದು ಖಾಸಗಿಶಾಲೆ. ಊರಿನ ಚಾವಡಿಯಲ್ಲಿ ನಡೆಯುತ್ತಿತ್ತು. ಚಾವಡಿ ಶಾಲೆಗೆ ಸೇರಿದ ಮೊದಲ ಅಸ್ಪೃಶ್ಯರ ಬಾಲಕ ಕಾಶೀನಾಥನಾಗಿದ್ದನು. ಕಾಶೀನಾಥನ ಜೊತೆಗೆ ಇನ್ನೊಬ್ಬ ಅಸ್ಪೃಶ್ಯ ಹುಡುಗ ಚಾವಡಿ ಶಾಲೆಗೆ ಬರುತ್ತಿದ್ದನು. ಆಗಿನ್ನೂ ಜಾತಿಯ ಆಚರಣೆ ಕಠಿಣವಾಗಿದ್ದ ಕಾಲ. ಇತರ ವಿದ್ಯಾರ್ಥಿಗಳಾರೂ ಕಾಶೀನಾಥ ಮತ್ತು ಅವನ ಸಂಗಡಿಗನನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಚಾವಡಿ ಕಟ್ಟೆಯ ಕೆಳಗೆ ಇಬ್ಬರನ್ನೂ ಕೂಡಿಸಲಾಗುತ್ತಿತ್ತು.

ಚಾವಡಿ ಶಾಲೆಯ ಗುರುಗಳು ಕೂಡ ಅಸ್ಪೃಶ್ಯತೆಯನ್ನು ಆಚರಿಸುತ್ತಿದ್ದರು. ಕಾಶೀನಾಥನ ಪಾಟಿಯ ಮೇಲೆ ಅಕ್ಷರಗಳನ್ನು ಬರೆದು ಕೊಟ್ಟಾದ ಮೇಲೆ ಮೈಲಿಗೆ ಆಯಿತೆಂದು ಕೈಯನ್ನು ತೊಳೆದುಕೊಳ್ಳುತ್ತಿದ್ದರು. ಗುರುಗಳು ಇವರಿಗೆ ಹೊಡೆದ ಛಡಿಯನ್ನು ತಿರುಗಿ ತೆಗೆದುಕೊಳ್ಳದೆ ಎಸೆದುಬಿಡುತ್ತಿದ್ದರು. ಕಾಶೀನಾಥನಿಗೆ ಇವುಗಳ ಬಗ್ಗೆ ಗಮನವಿರುತ್ತಿರಲಿಲ್ಲ. ಚಾವಡಿ ಕಟ್ಟೆಯ ಕೆಳಗೆ ಕುಳಿತು, ಗುರುಗಳು ಪಾಟಿಯ ಮೇಲೆ ಹಾಕಿಕೊಟ್ಟ ಅಕ್ಷರಗಳನ್ನು ತೀಡುವುದರಲ್ಲಿ ಮಗ್ನನಾಗಿಬಿಡುತ್ತಿದ್ದನು. ಅದರಲ್ಲಿಯೇ ಆ ಬಾಲಕ ಆನಂದವನ್ನು ಪಡೆಯುತ್ತಿದ್ದನು. ಚಂದನಕೇರಿ ಅಜ್ಜನ ಮನೆಯಲ್ಲಿ ನಾಲ್ಕು ವರ್ಷಗಳಕಾಲ ಉಳಿದುಕೊಂಡು ಚಾವಡಿ ಶಾಲೆಗೆ ಸೇರಿ, ಮೋಡಿಯಲ್ಲಿ ನಾಲ್ಕನೆಯ ತರಗತಿಯವರೆಗೆ ಓದಿ ಕಾಶೀನಾಥ ಬರೆಯಲು ಲೆಕ್ಕಮಾಡಲು ಅರಿತುಕೊಂಡನು.

ಚಂದನಕೇರಿಯ ಅಜ್ಜನ ಮನೆಯ ವಾತಾವರಣ ಬಾಲಕ ಕಾಶೀನಾಥನಿಗೆ ಆನಂದದಾಯಕವಾಗಿತ್ತು. ಅಜ್ಜ ಬಸಪ್ಪನ ಪ್ರೀತಿ, ಸೋದರಮಾವಂದಿರ ಒಡನಾಟ, ಚಾವಡಿ ಶಾಲೆಯ ಓದು, ಹೀಗೆ ಅಲ್ಲಿ ಸಂತೋಷದಿಂದ ಕಾಲ ಕಳೆಯುತ್ತಿದ್ದನು. ಆದರೆ ಇತ್ತ ಹಿಲಾಲಪೂರದಲ್ಲಿ ಕಾಶೀನಾಥನ ತಂದೆ-ತಾಯಿ ಬಡತನದ, ಕಷ್ಟದ ಬದುಕನ್ನು ನಡೆಸುತ್ತಿದ್ದರು. ಕಾಶೀನಾಥನ ನಂತರ ಅವರು ಮತ್ತೆರಡು ಮಕ್ಕಳನ್ನು ಪಡೆದರು. ಸಂಸಾರ ದೊಡ್ಡದಾಯಿತು. ಖರ್ಚು ಹೆಚ್ಚಾಯಿತು. ಒಬ್ಬರ ದುಡಿಮೆಯಿಂದಲೇ ಸಂಸಾರ

ನಡೆಸುವುದು ಕಷ್ಟವಾಯಿತು. ಈಗ ಕಾಶೀನಾಥ ಬೆಳೆದು ಸ್ವಲ್ಪ ದೊಡ್ಡವನಾಗಿದ್ದ. ಅವನನ್ನು ಎಲ್ಲಿಯಾದರೂ ದುಡಿಯಲು ಇಟ್ಟರೆ ಅನುಕೂಲವಾಗುವುದೆಂದು ಬಗೆದು ಕಾಶೀನಾಥನನ್ನು ಕರೆದುಕೊಂಡು ಹೋಗಲು ತಂದೆ ಚಂದನಕೇರಿಗೆ ಬಂದನು. ಅಜ್ಜ ಬಸಪ್ಪ ಬೇಡವೆಂದರೂ ಕೇಳದೆ ಕಾಳಪ್ಪ ಮಗನನ್ನು ಒತ್ತಾಯಪೂರ್ವಕವಾಗಿ ಕರೆದುಕೊಂಡು ಹಿಲಾಲಪೂರಕ್ಕೆ ತಂದನು. ಆ ಎಳೆಯ ಬಾಲಕ ಕಾಶೀನಾಥನನ್ನು ಹಿಲಾಲಪೂರದ ಶೀಲನಬಿ ಎಂಬುವರ ಹತ್ತಿರ ದನಕಾಯಲು ನೌಕರಿ ಇಟ್ಟನು. ಇಲ್ಲಿಗೆ ಕಾಶೀನಾಥನ ಓದು ಕೊನೆಗೊಂಡಿತ್ತು. ಶೀಲನಬಿಯಲ್ಲಿ ಒಂದು ವರ್ಷಕಾಲ ನಿಷ್ಠೆಯಿಂದ ದುಡಿದನು.

ಮುಂದೆ ಅದೇ ಊರಿನ ರಡ್ಡೇರ ಶಿವಮೂರ್ತಿಯವರ ಹತ್ತಿರ ಕಾಶೀನಾಥನನ್ನು ದನಕಾಯಲು ನೌಕರಿ ಇಡಲಾಯಿತು. ವಾರ್ಷಿಕ ೫-೧೦ ರೂಪಾಯಿ ಸಂಬಳ ತೆಗೆದುಕೊಂಡು, ಕಾಶೀನಾಥ ದನಗಾಯಿಯಾಗಿ ದುಡಿಯತೊಡಗಿದನು. ದಿನನಿತ್ಯ ಶಿವಮೂರ್ತಿಯ ಮನೆಯವರು ನೆಹರಿ ಎಂದು ತಂಗಳ ರೊಟ್ಟಿ, ಪಲ್ಯ ಕೊಡುತ್ತಿದ್ದರು. ದನಕಾಯಲು ಇಡುವಾಗಲೇ ನೆಹರಿ ರೊಟ್ಟಿ ಕೊಡಬೇಕೆಂದು ಮಾತಾಡಿಯೇ ಇಡುತ್ತಿದ್ದರು. ಬಾಲಕ ಕಾಶೀನಾಥ ಶಿವಮೂರ್ತಿ ಸಾಹುಕಾರರ ಕೊಟ್ಟಿಗೆಯ ದನಗಳನ್ನು ಹೊಡೆದು ಕೊಂಡು ಬಂದು, ಬಯಲಲ್ಲಿ ಮೇಯಲು ಬಿಟ್ಟು, ತಾನೂ ಅವರು ಕೊಟ್ಟ ತಂಗಳ ರೊಟ್ಟಿಯನ್ನು ಬಿಚ್ಚಿ ತಿನ್ನುತ್ತಿದ್ದನು. ದನಗಳೊಂದಿಗೆ ಆ ಪ್ರಕೃತಿಯ ಮಡಿಲಲ್ಲಿ ಆನಂದದಿಂದ ನಲಿಯುತ್ತಿದ್ದನು. ಇತರ ದನಗಾಯಿಗಳೊಂದಿಗೆ ಸೇರಿ ಚಿಣಿ, ನೀರಾಟ ಆಡುತ್ತಿದ್ದನು.

ತಾನು ದನಕಾಯಲು ನೌಕರಿ ಉಳಿದ ರಡ್ಡೇರ ಶಿವಮೂರ್ತಿಯವರ ಮನೆಯಲ್ಲಿಯೇ ಕಾಶೀನಾಥರ ತಾಯಿ ಶಾಂತಾಬಾಯಿ ಹೆಂಡಿ (ಸೆಗಣಿ) ಕಸ ತೆಗೆಯುವುದು ಮಾಡುತ್ತಿದ್ದಳು. ತಮ್ಮ ಮನೆಯ ಹೆಂಡಿಹೊಲತಿಯ ಮಗನೆಂಬ ಕಾರಣಕ್ಕಾಗಿಯೂ, ಹುಡುಗನ ನಿಷ್ಠೆಯ ದುಡಿಮೆಯ ಕಾರಣಕ್ಕಾಗಿಯೂ ದನಗಾಯಿ ಕಾಶೀನಾಥನನ್ನು ಶಿವಮೂರ್ತಿಯ ಮನೆಯವರು ಅಕ್ಕರೆಯಿಂದ ಕಾಣುತ್ತಿದ್ದರು. ಆಗೊಮ್ಮೆ ಈಗೊಮ್ಮೆ ಉಡಲು ಹಳೆಯ ಬಟ್ಟೆ, ಹಾಕಿಕೊಳ್ಳಲು ಹಳೆ ಚಪ್ಪಲಿಯನ್ನು ಕೊಡುತ್ತಿದ್ದರು. ತನ್ನ ಮೈ ಅಳತೆಗೆ ಅವು ಸರಿ ಹೊಂದದಿದ್ದರೂ ಹೊಸ ಬಟ್ಟೆಯನ್ನೆಂದೂ ಕಾಣದ ಬಾಲಕ ಕಾಶೀನಾಥ ಅವುಗಳನ್ನೇ ಧರಿಸಿಕೊಂಡು ಆನಂದದಿಂದ ಹಿಗ್ಗುತ್ತಿದ್ದನು.

ಹಿಲಾಲಪೂರದಲ್ಲಿ ಆಗಾಗ ಕೋಲಾಟ, ಬಯಲಾಟ, ಭಜನೆ ನಡೆಯುತ್ತಿದ್ದವು. ಹಬ್ಬ-ಉತ್ಸವಗಳು ಜರುಗುತ್ತಿದ್ದವು; ಮೋಹರಂ ಆಚರಣೆಯೂ ನಡೆಯುತ್ತಿತ್ತು. ಇವೆಲ್ಲ ಬಾಲಕ ಕಾಶೀನಾಥನ ಮನಸ್ಸಿನ ಮೇಲೆ ಸಾಕಷ್ಟು ಪ್ರಭಾವ ಬೀರಿದವು. ಆತ ಹಾಡುಗಾರಿಕೆ ಹಾಗೂ ಸಂಗೀತದಲ್ಲಿ ಬಾಲ್ಯದಿಂದಲೂ ಆಸಕ್ತಿಯುಳ್ಳವನಾಗಿದ್ದನು. ಆಗ ಸಿರಕಟನಳ್ಳಿಯ ಅಮೀರಲಿ ಮಾಸ್ತರ ಬಯಲಾಟ ಕಲಿಸಲೆಂದು ಹಿಲಾಲಪೂರಕ್ಕೆ ಬರುತ್ತಿದ್ದರು. ಅವರ ಗಾಯನವನ್ನು ಬಾಲಕ ಕಾಶೀನಾಥ ಮೈಮರೆತು ಆಲಿಸುತ್ತಿದ್ದನು. ತಬಲ, ಹಾರ್ಮೋನಿಯಂ ನುಡಿಸುವುದನ್ನು ಕುತೂಹಲದಿಂದ ನೋಡುತ್ತ ನಿಲ್ಲುತ್ತಿದ್ದನು. ಮೋಹರಂ ನಡೆಯುವಲ್ಲಿಗೂ ಹೋಗಿ ಅಲಾಯಿ ಕುಣಿವುದನ್ನು ನೋಡುತ್ತಿದ್ದನು;

ತಾನೂ ಕುಣಿಯುತ್ತಿದ್ದನು. ಕಾಶೀನಾಥನಿಗೆ ಚಿಕ್ಕಂದಿನಲ್ಲಿಯೇ ಸಂಗೀತ ಕಲಿಯಬೇಕೆಂಬ ಆಶೆ ಮೊಳೆಯಿತು. ಬಾರಿಸಲು ವಾದ್ಯ ಸಿಗದಿದ್ದಾಗ ಕಾಲನ್ನೋ ಹೊಟ್ಟೆಯನ್ನೋ ಬಾರಿಸಿಕೊಳ್ಳುತ್ತಿದ್ದನು. ಸತ್ತ ದನದ ಚರ್ಮ ತಂದು ಸ್ವಚ್ಛಗೊಳಿಸಿ ಗಡಿಗೆ ಬಾಯಿಗೆ ಅಂಟಿಸಿ, ಬಾರಿಸಲು ಧಮ್ಮಡಿ ಮಾಡಿಕೊಳ್ಳುತ್ತಿದ್ದನು.

ಊರಲ್ಲಿ ವಿಜಯದಶಮಿ, ಕಾರ ಹುಣ್ಣಿಮೆ, ನಾಗರ ಪಂಚಮಿ, ಮೋಹರಂ, ಹೋಳಿ, ಯುಗಾದಿ ಮುಂತಾದ ಹಬ್ಬಗಳನ್ನು ವಿಶೇಷವಾಗಿ ಆಚರಿಸಲಾಗುತ್ತಿತ್ತು. ಹೊಲಗೇರಿಯ ಜನ ರಾತ್ರಿ ಊಟವಾದ ಮೇಲೆ ಮರಗೆಮ್ಮನ ಗುಡಿಯ ಹತ್ತಿರ ಸೇರಿ ಹರಟೆ ಹೊಡೆಯುತ್ತಿದ್ದರು. ಬಾಲಕ ಕಾಶೀನಾಥ ಅವರ ಮಾತುಗಳನ್ನು ಆಲಿಸುತ್ತಿದ್ದನು. ಅಂದಿನ ದಿನಗಳಲ್ಲಿ ಸುತ್ತ ಅನೇಕ ಹಳ್ಳಿಗಳಲ್ಲಿ ಲಕ್ಷ್ಮಿ, ದ್ಯಾವಮ್ಮಾ, ಮರಗೆಮ್ಮಾ ಮೊದಲಾದ ದೇವತೆಗಳ ಕಾರ್ಯಗಳು[೧] ನಡೆಯುತ್ತಿದ್ದವು. ದೇವರ ಮುಂದೆ ಕೋಣ ಕುರಿಗಳನ್ನು ಬಲಿಕೊಟ್ಟು ಕಾರ್ಯವನ್ನು ಆಚರಿಸಲಾಗುತ್ತಿತ್ತು. ಹಿಲಾಲಪೂರದ ಹತ್ತಿರವಿರುವ ಡಾಕುಳಗಿಯ ಲಕ್ಷ್ಮಿದ್ಯಾವಮ್ಮನ ಕಾರ್ಯ ತುಂಬ ಪ್ರಸಿದ್ಧವಾಗಿತ್ತು. ಆ ಕಾರ್ಯವನ್ನು ನೋಡಲು ಕಾಶೀನಾಥನ ತಂದೆ ಕಾಳಪ್ಪ ಮಗನನ್ನು ಹೆಗಲ ಮೇಲೆ ಕೂಡಿಸಿಕೊಂಡು ಹೋಗುತ್ತಿದ್ದನು. ಡಾಕುಳಗಿಯ ಕಾರ್ಯ ಆಚರಣೆಯ ದೃಶ್ಯ ಕಾಶೀನಾಥನ ಸ್ಮೃತಿಪಟಲದಲ್ಲಿ ಅಚ್ಚಳಿಯದೆ ಶಾಶ್ವತವಾಗಿ ಉಳಿದುಕೊಂಡಿತ್ತು. ಡಾಕುಳಗಿಯ ಕಾರ್ಯ ಆಚರಣೆಯ ಬಗ್ಗೆ ಅವರು ಮತ್ತೆ ಮತ್ತೆ ಹೇಳುತ್ತಿದ್ದುದುಂಟು. ಸುಮಾರು ಎರಡು ಮೂರು ವರ್ಷಗಳವರೆಗೆ ದನಗಾಯಿಯಾಗಿ ಕಾಲ ಕಳೆದ ಬಾಲಕ ಕಾಶೀನಾಥ, ಹಿಲಾಲಪೂರದ ಜನಜೀವನದೊಂದಿಗೆ ಬೆರೆತು ಹೋದನು.

ಕಾಶೀನಾಥ ಚಿಕ್ಕವನಾಗಿದ್ದ ಆ ದಿನಗಳಲ್ಲಿ ಸಿಡುಬು (ದೇವಿ), ಕಾಲರಾ, ಮಲೇರಿಯಾ, ಪ್ಲೇಗ್ ರೋಗಗಳು ಮಾರಣಾಂತಿಕವಾಗಿದ್ದವು. ಅವುಗಳಿಗೆ ಚಿಕಿತ್ಸೆ ಇರಲಿಲ್ಲ. ಅವು ಸರದಿಯ ಪ್ರಕಾರ ಒಂದರ ನಂತರ ಒಂದು ಬಂದು, ಜನರನ್ನು ಭೀಕರವಾಗಿ ಕಾಡುತ್ತಿದ್ದವು. ಜನಜೀವನವನ್ನೇ ಅಲ್ಲೋಲಕಲ್ಲೋಲ ಮಾಡುತ್ತಿದ್ದವು. ೧೯೪೨-೪೩ರ ಸಂದರ್ಭದಲ್ಲಿ ಬೀದರ ಜಿಲ್ಲೆಯ ತುಂಬೆಲ್ಲ ಸಿಡುಬು ರೋಗ ವ್ಯಾಪಕವಾಗಿ ಹರಡಿಕೊಂಡಿತ್ತು. ಈ ರೋಗ ತಗುಲಿ ಹಲವರು ಅಂಗವಿಕಲರಾದರು. ಕಾಶೀನಾಥ ಗವಾಯಿಗಳ ಕುಟುಂಬದಲ್ಲಿ ಈ ರೋಗ ಕಾಣಿಸಿಕೊಂಡಿತು. ಕಾಶೀನಾಥರ ತಂಗಿ ಲಕ್ಷ್ಮಿಗೆ ಮೊದಲು ತಗುಲಿದ ರೋಗ, ನಂತರ ಕಾಶೀನಾಥನಿಗೆ ಅಂಟಿಕೊಂಡಿತ್ತು.

ಲಕ್ಷ್ಮಿಗೆ ಅಂಟಿಕೊಂಡಿದ್ದ ರೋಗ ಬೇಗನೆ ಗುಣಮುಖವಾಯಿತು. ಆದರೆ ಕಾಶೀನಾಥನ ರೋಗ ಮಾತ್ರ ವಾಸಿಯಾಗಲಿಲ್ಲ. ಕಾಶೀನಾಥನ ಮೈಮೇಲೆಲ್ಲ ದೊಡ್ಡ ದೊಡ್ಡ ಗುಳ್ಳೆಗಳು ಕಾಣಿಸಿಕೊಂಡವು. ಅವುಗಳ ಜೊತೆಗೆ ಉರಿ, ಚಳಿ, ವಿಪರೀತ ಯಾತನೆ. ಯಾತನೆ ತಾಳಲಾರದೆ ಕಾಶೀನಾಥ ಮೈಯೆಲ್ಲ ಪರಚಿಕೊಂಡನು; ರಕ್ತ ಸೋರತೊಡಗಿತ್ತು. ಸಿಡುಬು ಕ್ರಮೇಣ ಕಣ್ಣಿಗಿಳಿದು ಎರಡೂ ಕಣ್ಣುಗಳು ಮಂಕಾದವು.

---

೧. ಕಾರ್ಯ: ದೇವರ ಮುಂದೆ ಪ್ರಾಣಿಗಳನ್ನು ಬಲಿ ಕೊಡುವ ಒಂದು ಧಾರ್ಮಿಕ ಆಚರಣೆ.

ಈ ವಿಷಯ ಚಂದನಕೇರಿಯಲ್ಲಿದ್ದ ಅಜ್ಜ ಬಸಪ್ಪನಿಗೆ ತಿಳಿಯಿತು. ಅವನು ತನ್ನ ಮಕ್ಕಳಾದ ಮಸ್ತಾನಪ್ಪ, ದೌಲಪ್ಪರನ್ನು ಕರೆದುಕೊಂಡು ಧಾವಿಸಿ ಹಿಲಾಲಪೂರಕ್ಕೆ ಬಂದನು.

ಹೇಗಾದರೂ ಮಾಡಿ ಮೊಮ್ಮಗನ ಕಣ್ಣುಗಳು ಉಳಿಸಿಕೊಳ್ಳಬೇಕೆಂದು ಬಸಪ್ಪ ನಿರ್ಧರಿಸಿದನು. ಆಗ ಹೈದ್ರಾಬಾದದಿಂದ ನೇತ್ರತಜ್ಞರೊಬ್ಬರು ವಾರಕ್ಕೊಮ್ಮೆ ಬೀದರಕ್ಕೆ ಬಂದು ಹೋಗುತ್ತಿದ್ದರು. ಕಾಶೀನಾಥನನ್ನು ಅಲ್ಲಿಗೆ ಕರೆದುಕೊಂಡು ಹೋಗಲು ನಿರ್ಧರಿಸಲಾಯಿತು. ಒಂದು ತೊಟ್ಟಿಲಿನಲ್ಲಿ ಕಾಶೀನಾಥನನ್ನು ಕೂಡಿಸಿ, ಅದರ ನಾಲ್ಕು ಕಡೆಗೆ ಉದ್ದನೆಯ ಕಟ್ಟಿಗೆಗಳನ್ನು ಕಟ್ಟಿ, ಪಲ್ಲಕ್ಕಿಯಂತೆ ಮಾಡಿ, ಅದನ್ನು ಅಜ್ಜ, ಸೋದರ ಮಾವಂದಿರಾದ ಮಸ್ತಾನಪ್ಪ ದೌಲಪ್ಪರು ಹೆಗಲ ಮೇಲೆ ಹೊತ್ತು, ನಡೆದುಕೊಂಡೇ ಬೀದರನ್ನು ತಲುಪಿದರು. ಇವರು ಬೀದರ ತಲುಪಲು ತಡವಾಗಿದ್ದರಿಂದ ಹೈದ್ರಾಬಾದದಿಂದ ಬಂದಿದ್ದ ನೇತ್ರತಜ್ಞರು ಹೊರಟು ಹೋಗಿದ್ದರು. ವಿಧಿಯಿಲ್ಲದೆ ಇವರು ವಾಪಸು ಊರಿಗೆ ಬರಬೇಕಾಯಿತು. ಹಿಲಾಲಪೂರಕ್ಕೆ ಬಂದ ಮೇಲೆ ಜಾನಪದ ವೈದ್ಯರು ಹೇಳಿದ ಔಷಧಗಳನ್ನೆಲ್ಲ ಹಾಕಿದರು. ಸಿಕ್ಕ ಸಿಕ್ಕ ಗಿಡಮೂಲಿಕೆಗಳನ್ನು ಸೋಸಿ ಹಾಕಲಾಯಿತು. ಯಾರೋ ಒಬ್ಬರು ವಟವಟ್ಯಾನ (ಸಸ್ಯ) ಬೇರು[೨] ಸೋಸಿ ಹಾಕಲು ಹೇಳಿದರಂತೆ, ಅದನ್ನೂ ಮಾಡಿದರು. ಏನೇ ಔಷಧ ಹಾಕಿದರೂ ಕಣ್ಣುಗಳ ದೃಷ್ಟಿ ತಿರುಗಿ ಬರಲೇ ಇಲ್ಲ. ಕಣ್ಣುಗಳು ಪೂರ್ತಿಯಾಗಿ ಕೆಟ್ಟುಹೋದವು. ಕಣ್ಣಿನ ಗುಡ್ಡೆಗಳು ಕೊಳೆತವು. ಕಾಶೀನಾಥ ೧೦-೧೨ ವರ್ಷದವನಾಗಿರಬಹುದು, ತನ್ನ ಎರಡೂ ಕಣ್ಣುಗಳನ್ನು ಕಳೆದುಕೊಂಡು ಶಾಶ್ವತವಾಗಿ ಅಂಧನಾಗಿಬಿಟ್ಟನು.

### ಅಂಧಬಾಲಕನ ಕಷ್ಟದ ಬದುಕು

ಕಣ್ಣು ಹೋದ ಮೇಲೆಯೂ ಕಾಶೀನಾಥ ಗವಾಯಿಗಳು ಒಂದು ವರ್ಷಕಾಲ ಆರೈಕೆ ಮಾಡಿಕೊಂಡರು. ಕುರುಡುತನದ ಕಷ್ಟದಾಯಕ ಜೀವನ ಸಾಗಿಸುವುದು ಹೇಗೆಂದು ನೆನೆದು ಚಿಂತೆಗೀಡಾದರು. ಬದುಕು ಶೂನ್ಯವಾಯಿತೆಂದು ಆ ಅಂಧಬಾಲಕ ಕಾಶೀನಾಥ ಭಾವಿಸಿದನು. (ಫಾಸಿ) ನೇಣು ಹಾಕಿಕೊಂಡು ಸಾಯುವ ಯೋಚನೆಯೂ ಮಾಡಿದನು. ಈ ಮಧ್ಯೆ ಒಂದು ಸಲ ಸಾವಿನ ದವಡೆಯಿಂದ ಸ್ವಲ್ಪದರಲ್ಲಿಯೇ ಪಾರಾಗಿದ್ದನು.

ಕುರುಡನಾದ ಮೇಲೆ ಕೆಲವು ದಿನ ಹಿಲಾಲಪೂರದ ಲಾಲಪ್ಪ ಪವಾರನ ಜೊತೆಗೆ ಇರತೊಡಗಿದ್ದನು. ಲಾಲಪ್ಪ ಪವಾರ ವಯಸ್ಸಿನಲ್ಲಿ ಕಾಶೀನಾಥನಕ್ಕಿಂತ ದೊಡ್ಡವನಾಗಿದ್ದನು. ಆತ ಮುಕ್ತಲರ ತೋಟದಲ್ಲಿ ಮಟ್ಟಿ ಹೊಡೆಯಲು ನೌಕರಿ ಇದ್ದನು. ಕಾಶೀನಾಥ ಅವನ ಸಂಗಡ ತೋಟಕ್ಕೆ ಹೋಗುತ್ತಿದ್ದನು. ಒಮ್ಮೆ ಮುಕ್ತಲರ ತೋಟದ ಭಾವಿಯ ಹತ್ತಿರ ಕಾಶೀನಾಥ ಕುಳಿತಿದ್ದನು. ಅಲ್ಲಿಗೆ ದನಗಾಯಿ ಕಾಶೀನಾಥನ ಗೆಳೆಯರು ಬಂದರು. ಕಾಶೀನಾಥನನ್ನು ಮನೆಗೆ ಕರೆದುಕೊಂಡು ಹೋಗಬೇಕೆಂದು ಸ್ವಲ್ಪ ದೂರದಿಂದಲೆ 'ಏ... ಕಾಶೀನಾಥ ಮನಿಗಿ ಬರ್ತಿಯೇನು?' ಎಂದು ಕೂಗಿ ಕರೆದರು. ಕಾಶೀನಾಥ ಬರುತ್ತೇನೆಂದು ಅವಸರದಲ್ಲಿ ಎದ್ದು ಹೊರಟ, ಕಣ್ಣು ಕಾಣದ ಆ ಕುರುಡ ಬಾಲಕ ದಾರಿತಪ್ಪಿ ಹತ್ತಿರದ

---

೨. ಒಂದು ಗಿಡಮೂಲಿಕೆ

ಬಾವಿಯಲ್ಲಿ ಬಿದ್ದು ಬಿಟ್ಟನು. 'ದುಡುಂ' ಎಂದು ದೊಡ್ಡ ಶಬ್ದವಾಯಿತು. ಕೊಟ್ಟಿಗೆಯಲ್ಲಿ ಎತ್ತುಗಳಿಗೆ ಮೇವು ಹಾಕುತ್ತಿದ್ದ ಲಾಲಪ್ಪ ಪವಾರ ಶಬ್ದಕೇಳಿ ಗಾಬರಿಯಾದನು. ತಕ್ಷಣವೇ ಬಾವಿಗೆ ಜಿಗಿದು ಕಾಶೀನಾಥನನ್ನು ಉಳಿಸಿದನು. ಅವನ ಮೈಯನ್ನು ಕಾಯಿಸಿ ಧೈರ್ಯ ಹೇಳಿ ಮನೆಗೆ ತಂದು ಬಿಟ್ಟನು. ಮುಂದೆ ಕಾಶೀನಾಥನು ಲಾಲಪ್ಪ ಪವಾರನ ಜೊತೆಗೆ ಹೋಗುವುದನ್ನು ಬಿಟ್ಟನು.

ಚಂದನಕೇರಿಯ ಬಸಪ್ಪ ಅಜ್ಜನಿಗೆ ಮೊಮ್ಮಗನ ಕುರುಡುತನದ ನೋವು ತೀವ್ರವಾಗಿ ಕಾಡಿತ್ತು. ಕಾಶೀನಾಥನ ಭವಿಷ್ಯದ ಬಗ್ಗೆ ಚಿಂತೆಯುಂಟಾಯಿತು. ಕಾಶೀನಾಥನನ್ನು ಪುನಃ ಚಂದನಕೇರಿಗೆ ಕರೆದುಕೊಂಡು ಹೋದನು. ಅಜ್ಜ ಬಸಪ್ಪನಿಗೆ ಬಯಲಾಟದ ಪರಿಚಯವಿದ್ದಿತ್ತು. ಸಿಂಗ್, ಕೊಳಲು, ಧಮ್ಮಡಿ ನುಡಿಸಲು ಬರುತ್ತಿತ್ತು. ಕಾಶೀನಾಥನಿಗೂ ಸಿಂಗ್, ಕೊಳಲು ನುಡಿಸುವುದನ್ನು ಕಲಿಸಿಕೊಟ್ಟನು. ಬಯಲಾಟದಲ್ಲಿ ಸುರುತಿ ಪಾತ್ರ ವೊಂದನ್ನು ಕೊಟ್ಟನು. ಅದನ್ನು ಅಂಧಬಾಲಕ ಯಶಸ್ವಿಯಾಗಿ ನಿರ್ವಹಿಸಿದನು. ಹೀಗೆ ತನ್ನೂರಿನಿಂದ ಅಜ್ಜನ ಊರಿಗೆ, ಅಜ್ಜನ ಊರಿನಿಂದ ತನ್ನೂರಿಗೆ ಕಾಶೀನಾಥನ ಅಲೆದಾಟ ಆರಂಭವಾಯಿತು. ಹಲವಾರು ಹಾಡುಗಳನ್ನು ಕಲಿತು ಹಾಡತೊಡಗಿದನು. ಅವನ ಹಾಡುಗಾರಿಕೆಯ ಕಲೆ ಕೇಳುಗರ ಗಮನ ಸೆಳೆಯತೊಡಗಿತ್ತು. ಕೈಯಲ್ಲಿ 'ಧಮ್ಮಡಿ' ಹಿಡಿದು ಬಾರಿಸುತ್ತಾ ಹಾಡುವ ಕಲೆಯನ್ನು ರೂಢಿಸಿಕೊಂಡನು.

ಕಾಶೀನಾಥ ಎಲ್ಲಿಗಾದರೂ ಹೋಗಬೇಕಾದರೆ ಬೇರೆಯವರನ್ನು ಅವಲಂಬಿಸ ಬೇಕಾಗುತ್ತಿತ್ತು. ಇತರರ ಕೈಹಿಡಿದುಕೊಂಡು ನಡೆಯಬೇಕಾಗಿತ್ತು. ಇಂತಹ ಸಂದರ್ಭಗಳಲ್ಲಿ ಗವಾಯಿಗಳ ಸಹಾಯಕ್ಕೆ ಬಂದವಳು ಅವರ ಹಿರಿಯ ತಂಗಿ ಲಕ್ಷ್ಮೀ. ಹಲವಾರು ವರ್ಷಗಳವರೆಗೆ ಅಂದರೆ ತಾನು ಮದುವೆಯಾಗಿ ಗಂಡನ ಮನೆಗೆ ಹೋಗುವವರೆಗೆ ಲಕ್ಷ್ಮೀ ಗವಾಯಿಗಳ ಕೈಹಿಡಿದು ಕರೆದುಕೊಂಡು ತಿರುಗಾಡಿದಳು. ಪ್ರತಿಯೊಂದಕ್ಕೂ ಗವಾಯಿಗಳು ಲಕ್ಷ್ಮಿಯನ್ನು ಅವಲಂಬಿಸಬೇಕಾಯಿತು. ಲಕ್ಷ್ಮಿಯ ಈ ಉಪಕಾರವನ್ನು ಗವಾಯಿಗಳು ಕೊನೆಯವರೆಗೂ ಕೃತಜ್ಞತೆಯಿಂದ ಸ್ಮರಿಸುತ್ತಿದ್ದರು.

ಕಣ್ಣು ಕಳೆದುಕೊಂಡ ಮೇಲೆ ಬಾಲಕ ಕಾಶೀನಾಥ ಪಡಬಾರದ ಕಷ್ಟವನ್ನು ಪಟ್ಟನು. ಮನೆಯಲ್ಲಿ ಕಿತ್ತು ತಿನ್ನುವ ಬಡತನವಿತ್ತು. ತಂದೆ-ತಾಯಿ, ನಾಲ್ವರು ತಂಗಿಯರು, ಒಬ್ಬ ತಮ್ಮ, ಕುಟುಂಬ ದೊಡ್ಡದಿದ್ದಿತ್ತು. ಇವರ ಪಾಲಿಗೆ ಅರ್ಧ ಎಕರೆ ಹಡೋಳಿ ಹೊಲ ಇತ್ತು. ಅದರಲ್ಲಿ ಕಷ್ಟಪಟ್ಟು ಬೇಸಾಯ ಮಾಡಿದರೆ ಬೆಳೆಯುತ್ತಿದ್ದದ್ದು ವರ್ಷಕ್ಕೆ ಎರಡೋ ನಾಲ್ಕೋ ಅಡ್ಡಿ ಜೋಳ ಮಾತ್ರ. ತಂದೆ ಕಾಳಪ್ಪ ಬಹಳ ವರ್ಷಗಳಿಂದ ಶಂಕರರಾವ ಮಾಲಿಗೌಡರ ಹತ್ತಿರ ದುಡಿಯಲು ಇದ್ದನು. ಅವನ ವಾರ್ಷಿಕ ದುಡಿಮೆಯ ಹಣ ಮೂರು-ನಾಲ್ಕು ತಿಂಗಳಿಗೂ ಸಾಕಾಗುತ್ತಿರಲಿಲ್ಲ. ಹೀಗಾಗಿ ಮನೆಯಲ್ಲಿ ದೊಡ್ಡವರು, ಚಿಕ್ಕವರು ಎಲ್ಲರೂ ದುಡಿಯುವುದು ಅನಿವಾರ್ಯವಾಗಿತ್ತು. ಕಾಳಪ್ಪನಿಗೆ ಗೌಡರ ಹೊಲದಲ್ಲಿ ದುಡಿಯುವುದನ್ನು ಬಿಟ್ಟರೆ ಮತ್ತೇನೂ ತಿಳಿದಿರಲಿಲ್ಲ. ಅವನೂ ಒಂದು ಕಣ್ಣಿನಿಂದ ಕುರುಡನಾಗಿದ್ದನು. ಅಷ್ಟೇನೂ ಜಾಣನಾಗಿರಲಿಲ್ಲ. ದಡ್ಡರ ಪೈಕಿಯವನಾಗಿದ್ದನು. ಮಕ್ಕಳನ್ನು ನೋಡಿಕೊಳ್ಳುವುದು, ಸಂತೆಗೆ ಹೋಗಿ ಮನೆಗೆ ಬೇಕಾಗುವ ಸಾಮಗ್ರಿಗಳನ್ನು ಖರೀದಿಸುವುದು

ಇತ್ಯಾದಿಗಳೆಲ್ಲ ತಾಯಿ ಶಾಂತಾಬಾಯಿಯೇ ಮಾಡುತ್ತಿದ್ದಳು. ತಂದೆಗಿಂತ ತಾಯಿ ಶಾಂತಾಬಾಯಿಗೆ ಮನೆಯ ಜವಾಬ್ದಾರಿ ಹೆಚ್ಚಿತು.

ಅಂಧನಾದರೂ ಕಾಶೀನಾಥ ಸುಮ್ಮನೆ ಮನೆಯಲ್ಲಿ ಕೈಕಟ್ಟಿ ಕುಳಿತುಕೊಳ್ಳುತ್ತಿರಲಿಲ್ಲ. ತಂಗಿಯರನ್ನು ಜೊತೆಯಲ್ಲಿ ಕರೆದುಕೊಂಡು ಕೃಷಿಕೂಲಿಗೆ ಹೋಗುತ್ತಿದ್ದನು. ಉದ್ದು, ಹೆಸರು, ಜೋಳದ ಸುಗ್ಗಿಗಳಲ್ಲಿ ಶ್ರಮವಹಿಸಿ ದುಡಿಯುತ್ತಿದ್ದನು. ಕಣ್ಣು ಕಾಣದಿದ್ದರೂ ಕೈಸವರಿ ಉದ್ದು, ಹೆಸರು ಕೊಯ್ಯುತ್ತಿದ್ದನು. ತಂಗಿಯರೊಂದಿಗೆ ಸೇರಿ ಬಡಿದು ರಾಶಿ ಮಾಡುತ್ತಿದ್ದನು. ಹೊತ್ತು ಏರಿದ ಮೇಲೆ ತಾಯಿ ಬುತ್ತಿಯನ್ನು ತೆಗೆದುಕೊಂಡು ಮಕ್ಕಳು ಕೂಲಿಗೆ ಹೋದ ಹೊಲಕ್ಕೆ ಬರುತ್ತಿದ್ದಳು. ಮಧ್ಯಾಹ್ನ ಎಲ್ಲರೂ ಸೇರಿ ಉಣ್ಣುತ್ತಿದ್ದರು. ಬಡಿದು ರಾಶಿ ಮಾಡಿದ ಉದ್ದು, ಹೆಸರಿನಲ್ಲಿ ಕೂಲಿಯನ್ನು ಬಿಟ್ಟು ಕಾಶೀನಾಥ ಒಂದೆರಡು ಅಡ್ಡಿಯವರೆಗೆ ಪ್ರತ್ಯೇಕವಾಗಿ ತೆಗೆದು, ಮುಚ್ಚಿಟ್ಟುಕೊಳ್ಳುತ್ತಿದ್ದನು. ಹೊಲದವರು ನೋಡಿ ಕೇಳಿದರೂ ಕೊಡುತ್ತಿರಲಿಲ್ಲ. 'ಥೋಡೆನೆ ಇಟ್ಕೊಂಡಿದಾರಿ ನಾ ಕೊಡಲ್ಲ' ಎನ್ನುತ್ತಿದ್ದನು. ಹೊಲದವರೂ ಒತ್ತಾಯ ಪಡಿಸುತ್ತಿರಲಿಲ್ಲ. ಬಡ ಕುಟುಂಬ ಹೋಗಲಿ ಬಿಡು ಎಂದು ಉದಾರತೆಯನ್ನು ತೋರುತ್ತಿದ್ದರು. ಬಚ್ಚಿಟ್ಟುಕೊಂಡ ಕಾಳು, ಕೂಲಿಯಿಂದ ಬಂದ ಕಾಳುಗಳನ್ನೆಲ್ಲ ಒಟ್ಟಿಗೆ ಸೇರಿಸಿ, ಗಂಟುಕಟ್ಟಿ, ತಲೆಯ ಮೇಲೆ ಹೊತ್ತುಕೊಂಡು, ತಂಗಿ ಲಕ್ಷ್ಮಿಯ ಕೈಹಿಡಿದುಕೊಂಡು ಎಲ್ಲರನ್ನು ಕರೆದುಕೊಂಡು ಸಾಯಂಕಾಲದ ಹೊತ್ತಿಗೆ ಮನೆ ಸೇರುತ್ತಿದ್ದನು.

ಬಿಳಿಜೋಳದ ಸುಗ್ಗಿಯಲ್ಲೂ ಲಕ್ಷ್ಮಿಯನ್ನು ಕರೆದುಕೊಂಡು ಜೋಳದ ಕಣಕಿ ಕಿತ್ತಲು ಹೋಗುತ್ತಿದ್ದನು. ಇಡೀ ದಿನ ಕಳಕಿ ಕಿತ್ತಿದರೆ, ತೆನೆ ಇರುವ ಕಳಕಿಯನ್ನು ಕೂಲಿ ರೂಪದಲ್ಲಿ ಕೊಡಲಾಗುತ್ತಿತ್ತು. ಕೂಲಿ ಕೊಟ್ಟ ಕಳಕಿಯನ್ನು ಕೈಸವರಿ ನೋಡಿ 'ಯಾಕೊ ಕಳಕಿ ಜರಾನೆ ಕೊಟ್ಟೇರಿ ಗೌಡರೆ' ಎಂದು ಕೇಳುತ್ತಿದ್ದನು. ಆಗ ಹೊಲದವರು ಇನ್ನಷ್ಟು ಕಳಕಿ ಕೊಡುತ್ತಿದ್ದರು. ಅದನ್ನು ಹೊರೆ ಕಟ್ಟಿಕೊಂಡು ಬರುತ್ತಿದ್ದನು. ಹೀಗೆ ಉದ್ದು, ಹೆಸರು, ಬಿಳಿಜೋಳದ ಸುಗ್ಗಿಯ ದಿನಗಳಲ್ಲಿ ಅಂಧಬಾಲಕ ಕಾಶೀನಾಥ ತಾಯಿ-ತಂಗಿಯ ರೊಂದಿಗೆ ಸೇರಿ ಬಿಡುವಿಲ್ಲದೆ ದುಡಿಯುತ್ತಿದ್ದನು. ಎಲ್ಲ ಕೆಲಸ ಅಚ್ಚುಕಟ್ಟಾಗಿ ನಿರ್ವಹಿಸು ತ್ತಿದ್ದನು. ಕಣ್ಣಿಲ್ಲದಿದ್ದರೂ ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಾನೆಂದು ಜನರು ಆಡಿಕೊಳ್ಳುತ್ತಿದ್ದರು.

ಸುಗ್ಗಿಯ ಕಾಲದಲ್ಲಿ ಅಲ್ಪ ಸ್ವಲ್ಪ ಕಾಳು ಸಂಗ್ರಹವಾಗುತ್ತಿತ್ತು. ಆದರೆ ಎಲ್ಲ ಕಾಲವೂ ಸುಗ್ಗಿಯ ಕಾಲ ಇರುವುದಿಲ್ಲ ತಾನೆ? ಸುಗ್ಗಿ ಮುಗಿದ ಕೆಲ ದಿನಗಳ ನಂತರ ಸಂಗ್ರಹಿಸಿದ ಕಾಳೆಲ್ಲ ಬರಿದಾಗುತ್ತಿತ್ತು. ಮತ್ತೆ ಮನೆಯಲ್ಲಿ ಯಥಾ ಸ್ಥಿತಿ; ಹಸಿವಿನಿಂದ ಪರದಾಟ. ಕಾಶೀನಾಥರ ಬಾಲ್ಯಕಾಲದಲ್ಲಿ ಅವರನ್ನು ಅತಿಯಾಗಿ ಕಾಡಿದ್ದೆಂದರೆ ಹಸಿವು ಮತ್ತು ಬಡತನ. ರೊಟ್ಟಿ ಕೂಡ ಅವರಿಗೆ ಅಪರೂಪದ ವಸ್ತುವೇ ಆಗಿತ್ತು. ತಾಯಿ ಶಾಂತಾಬಾಯಿ ರಡ್ಡೇರ ಶಿವಮೂರ್ತಿಯವರ ಮನೆಯ ಹೆಂಡಿ-ಕಸ ತೆಗೆದು ಬರುವಾಗ ಅವರು ಕೊಟ್ಟ ಎರಡು ತಂಗಳ ರೊಟ್ಟಿ, ತಂಗಳ ಪಲ್ಯಾ ಉಡಿಯಲ್ಲಿ ಹಾಕಿಕೊಂಡು ಬರುತ್ತಿದ್ದಳು. ಅದನ್ನೇ ಎಲ್ಲರೂ ತಿನ್ನುತ್ತಿದ್ದರು. 'ಬಹಳ ಕಷ್ಟ ಇತ್ತು. ಉದ್ದಿನ ರೊಟ್ಟಿಯಾದರ ಉದ್ದಿನ

ರೊಟ್ಟಿನೇ, ನೆಂಕಿ ರೊಟ್ಟಿಯಾದರ ನೆಂಕಿ ರೊಟ್ಟಿನೇ ಮಾಡಿ ತಿನ್ನುತ್ತಿದ್ದೆವು. ಸುಗ್ಗಿ ಕಾಲದಾಗ ಜ್ವಾಳದ ರೊಟ್ಟಿ ಕಾಣ್ತಿದ್ದೇವು ಇಲ್ದರ ಇಲ್ಲ. ನುಚ್ಚು ತಿಂದ ಬದುಕಿದ್ದೇವು. ಅದುಬಿ ಹೊಟ್ಟೆ ತುಂಬ ಸಿಗ್ತಿದ್ದಿಲ್ಲ.' ಎಂದು ಗವಾಯಿಗಳ ತಂಗಿ ಲಕ್ಷ್ಮಿ ಆಗಿನ ದಿನಗಳನ್ನು ಬಹಳ ದುಃಖಭರಿತಳಾಗಿ ನೆನಪಿಸಿಕೊಳ್ಳುತ್ತಾಳೆ. ಒಂದು ಗಡಿಗೆಯಲ್ಲಿ ನುಚ್ಚು ಮಾಡಿ ಎಲ್ಲರೂ ಹಂಚಿಕೊಂಡು ಉಣ್ಣುತ್ತಿದ್ದರು. ಕಾಶೀನಾಥನಿಗೆ ತನ್ನ ಪಾಲಿನ ನುಚ್ಚಿನಿಂದ ಹೊಟ್ಟೆ ತುಂಬುತ್ತಿರಲಿಲ್ಲ. ಅದನ್ನರಿತ ತಂಗಿ ಲಕ್ಷ್ಮಿ ತನ್ನ ಪಾಲಿನ ನುಚ್ಚಿನಲ್ಲಿ ಅರ್ಧ ಅಣ್ಣನಿಗೆ ಕೊಡುತ್ತಿದ್ದಳಂತೆ.

ಕಾಶೀನಾಥ ಕುರುಡನಾಗಿದ್ದರೂ ಚುರುಕು ಬುದ್ಧಿಯುಳ್ಳವನಾಗಿದ್ದನು. ಬದುಕುವುದಕ್ಕಾಗಿ ಏನಾದರೊಂದು ಉಪಾಯ ಮಾಡುತ್ತಲೇ ಇರುತ್ತಿದ್ದನು. ನಾಗರ ಪಂಚಮಿ ಹಬ್ಬದ ದಿನ ತಂಗಿ ಲಕ್ಷ್ಮಿಯನ್ನು ಕರೆದುಕೊಂಡು ಬುಟ್ಟಿಯಲ್ಲಿ ಮಣ್ಣು ತೆಗೆದುಕೊಂಡು ಬರುತ್ತಿದ್ದನು. ಅದನ್ನು ಕೆಸರು ಮಾಡಿ, ಹಿಲಾಲಪೂರದ ಹೊಲಗೇರಿಯಲ್ಲಿರುವ ಮರಗೆಮ್ಮನ ಗುಡಿಯ ಮುಂದೆ ಕೆಸರಿನ ಕೃತಕ ಹುತ್ತ ನಿರ್ಮಿಸುತ್ತಿದ್ದರು. ಆ ಹುತ್ತಿನ ಮುಂದೆ ಕೆಸರಿನ ನಾಗಣ್ಣನ ಮೂರ್ತಿಯನ್ನು ಮಾಡಿಟ್ಟು ಅಣ್ಣ–ತಂಗಿ ಸಾಯಂಕಾಲದವರೆಗೂ ಆ ಹುತ್ತಿನ ಮುಂದೆ ಕುಳಿತುಕೊಳ್ಳುತ್ತಿದ್ದರು. ಹೊಲಗೇರಿಯ ಜನರು ನಾಗರ ಅಮವಾಸಿಯ ನಿಮಿತ್ತ ಆ ಹುತ್ತಿಗೆ ಹಾಲೆರೆದು, ನಾಗಣ್ಣನ ಮೂರ್ತಿಯ ಮುಂದೆ ನೈವೇದ್ಯವೆಂದು ಅನ್ನ, ಹೋಳಿಗೆ ಇತ್ಯಾದಿ ಪದಾರ್ಥಗಳನ್ನು ಇಡುತ್ತಿದ್ದರು. ಅಲ್ಲಿ ಸಂಗ್ರಹವಾಗಿದ್ದ ನೈವೇದ್ಯವೆಲ್ಲ ಸೇರಿಸಿದರೆ ಒಂದು ದೊಡ್ಡ ಬುಟ್ಟಿ ತುಂಬುವಷ್ಟಾಗುತ್ತಿತ್ತು. ಅದನ್ನೆಲ್ಲ ಜಮಾಯಿಸಿಕೊಂಡು ಬುಟ್ಟಿ ತುಂಬಿ ಮನೆಗೆ ತರುತ್ತಿದ್ದರು. ಹೀಗೆ ಸಂಗ್ರಹಿಸಿ ತಂದ ಆಹಾರವನ್ನು ೨–೩ ದಿನಗಳವರೆಗೆ ಉಣ್ಣುತ್ತಿದ್ದರು. ಅಂಥ ಕಾಶೀನಾಥನೇ ಹುತ್ತ ಮತ್ತು ನಾಗಣ್ಣನ ಮೂರ್ತಿಯನ್ನು ಮಾಡುತ್ತಿದ್ದನು. ಕಾಶೀನಾಥನಿಗೆ ಬುದ್ಧಿ ತಿಳಿಯುವವರೆಗೂ ಪ್ರತಿವರ್ಷ ಇದೇ ರೀತಿ ಮಾಡಿಕೊಂಡು ಬಂದರು.

ಬಿತ್ತನೆಯ ದಿನಗಳಲ್ಲಿ ಕಾಶೀನಾಥ ಊರಿನ ಶ್ರೀಮಂತರ ಹೊಲಗಳಿಗೆ ಲಕ್ಷ್ಮಿಯನ್ನು ಕರೆದುಕೊಂಡು ಹೋಗುತ್ತಿದ್ದನು. ಬಿತ್ತುವ ಕೂರಿಗೆಯ ಹಾಡನ್ನು ಧಮ್ಮಡಿ ಭಾರಿಸುತ್ತಾ ಹಾಡಿ ಹೇಳುತ್ತಿದ್ದನು. ರೈತರು ಬಿತ್ತಲು ತಂದ ಕಡಲೆ, ಶೇಂಗಾ, ಜೋಳ, ನೆಂಕಿ ಇತ್ಯಾದಿ ಬೀಜಗಳನ್ನು ಕೊಡುತ್ತಿದ್ದರು. ಅವೆಲ್ಲ ಕುಂಚಿಯಲ್ಲಿ ತುಂಬಿಕೊಂಡು ಬರುತ್ತಿದ್ದರು. ಆಗಿನ ಕಾಲದಲ್ಲಿ ಹಿಲಾಲಪೂರದ ಸುತ್ತಮುತ್ತಲಿನ ಅನೇಕ ತೋಟಗಳಲ್ಲಿ ಕಬ್ಬಿನ ಗಾಣ ನಡೆಯುತ್ತಿದ್ದವು. ಕಾಶೀನಾಥ ತಂಗಿಯ ಕೈಹಿಡಿದುಕೊಂಡು ಗಾಣ ಗಾಣ ಅಲೆದಾಡಿ, ಹಾಡಿ, ಕಬ್ಬು, ಬೆಲ್ಲ ಸಂಗ್ರಹಿಸುತ್ತಿದ್ದನು. ಯಾರ ಯಾರ ತೋಟಗಳಲ್ಲಿ ಗಾಣ ನಡೆದಿದೆ ಎಂಬುದನ್ನು ತಿಳಿದುಕೊಂಡು, ತಂಗಿ ಲಕ್ಷ್ಮಿಗೆ ಅಲ್ಲಿಗೆ ಕರೆದುಕೊಂಡು ಹೋಗಲು ಹೇಳುತ್ತಿದ್ದನು. ಗಾಣದಲ್ಲಿ ಕಾಶೀನಾಥನಿಗೆ ನಾಲ್ಕು ಕಬ್ಬು ಸಿಕ್ಕರೆ, ತಂಗಿಗೆ ಎರಡು ಕಬ್ಬು ಸಿಗುತ್ತಿದ್ದವು. ಒಂದೊಂದು ಸಲ ತಂಗಿಗೆ ಏನೂ ಸಿಗುತ್ತಿರಲಿಲ್ಲ. ಆಗ ಲಕ್ಷ್ಮಿ 'ನಮ್ಮಣ್ಣಗ ನಾಕು ಗಳ ಕಬ್ಬು ಕೊಟ್ಟೀರಿ ನನಗ ಎಡ್ಡರ ಕೊಡ್ರಿ' ಎಂದು ಕೇಳುತ್ತಿದ್ದಳು. ಕಾಶೀನಾಥನಿಗೆ ಕುರುಡನೆನ್ನುವ ಕಾರಣಕ್ಕಾಗಿ ಹೆಚ್ಚಿಗೆ ಸಿಗುತ್ತಿತ್ತು. ಆತ ರಾಶಿಯ ಕಣಗಳಿಗೂ ಹೋಗಿ

ರಾಶಿಯಧಾನ್ಯಗಳನ್ನು ಬೇಡಿ ಪಡೆಯುತ್ತಿದ್ದನು. ಒಮ್ಮೊಮ್ಮೆ ಇಡೀ ರಾತ್ರಿಯಲ್ಲ ರಾಶಿ ನಡೆದ ಕಣದಲ್ಲಿಯೇ ಉಳಿದುಕೊಂಡು, ತನ್ನ ಧಮ್ಮಡಿಯೊಂದಿಗೆ ಹಾಡಿ, ಕಥೆ ಹೇಳಿ, ಬೆಳಗು ಮಾಡುತ್ತಿದ್ದನು. ಹೊಲದವರಿಗೂ ಇದರಿಂದ ಸಂತೋಷವಾಗುತ್ತಿತ್ತು; ಧಾನ್ಯವೂ ಹೆಚ್ಚಿಗೆ ಸಿಗುತ್ತಿತ್ತು. ಹೀಗೆ ಸಂಗ್ರಹಿಸಿದ ಬೀಜ, ಕಬ್ಬು, ಬೆಲ್ಲ ತೆಗೆದುಕೊಂಡು ಹೋಗಿ ಕಾಶೀನಾಥರ ತಾಯಿ ಶಾಂತಾಬಾಯಿ ಗುರುವಾರದ ಹಳ್ಳಿಖೇಡದ ಸಂತೆಯಲ್ಲಿ ಮಾರುತ್ತಿದ್ದಳು. ಲಕ್ಷ್ಮಿಯೂ ಕಬ್ಬಿನ ಹೊರೆಯನ್ನು ಹೊತ್ತುಕೊಂಡು ತಾಯಿಯೊಂದಿಗೆ ಹಳ್ಳಿಖೇಡಕ್ಕೆ ಹೋಗುತ್ತಿದ್ದಳು. ಆಗ ದುಡ್ಡಿಗೊಂದು ಕಬ್ಬು ಮಾರಾಟವಾಗುತ್ತಿತ್ತು. ಬಂದ ಹಣದಿಂದ ಉಪ್ಪು ಮೆಣಸಿನಕಾಯಿ, ಎಣ್ಣೆ, ಈರುಳ್ಳಿ ಇತ್ಯಾದಿ ಮನೆಗೆ ಬೇಕಾಗುವ ಪದಾರ್ಥಗಳನ್ನು ಖರೀದಿಸಿಕೊಂಡು ತರುತ್ತಿದ್ದಳು.

ಮುಂದೆ ಕಾಶೀನಾಥ ಬಡತನದ ಕಾರಣಕ್ಕಾಗಿ ಊರಲ್ಲಿ ಭಿಕ್ಷೆ ಬೇಡಲು ಆರಂಭಿಸಿದನು. ತಂಗಿ ಲಕ್ಷ್ಮಿಯ ಕೈಹಿಡಿದುಕೊಂಡು ಭಿಕ್ಷೆಗಾಗಿ ಮನೆ ಮನೆ ಸುತ್ತುತ್ತಿದ್ದನು. ಧಮ್ಮಡಿ ಬಾರಿಸುತ್ತಾ ಗತ್ತಿನಿಂದ ಹಾಡಿ ಭಿಕ್ಷೆ ಕೇಳುತ್ತಿದ್ದನು. ಯಾವುದಾದರೂ ಮನೆಯ ಬಾಗಿಲು ಮುಚ್ಚಿದಿದ್ದರೆ, ಲಕ್ಷ್ಮಿ ತಳ್ಳಿ ಬಾಗಿಲನ್ನು ತೆರೆಯುತ್ತಿದ್ದಳು. 'ಗೌಡ್ರೇ ಏನಾರ ನೀಡ್ರಿ' ಎನ್ನುತ್ತಿದ್ದಳು. ಜನರು ರೊಟ್ಟಿ, ಪಲ್ಯ, ಬೇಳೆ ನೀಡುತ್ತಿದ್ದರು. ಲಕ್ಷ್ಮಿಯೂ ಅಣ್ಣನಿಂದ ಹಾಡಲು ಕಲಿತುಕೊಂಡಳು. ಅಣ್ಣನೊಂದಿಗೆ ಸೇರಿ ಸೊಗಸಾಗಿ ಹಾಡತೊಡಗಿದಳು. 'ಅವ ಹ್ಯಾಂಗ್ ಹ್ಯಾಂಗ್ ಹಾಡ್ತಿದ್ನು ಹಾಂಗ್ ಹಾಂಗ್ ಅವನ ಮಾರಿನೇ ನೋಡ್ಕೋತಾ, ಅವನ ಬಾಯಿಂದ ಬರೊ ಒಂದೊಂದು ನುಡಿ ಚಿತ್ತಿಟ್ಟು ಕೇಳಿ, ಹಾಡು ಕಲ್ತೊಂಡಿದಾ' ಎನ್ನುವ ಗವಾಯಿಗಳ ತಂಗಿ ಲಕ್ಷ್ಮಿ ಉತ್ತಮ ಗಾಯಕಿಯಾಗಿದ್ದಾಳೆ. ಭಜನೆ, ಮೋಹರಂ, ಜಾನಪದ ಗೀತೆಗಳನ್ನು ಸೊಗಸಾಗಿ ಹಾಡಬಲ್ಲವರಾಗಿದ್ದಾಳೆ. ಅಣ್ಣ-ತಂಗಿ ಇಬ್ಬರೂ ಹಾಡತೊಡಗಿದರೆ, ಅವರ ಹಾಡಿನ ಮೋಡಿಗೆ ಜನರು ಬೆರಗಾಗಿ ನಿಂತು ನೋಡುತ್ತಿದ್ದರು. ಭಿಕ್ಷೆ ಹೆಚ್ಚಿಗೆ ನೀಡುತ್ತಿದ್ದರು. ಒಂದೊಂದು ಸಲ ರೊಟ್ಟಿ ಪಲ್ಯದ ಜೊತೆಗೆ ಉಡಲು ಹಳೆ ಬಟ್ಟೆಗಳ್ನು ಕೊಡುತ್ತಿದ್ದರು. ಅವುಗಳಲ್ಲಿಯೇ ಅಣ್ಣ-ತಂಗಿ ಖುಷಿ ಪಡಬೇಕಾಗುತ್ತಿತ್ತು. ಅವರಿಗೆ ಬಾಲ್ಯದಲ್ಲಿ ಹೊಸ ಬಟ್ಟೆಗಳು ಎಂದೂ ಸಿಗಲಿಲ್ಲ. 'ಹೊಸ ಬಟ್ಟೆ ಎಂದರೆ ಎಂಥವು ಎಂದು ನಮಗೆ ಗೊತ್ತೇ ಇರಲಿಲ್ಲ' ಎನ್ನುತ್ತಾರೆ ಗವಾಯಿಗಳ ತಂಗಿ ಲಕ್ಷ್ಮಿ.

ಲಕ್ಷ್ಮಿಗೆ ಅಣ್ಣನ ಕೈಹಿಡಿದುಕೊಂಡು ತಿರುಗಿ ತಿರುಗಿ ಒಮ್ಮೊಮ್ಮೆ ಸಾಕಾಗಿ ಹೋಗುತ್ತಿತ್ತು. ಎಷ್ಟಂತ ಇವನ ಕೈಹಿಡಿದುಕೊಂಡು ತಿರುಗಲೆಂದು ಬೇಸರ ಪಡುತ್ತಿದ್ದಳು. ಹೀಗೆ ಬೇಸರವಾದಾಗ ಕೈಬಿಟ್ಟು ದೂರ ಹೋಗಿ ನಿಲ್ಲುತ್ತಿದ್ದಳು. ಹೇಗಾದರೂ ನಡೆದುಕೊಂಡು ಹೋಗು ಎನ್ನುತ್ತಿದ್ದಳು. ಒಮ್ಮೊಮ್ಮೆ ಸಿಟ್ಟಿನಿಂದ ಕಲ್ಲಲ್ಲಿ ಇಲ್ಲವೆ ತಗ್ಗಿನಲ್ಲಿ ನೂಕಿ ಕೈಬಿಡುತ್ತಿದ್ದಳು. ಆಗ ಕಾಶೀನಾಥ ಕುಸಿದು ಬೀಳುತ್ತಿದ್ದನು. 'ಎಲೊ ಪರಮಾತ್ಮ, ಎಲೊ ಶಿವನೇ, ಟೊಂಕನೆ ಹೋಯ್ತಲ್ಲೊ' ಎಂದು ಗೋಳಿಡುತ್ತಿದ್ದನು. ತನ್ನ ಕುರುಡುತನದ ಬದುಕಿನ ಬಗ್ಗೆ ಒಳಗೊಳಗೆ ದುಃಖ ಪಡುತ್ತಿದ್ದನು. ಮತ್ತೆ ತಂಗಿಯನ್ನು ಕುರಿತು ಎಲ್ಲಿದ್ದೆ ತಂಗಿ, ಎಲ್ಲಿಗಿ ಹೋದೆ ಬಾ ಎಂದು ಸಂತೈಸಿ ಕರೆಯುತ್ತಿದ್ದನು. ಅಣ್ಣ-ತಂಗಿಯರು ಸಾಂದರ್ಭಿಕವಾಗಿ ಕೋಪಿಸಿಕೊಂಡರೂ ಬಹಳ ಅನೋನ್ಯವಾಗಿಯೇ ಇರುತ್ತಿದ್ದರು.

ಕಾಶೀನಾಥ ಗವಾಯಿಗಳ ಸಾವಿನವರೆಗೂ ಈ ಅನ್ಯೋನ್ಯತೆ ಮುಂದುವರೆದುಕೊಂಡು ಬಂದಿತ್ತು.

ಲಕ್ಷ್ಮಿ ಬೆಳೆದು ಸ್ವಲ್ಪ ದೊಡ್ಡವಳಾದಳು. ಆಗ 'ತಂಗಿ ಈಗ ನನ್ನ ಸಂಗಡ ತಿರುಗಬ್ಯಾಡ. ದೊಡ್ಡ ಹೆಣ್ಣಮಗಳಾಗಿದ್ದಿ, ಕುಡಾದು ತಕ್ಕೋಮಾದು, ಎಲ್ಯಾರ ಮದಿಮಾಡಿ ಕೊಡ್ತೇವು, ಈಗ ನನ್ನ ಸಂಗಾಟ ತಿರುಗಬ್ಯಾಡ 'ಎನ್ನತೊಡಗಿದನು ಕಾಶೀನಾಥ. ಮುಂದೆ ಲಕ್ಷ್ಮಿ ಮದುವೆಯಾಗಿ ಗಂಡನ ಮನೆಗೆ ಹೋದಳು. ಕಾಶೀನಾಥ ಏಕಾಂಗಿಯಾದನು.

**ಸಂಗೀತ ಕಲಿಯಲು ಅಲೆದಾಟ**

ಕಾಶೀನಾಥನಿಗೆ ಸಂಗೀತ ಕಲಿಯಬೇಕೆಂಬ ಆಸೆ ಮೊದಲಿನಿಂದಲೂ ಇತ್ತು. ಕಣ್ಣು ಹೋದ ಆರಂಭದಲ್ಲಿ ಚಂದನಕೇರಿ ಅಜ್ಜನಿಂದ ಸಂಗೀತದ ಬಗ್ಗೆ ತಕ್ಕಮಟ್ಟಿಗೆ ಜ್ಞಾನವನ್ನು ಪಡೆದಿದ್ದನು. ಕೊಳಲು, ಸಿಂಗ್, ಧಮ್ಮಡಿ ನುಡಿಸುವುದನ್ನು ಕಲಿತುಕೊಂಡಿದ್ದನು. ಬಯಲಾಟ, ಬೀದಿ ನಾಟಕಗಳ ಬಗ್ಗೆಯೂ ತಿಳಿದುಕೊಂಡಿದ್ದನು. ಆದರೆ ಅಷ್ಟಕ್ಕೇ ಕಾಶೀನಾಥ ತೃಪ್ತನಾಗಲಿಲ್ಲ. ಸಂಗೀತದ ಬಗ್ಗೆ ಇನ್ನೂ ಹೆಚ್ಚು ಹೆಚ್ಚು ತಿಳಿದುಕೊಳ್ಳಬೇಕು; ಹೆಚ್ಚು ಹೆಚ್ಚು ಹಾಡುಗಳನ್ನು ಕಲಿಯಬೇಕು; ಹೆಚ್ಚು ಹೆಚ್ಚು ಬಯಲಾಟಗಳನ್ನು ಕರಗತ ಮಾಡಿಕೊಳ್ಳಬೇಕೆಂದು ನಿರ್ಧರಿಸಿದನು. ಹಾರ್ಮೋನಿಯಂ ಕಲಿಯುವುದು ಅವನ ಮಹತ್ವಾಕಾಂಕ್ಷೆಯಾಗಿತ್ತು. ಕಲಿಯಬೇಕೆಂಬ ಬಯಕೆಯೇನೂ ಸರಿ. ಆದರೆ ಆ ಅಂಥ ಅಸ್ಪೃಶ್ಯ ಬಾಲಕನಿಗೆ ಕಲಿಸಿಕೊಡುವವರು ಯಾರು? ಊರಲ್ಲಿ ಭಜನೆ ಕೋಲಾಟ ನಡೆಯುತ್ತಿದ್ದರೆ ಅಲ್ಲಿ ಹಾಜರಿರುತ್ತಿದ್ದನು. ಅಲ್ಲಿನ ಹಾಡು, ಸಂಗೀತವನ್ನು ಗಮನವಿಟ್ಟು ಕೇಳುತ್ತಿದ್ದನು. ಆದರೆ ಯಾರೂ ಇವನನ್ನು ಹತ್ತಿರಕ್ಕೆ ಕರೆದುಕೊಳ್ಳುತ್ತಿರಲಿಲ್ಲ.

ಅಂದಿನ ದಿನಗಳಲ್ಲಿ ಹಳ್ಳಿಗಳಲ್ಲಿ ಬಯಲಾಟಗಳು ನಡೆಯುತ್ತಿದ್ದವು. ಸಿನಿಮಾ ಇನ್ನೂ ಗ್ರಾಮೀಣ ಜನರನ್ನು ಮುಟ್ಟಿರಲಿಲ್ಲ. ಆಗೇನಿದ್ದರೂ ಕೋಲಾಟ, ಬಯಲಾಟಗಳೇ ಗ್ರಾಮೀಣರ ಮನೋರಂಜನೆಯ ಮಾಧ್ಯಮಗಳಾಗಿದ್ದವು. ಹಳ್ಳಿಯಲ್ಲಿ ಬಯಲಾಟ ಇದ್ದರೆ ಇಡೀ ಹಳ್ಳಿಯೇ ಸಂಭ್ರಮದಲ್ಲಿ ನಲಿಯುತ್ತಿತ್ತು. ಮನೋರಂಜನೆಯ ಜೊತೆಗೆ ಬದುಕಿನ ಶಿಕ್ಷಣವನ್ನ ಬಯಲಾಟಗಳು ನೀಡುತ್ತಿದ್ದವು. ಗ್ರಾಮೀಣ ಜನತೆಯನ್ನು ಬಯಲಾಟಗಳು ಬಹಳಷ್ಟು ಪ್ರಭಾವಿಸಿದವು. ಆಗ ಅಮೀರಲಿ ಮಾಸ್ತರ ಬಯಲಾಟ ಕಲಿಸಲು ಪ್ರಸಿದ್ಧಿಯನ್ನು ಪಡೆದಿದ್ದರು. ಅವರ ಖ್ಯಾತಿ ಬೀದರ, ಗುಲಬರ್ಗಾ ಜಿಲ್ಲೆಯ ತುಂಬೆಲ್ಲ ಹರಡಿತ್ತು. ಅವರು ಬಯಲಾಟ ಕಲಿಸುವುದನ್ನು ಒಂದು ವೃತ್ತಿಯನ್ನಾಗಿ ಮಾಡಿಕೊಂಡು ಊರೂರು ಅಲೆಯುತ್ತಿದ್ದರು. ಹಿಲಾಲಪೂರಕ್ಕೂ ಬಂದು ಹೋಗುತ್ತಿದ್ದರು. ಪೌರಾಣಿಕ, ಸಾಮಾಜಿಕ ನಾಟಕಗಳನ್ನು ಆಡಿಸುತ್ತಿದ್ದರು. ಅವರು ಕಲಿಸಿದ ಭೀಷ್ಮ ಪ್ರತಿಜ್ಞೆ, ವೀರ ಅಭಿಮನ್ಯು, ಸಂತ ತುಕಾರಾಮ, ಸೌಭಾಗ್ಯಲಕ್ಷ್ಮಿ, ನನ್ನ ಭೂಮಿ. ನಾಟಕಗಳನ್ನು ಜನರು ಇಂದಿಗೂ ನೆನೆಯುತ್ತಾರೆ. ಮೂಲತಃ ಹಿಲಾಲಪೂರ ಹತ್ತಿರವಿರುವ ಸಿರಕಟನಳ್ಳಿ (ಚಟ್ನಳ್ಳಿ) ಯವರಾದ ಅಮೀರಲಿ ಮಾಸ್ತರ ನೋಡಲು ಎತ್ತರ ನಿಲುವಿನ, ಆಕರ್ಷಕ ವ್ಯಕ್ತಿಯಾಗಿದ್ದರು.

ಒಮ್ಮೆ ಬೇಸಿಗೆಯ ಕಾಲದಲ್ಲಿ ಅಮೀರಲಿ ಮಾಸ್ತರ ನಾಟಕ ಆಡಿಸಲೆಂದು ಹಿಲಾಲಪೂರಕ್ಕೆ ಬಂದು, ಮೂರು ತಿಂಗಳು ಕಾಲ ಹಿಲಾಲಪೂರದಲ್ಲಿಯೇ ಉಳಿದು ಕೊಂಡಿದ್ದರು. ಆಗ ಕಾಶೀನಾಥ ಸಂಗೀತ ಕಲಿಯಬೇಕೆಂಬ ತನ್ನ ಮನದ ಬಯಕೆಯನ್ನು ಅಮೀರಲಿ ಮಾಸ್ತರ ಹತ್ತಿರ ಹೇಳಿಕೊಂಡನು. ಕಾಶೀನಾಥನ ತಂದೆ ಕಾಳಪ್ಪನೂ ತನ್ನ ಮಗನಿಗೆ ಸಂಗೀತ ಕಲಿಸಿಕೊಡಬೇಕೆಂದು ಅಮೀರಲಿ ಮಾಸ್ತರರಲ್ಲಿ ಬೇಡಿಕೊಂಡನು. ಆದರೆ ಕಾಶೀನಾಥನಿಗೆ ಸಂಗೀತ ಕಲಿಯಲು ಜಾತಿ ತೊಡಕಾಗಿತ್ತು. ಸಂಗೀತ ವಾದ್ಯಗಳಾದ ತಬಲ ಹಾರ್ಮೋನಿಯಂ-ಮುಂತಾದವುಗಳು ಊರಿನ ಗುಡಿಯ ಭಜನೆ ಸಂಘಕ್ಕೆ ಸೇರಿದವುಗಳಾಗಿದ್ದವು. ಮೇಲ್ಜಾತಿಯವರು ಅವುಗಳನ್ನು ಮುಟ್ಟಗೊಡುತ್ತಿರಲಿಲ್ಲ. ಹೊಲೆಯರ ಹುಡುಗ ಮುಟ್ಟಿದರೆ ಅವು ಮೈಲಿಗೆಯಾಗುತ್ತವೆ ಎಂಬ ಭಾವನೆ ಅವರದಾಗಿತ್ತು. ಹೀಗಾಗಿ ಅವರು ಕಾಶೀನಾಥ ಸಂಗೀತ ಕಲಿಯುವುದಕ್ಕೆ ವಿರೋಧವಾಗಿದ್ದರು. ಅಂತೆಯೇ ಅವನಿಗೆ ಸಂಗೀತ ಕಲಿಸಕೂಡದೆಂದು ಅಮೀರಲಿ ಮಾಸ್ತರಗೆ ಸ್ಪಷ್ಟವಾಗಿ ತಿಳಿಸಿದ್ದರು. ಸಂಗೀತ ಕಲಿಯಬೇಕೆಂಬ ಆಸಕ್ತಿಯಿಂದ ತನ್ನ ಸುತ್ತಲೇ ಸುತ್ತುತ್ತಿರುವ ಹುಡುಗ ಒಂದು ಕಡೆ; ಅಸ್ಪೃಶ್ಯತೆಯನ್ನು ಆಚರಿಸುವ ಸಮಾಜ ಒಂದು ಕಡೆ. ಅಮೀರಲಿ ಮಾಸ್ತರರಿಗೆ ಏನು ಮಾಡಬೇಕೆಂದು ತೋಚದಾಯಿತು. ಮೇಲ್ಜಾತಿಯವರನ್ನು ವಿರೋಧಿಸಲೂ ಆಗದೆ, ಕಾಶೀನಾಥನಿಗೆ ಸಂಗೀತ ನಿರಾಕರಿಸಲೂ ಆಗದೆ ಅಮೀರಲಿ ಮಾಸ್ತರರಿಗೆ ಉಭಯ ಸಂಕಟವಾಯಿತು. ಊರಲ್ಲಿ ಇದ್ದಷ್ಟು ದಿನ ಕಾಶೀನಾಥ ಅಮೀರಲಿ ಮಾಸ್ತರರನ್ನು ಬಿಟ್ಟು ಅಗಲುತ್ತಿರಲಿಲ್ಲ. ಹಗಲು ರಾತ್ರಿ ಅವರ ಸಂಗಡವೇ ಇರುತ್ತಿದ್ದನು. 'ಊಟಕ್ಕಷ್ಟೇ ಮನಿಗಿ ಹೋಗ್ತಿದ್ದ, ಇಲ್ದರ ಹಗಲು ರಾತ್ರಿ ನನ್ನ ಸುತ್ತಾನೆ ಇರ್ತಿದ್ದ; ನನ್ನ ಬಲ್ಲೇ ಮಕ್ಕೊತ್ತಿದ್ದ.' ಎಂದು ಅಮೀರಲಿ ಮಾಸ್ತರ ನೆನಪಿಸಿಕೊಳ್ಳುತ್ತಾರೆ. ಅಮೀರಲಿ ಮಾಸ್ತರ ಮೂಲತಃ ಫಕೀರರಾಗಿದ್ದರು. ಅವರಿಗೆ ಜಾತಿ ಭೇದ ಇರಲಿಲ್ಲ. ಕಾಶೀನಾಥನಲ್ಲಿ ಸಂಗೀತ ಪ್ರತಿಭೆಯನ್ನು ಗುರುತಿಸಿದ ಅವರು ಜನರೆಲ್ಲ ಮಲಗಿ, ಗಾಢ ನಿದ್ರೆಯಲ್ಲಿದ್ದಾಗ, ನಡುರಾತ್ರಿ ಯಲ್ಲಿ ಎದ್ದು ತಬಲ ನುಡಿಸಲು ಕೊಡುತ್ತಿದ್ದರು.

ಹಿಲಾಲಪೂರದ ಬಡಿಗೇರ ನೀಲಕಂಠ ಹಾಗೂ ಅವನ ಸೋದರ ಮಾವ ಹಣಕುಣಿಯ ನಾಗಮೂರ್ತಿ ಅಮೀರಲಿ ಮಾಸ್ತರರ ಹತ್ತಿರ ಸಂಗೀತ ಕಲಿಯುತ್ತಿದ್ದರು. ಅವರು ಕಾಶೀನಾಥನನ್ನು ಅತ್ಯಂತ ಕೀಳಾಗಿ ಕಾಣುತ್ತಿದ್ದರು. ಜಾತಿ ಹಿಡಿದು ನಿಂದಿಸುತ್ತಿದ್ದರು. ಕಾಶೀನಾಥನ ಕೈಯಲ್ಲಿ ತಬಲ, ಹಾರ್ಮೋನಿಯಂ ಕೊಡಬಾರದೆಂದು ಹಠ ಹಿಡಿದಿದ್ದರು. 'ಆ ಖಂಡಾ ತಿಂಬ ಹೊಲ್ಯಾಗೆಲ್ಲಿ ಸಂಗೀತ ಬರ್ತದ' ಎಂದು ಕೀಳಾಗಿ ನುಡಿಯುತ್ತಿದ್ದರು. 'ಅವನಿಗ್ಯಾಕ ಕಲಿಸುತ್ತೀರಿ' ಎಂದು ಅಮೀರಲಿಯನ್ನು ಕೇಳುತ್ತಿದ್ದರು. ಆಗ ಅಮೀರಲಿ ಮಾಸ್ತರ 'ಇದು ದೇವರ ದೇಣಿಗಿ ಅದ ಅಪ್ಪ ಎಲ್ಲರಿಗಿ ಬರಲ್ಲ, ಇದರ ಮ್ಯಾಲ ಭಕ್ತಿ ಇದ್ದೋರಿಗಿ ಬರ್ತದ. ಅವನ ಭಕ್ತಿ ಅದ ಕಲಿಲಿ ಬಿಡ್ರಿ' ಎಂದು ಕಾಶೀನಾಥನನ್ನು ಬೆಂಬಲಿಸುತ್ತಿದ್ದರು. ಕಾಶೀನಾಥನಿಗೆ ಸಂಗೀತ ಕಲಿಯಲು ಇದ್ದ ವಿರೋಧವನ್ನು ಅವರ ಗುರುಗಳಾದ ಅಮೀರಲಿ ಮಾಸ್ತರ ಹೀಗೆ ನೆನಪಿಸಿಕೊಳ್ಳುತ್ತಾರೆ. 'ಕ್ಯಾ ಬೊಲನಾ ಯೆ ಲೋಗೋಂಕಾ, ಢೇಡ್ ಬಚ್ಚೆಕೊ ಸಂಗೀತ ನಹಿ ಶಿಖಾನಾ, ಉನಕೆ ಹಾಥಮೇ ತಬಲಾ,

ಪೇಟಿ ನಹಿ ದೇನಾ ಬೋಲ್ತೆಥೆ. ಮೈ ಆದಾ ರಾತ್ಕೊ ಉಠಕೆ ಚೋರಿಸೆ ಉನಕೊ ತಬಲಾ, ಪೇಟಿ ಶಿಖಾತೆಥೆ.'

ಹಿಲಾಲಪೂರದಲ್ಲಿ ಕಾಶೀನಾಥ ಗವಾಯಿಗಳಿಗೆ ಸಂಗೀತ ಕಲಿಯಲು ಸಹಕರಿಸಿ, ಬೆಂಬಲಿಸಿದವರೆಂದರೆ ಆ ಊರಿನ ಶಂಕರರಾವ ಮಾಲಿಗೌಡರು. ಶಂಕರರಾವ ಗೌಡರು ಸಾಹುಕಾರ, ಜಮೀನ್ದಾರರಾಗಿದ್ದರು; ಜೊತೆಗೆ ಉದಾರಿಯೂ ಆಗಿದ್ದರು. ಊರಲ್ಲಿ ಕಷ್ಟದಲ್ಲಿದ್ದವರಿಗೆ ಸಹಾಯಹಸ್ತ ನೀಡುತ್ತಿದ್ದರು ಮತ್ತು ಶಾಲೆ ಕಲಿಯುವ ಬಡ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. ಕಾಶೀನಾಥ ಗವಾಯಿಗಳ ತಂದೆ ಕಾಳಪ್ಪ ಶಂಕರರಾವ ಗೌಡರ ಹೊಲದಲ್ಲಿಯೇ ದುಡಿಯಲು ಇರುತ್ತಿದ್ದನು. ಊರಲ್ಲಿ ಜನರು ಕಾಶೀನಾಥನಿಗೆ ಸಂಗೀತ ಕಲಿಯಲು ಅಡೆ-ತಡೆಯುಂಟು ಮಾಡುತ್ತಿದ್ದಾರೆ; ಅವನಿಗೆ ತಬಲ, ಹಾರ್ಮೋನಿಯಂ ಮುಟ್ಟಗೊಡುತ್ತಿಲ್ಲವೆಂದು ಗೊತ್ತಾದ ಮೇಲೆ, ಮೊದಲೇ ಕಾಶೀನಾಥನ ಚುರುಕುತನ ಮತ್ತು ಹಾಡುಗಾರಿಕೆ ಗೊತ್ತಿದ್ದ ಗೌಡರು ಜನರನ್ನು ಕುರಿತು ಹೇಳಿದರು; 'ನಿವ್ಯಾರ್ಬಿ ಸಂಗೀತ ಕಲಿವಲ್ಲಿರಿ, ನಿಮಗ್ಯಾರಿಗ್ಬಿ ಸಂಗೀತ ಬರಲ್ಲು. ಕಾಶೀನಾಥ ಸಂಗೀತದಾಗ ಹುಸೇರ ಹನ. ಅವನಿಗಿ ಕಲಿಬೇಕಂತ ಖಾಯಸದ ಕಲೀಲಿ ಬಿಡರಿ. ತಂದರ ನಮ್ಮೂರಿಗೆ ಅವನೇ ಕೀರ್ತಿ ತರ್ತಾನ. ನಿವ್ಯಾರ್ಬಿ ತರಲ್ಲ.' ಎಂದು. ಆಗ ವಿರೋಧಿಸುವವರೆಲ್ಲ ಸುಮ್ಮನಾದರು. ಕಾಶೀನಾಥ ಸಂಗೀತ ಕಲಿಯಲು ಸಮ್ಮತಿಸಿದರು. ಅಮೀರಲಿ ಮಾಸ್ತರ ಕಾಶೀನಾಥನಿಗೆ ತಬಲ ಹಾರ್ಮೋನಿಯಂ ನುಡಿಸಲು ಕಲಿಸಿ ಕೊಟ್ಟರು. ಕೆಲವೇ ದಿನಗಳಲ್ಲಿ ಆತ ಅವುಗಳನ್ನು ಚೆನ್ನಾಗಿ ಕರಗತ ಮಾಡಿಕೊಂಡನು. ಮುಂದೆ ನಾಟಕಗಳಲ್ಲಿ ಹಾರ್ಮೋನಿಯಂ, ತಬಲ, ಕೊಳಲು ನುಡಿಸತೊಡಗಿದನು. ಕಾಶೀನಾಥನಿಗೆ ಹಾರ್ಮೋನಿಯಂ ನುಡಿಸಲು ಕೊಡಬಾರದೆಂದು ಹಠ ಹಿಡಿದಿದ್ದ ಬಡಿಗೇರ ನೀಲಕಂಠ ಮತ್ತು ನಾಗಮೂರ್ತಿಗೆ ಕೊನೆಯವರೆಗೂ ಹಾರ್ಮೋನಿಯಂ ನುಡಿಸಲು ಬರಲೇ ಇಲ್ಲ. ಕಾಶೀನಾಥನ ಕೊಳಲು ವಾದನವಂತೂ ಕೇಳುಗರ ಮನಸ್ಸು ಸೂರೆಗೊಳ್ಳುತ್ತಿತ್ತು; ಕೇಳಿ ಜನರು ತಲೆದೂಗುತ್ತಿದ್ದರು. ಹಿಲಾಲಪೂರದ ಇತ್ತೇಕಾರ ಪೋಲಿಸ್ ಪಾಟೀಲರು ಕಾಶೀನಾಥನ ಕೊಳಲು ವಾದನವನ್ನು ಮೆಚ್ಚಿ ಮುಂಬೈಯಿಂದ ಎರಡು ಸುಂದರ ಕೊಳಲನ್ನು ತಂದು ಕೊಟ್ಟಿದ್ದರು. ಬಹಳ ದಿನಗಳವರೆಗೆ ಆ ಕೊಳಲುಗಳನ್ನು ಗವಾಯಿಗಳು ತಮ್ಮ ಹತ್ತಿರ ಜೋಪಾನವಾಗಿ ಇಟ್ಟುಕೊಂಡಿದ್ದರು.

ಅಮೀರಲಿ ಮಾಸ್ತರರನ್ನು ಗುರುವೆಂದು ಸ್ವೀಕರಿಸಿದ ಕಾಶೀವಾಥ ಅವರನ್ನು ಗೌರವದಿಂದ ಕಾಣುತ್ತಿದ್ದನು. ಅವರ ಪ್ರಭಾವಕ್ಕೆ ಒಳಗಾದನು. ಅವರು ನಾಟಕ ಕಲಿಸಿ ಹಿಲಾಲಪೂರದಿಂದ ಹೊರಟು ಹೋದ ಮೇಲೆಯೂ ತಂದೆಯನ್ನು ಕರೆದುಕೊಂಡು ಗುರುವಿನ ಊರಾದ ಸಿರಕಟನಳ್ಳಿಗೆ ಮೇಲಿಂದ ಮೇಲೆ ಹೋಗಿ ಬರುವುದು ಮಾಡತೊಡಗಿದನು. ೨-೩ ದಿನಗಳವರೆಗೆ ಅವರ ಮನೆಯಲ್ಲಿಯೇ ಉಳಿದುಕೊಳ್ಳುತ್ತಿದ್ದನು. ಅಲ್ಲಿದ್ದಷ್ಟು ದಿನ ಸಂಗೀತ ಅಭ್ಯಾಸದಲ್ಲಿ ತೊಡಗುತ್ತಿದ್ದನು. ಅಮೀರಲಿ ಮಾಸ್ತರರ ಹೆಂಡತಿ ಫಾತಿಮಾ ಕಾಶೀನಾಥನನ್ನು ಮಗನಂತೆ ಪ್ರೀತಿಯಿಂದ ಕಾಣುತ್ತಿದ್ದರು. ಉಣ್ಣಲು ಕೊಟ್ಟು ಮನೆಯಲ್ಲಿ ಮಲಗಿಸಿಕೊಳ್ಳುತ್ತಿದ್ದರು. ಕಾಶೀನಾಥ ಫಾತಿಮಾರ ಪಾದಮುಟ್ಟಿ

ನಮಸ್ಕರಿಸುತ್ತಿದ್ದನು. ಅಮೀರಲಿ ಮಾಸ್ತರರ ಹತ್ತಿರ ಕುಳಿತು ಅವರ ಕಾಲನ್ನು ಒತ್ತುತ್ತಿದ್ದನು. 'ನನ್ನಲ್ಲಿ ಗುರುದಕ್ಷಿಣೆ ಇಲ್ಲ. ಇದೇ ನನ್ನ ಗುರುದಕ್ಷಿಣೆ' ಎಂದು ಹೇಳಿ ಗುರುವಿನ ಕಾಲೊತ್ತಿ ಸೇವೆ ಸಲ್ಲಿಸುತ್ತಿದ್ದನು. ಅಮೀರಲಿ ಮಾಸ್ತರ ಒಂದು ವೇಳೆ ಸಿರಕಟನಳ್ಳಿಯಲ್ಲಿ ಇರದಿದ್ದರೆ, ಅವರ ಹೆಂಡತಿಯನ್ನು ಕೇಳಿ ಅವರಿದ್ದ ಊರಿಗೆ ಹುಡುಕಿಕೊಂಡು ಹೋಗು ತ್ತಿದ್ದನು. 'ಅವ್ರು ಬಾರಾ ತೇರಾ ವರ್ಷದವರಿದ್ದಿರಬೇಕು. ತಂದಿ ಕೈಹಿಡ್ಕೊಂಡು ಸಂಗೀತ ಕಲಿಲಾಕಂತ ನಮ್ಮನಿಗಿ ಬರ್‍ತಿದ್ರು... ಆಂಖೆ ನಹಿಥೆ ಲೇಖಿನ್ ಬಹುತ್ ಹುಷಾರ್ ಥೆ' ಎಂದು ನುಡಿಯುವ ಅಮೀರಲಿ ಮಾಸ್ತರರ ಹೆಂಡತಿ ಫಾತಿಮಾ ಅಂದಿನ ಅನೇಕ ಘಟನೆಗಳನ್ನು ನೆನಪಿಸಿಕೊಂಡು ಹೇಳುತ್ತಾರೆ. ಸುಮಾರು ಎರಡು-ಮೂರು ವರ್ಷಗಳ ಕಾಲ ತಂದೆಯ ಕೈಹಿಡಿದುಕೊಂಡು ಹಿಲಾಲಪೂರದಿಂದ ಸಿರಕಟನಳ್ಳಿಗೆ ಸಂಗೀತ ಕಲಿಯುವುದಕ್ಕಾಗಿ ಸತತವಾಗಿ ನಡೆದುಕೊಂಡೇ ಅಲೆದಾಡಿದ ಕಾಶೀನಾಥ ಮುಂದೊಂದು ದಿನ ಕಾಶೀನಾಥ ಗುರುವನ್ನು ಮೀರಿಸುವ ಎತ್ತರಕ್ಕೆ ಬೆಳೆದು, ಅಪಾರವಾದ ಖ್ಯಾತಿ ಮತ್ತು ಜನಪ್ರಿಯತೆಯನ್ನು ಪಡೆದರೂ ಅಮೀರಲಿ ಮಾಸ್ತರರ ಬಗ್ಗೆ ಅವರಿಗಿದ್ದ ಗೌರವ ಎಂದೂ ಕಡಿಮೆಯಾಗಲಿಲ್ಲ ಕೊನೆಯವರೆಗೂ ಅವರೊಂದಿಗೆ ಅನನ್ಯವಾಗಿಯೇ ನಡೆದುಕೊಂಡು ಬಂದರು.

ಕಾಶೀನಾಥ ಸಂಗೀತ ಮತ್ತು ಗಾಯನದಲ್ಲಿ ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿದ್ದರೂ ಅವರ ಕುಟುಂಬ ಇನ್ನು ಸಂಕಷ್ಟದಲ್ಲಿಯೇ ಇತ್ತು. ಎಲ್ಲಿಯಾದರೂ ಭಜನೆ, ಬಯಲಾಟಗಳು ನಡೆದರೆ, ಅಲ್ಲಿಗೆ ಹಾಡಲು, ಸಂಗೀತ ನುಡಿಸಲು ಹೋಗುತ್ತಿದ್ದರು. ಅದರಿಂದ ಬಹುಮಾನ, ಸಂಭಾವನೆಯ ರೂಪದಲ್ಲಿ ಅಲ್ಪ ಪ್ರಮಾಣದ ಹಣ ಬರುತ್ತಿತ್ತು; ಉಪಜೀವನಕ್ಕೆ ಸಾಕಾಗುತ್ತಿರಲಿಲ್ಲ. ಅದು ಕೂಡ ನಿತ್ಯದ ಆದಾಯವಾಗಿರಲಿಲ್ಲ. ಇದುವರೆಗೆ ಕಲಿತ ಸಂಗೀತಕ್ಕೆ ಯಾವುದೇ ಅಧಿಕೃತ ಸರ್ಟಿಫಿಕೇಟ್ ಇರಲಿಲ್ಲ. ಆದ್ದರಿಂದ ಯಾವುದಾದರೂ ಸಂಗೀತ ಶಾಲೆಯ ಅಧಿಕೃತ ಸರ್ಟಿಫಿಕೇಟ್ ಇದ್ದರೆ, ನೌಕರಿ ಹಿಡಿಯಬಹುದು; ಸಂಗೀತ ಶಿಕ್ಷಕನಾಗಬಹುದು, ಮುಂದೆ ಮದುವೆಯಾದರೆ ಸಂಸಾರ ಸುಲಭವಾಗಬಹುದೆಂದು ಕಾಶೀನಾಥ ಭಾವಿಸಿದನು. ಅಜ್ಜ ಬಸಪ್ಪನನ್ನು ಕರೆದುಕೊಂಡು ಸಂಗೀತ ಕಲಿಯಲೆಂದು ೧೯೪೭೭ರ ಸುಮಾರಿನಲ್ಲಿ ಗದಗಕ್ಕೆ ಹೋದನು. ಅಲ್ಲಿ ಕರ್ನಾಟಕದ ಖ್ಯಾತ ಸಂಗೀತ ಗಾರರಾಗಿದ್ದ ಪಂಚಾಕ್ಷರಿ ಗವಾಯಿಗಳ ಆಶ್ರಮ ಶಾಲೆಯನ್ನು ಸೇರಿದನು. ಅಲ್ಲಿ ಭೀಮರಾವ ಮಾಸ್ತರರ ಹತ್ತಿರ ಹಿಂದೂಸ್ಥಾನಿ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಕಲಿತನು. ಶರಣರ ವಚನ, ದಾಸರ ತತ್ವಪದಗಳನ್ನು ಕಲಿತು ಇಂಪಾಗಿ ಹಾಡತೊಡಗಿದನು. ಹಿಂದೆ ತಾನು ಅಮೀರಲಿ ಮಾಸ್ತರರ ಹತ್ತಿರ ಸಂಗೀತ ಕಲಿಯುವಾಗ ಜಾತಿಯ ಕಾರಣಕ್ಕಾಗಿ ಎದುರಾದ ಪ್ರತಿರೋಧವನ್ನು ನೆನಪಿಸಿಕೊಂಡನು. ಇಲ್ಲಿ ಆ ಅಡೆ ತಡೆ ಬರಬಾರದೆಂಬ ಕಾರಣಕ್ಕೆ ಕಾಶೀನಾಥ ತಾನು ಬ್ರಾಹ್ಮಣನೆಂದು ಹೇಳಿಕೊಂಡನು. ಗದುಗಿನ ಸಂಗೀತ ಮತ್ತು ಸಾಹಿತ್ಯಿಕ ವಾತಾವರಣ ಕಾಶೀನಾಥನಿಗೆ ಹಿತವೆನಿಸಿತು. ಬ್ರಾಹ್ಮಣ ಹುಡುಗಿ ಯೊಬ್ಬಳನ್ನು ಮದುವೆಯಾಗಿ, ಸಂಗೀತ ಶಿಕ್ಷಕನಾಗಿ ಸಂಗೀತ ಕಲಿಸುತ್ತಾ ಗದುಗಿನಲ್ಲಿಯೇ ಉಳಿಯುವ ಯೋಚನೆ ಮಾಡಿದನು. ಹುಡುಗಿಯೂ ಒಪ್ಪಿದಳು. ಆದರೆ ಕಾಶೀನಾಥ ಅಸ್ಪೃಶ್ಯ ಜಾತಿಯವನೆಂದು ಗೊತ್ತಾಗಲು ಬಹಳ ಕಾಲ ಹಿಡಿಯಲಿಲ್ಲ.

ಒಮ್ಮೆ ಗದುಗಿನ ಪಂಚಾಕ್ಷರಿ ಗವಾಯಿಗಳ ಆಶ್ರಮದ ಸಂಗೀತ ಶಾಲೆಯ ವಿದ್ಯಾರ್ಥಿಗಳನ್ನು ಸಂಗೀತ ಸ್ಪರ್ಧೆಗೆಂದು ಸೋಲಾಪೂರಕ್ಕೆ ಕರೆದುಕೊಂಡು ಹೋಗಲಾಗಿತ್ತು. ಕಾಶೀನಾಥನೂ ಹೋಗಿದ್ದನು. ಈ ಸ್ಪರ್ಧೆ ನೋಡಲು ಅನೇಕ ಜನರು ಸೇರಿದ್ದರು. ಕಾಶೀನಾಥ ವೇದಿಕೆ ಹತ್ತಿ ಹಾಡತೊಡಗಿದನು. ಯಾವುದೋ ಕೆಲಸದ ನಿಮಿತ್ತ ಹಿಲಾಲಪೂರದಿಂದ ಸೋಲಾಪೂರಕ್ಕೆ ಬಂದಿದ್ದ ಮುಸ್ಲಿಂ ವ್ಯಕ್ತಿಗಳಿಬ್ಬರು ಅಕಸ್ಮಾತ್ ಈ ಸಂಗೀತ ಸ್ಪರ್ಧೆ ನೋಡಲು ಹೋಗಿದ್ದರು. ಅವರು ವೇದಿಕೆ ಮೇಲೆ ಹಾಡುತ್ತಿದ್ದ ತಮ್ಮೂರಿನ ಕುರುಡ ಹುಡುಗ ಕಾಶೀನಾಥನನ್ನು ಗುರುತಿಸಿದರು. ಅದರಲೊಬ್ಬ ವ್ಯಕ್ತಿ 'ಏ ನಮ್ಮೂರ ಕುಡ್ಡ ಕಾಶಣ್ಣ ಹಾಡ್ಲಾತಾನ ನೋಡೊ, ಎಷ್ಟ ಚಂದ ಹಾಡ್ಲಾತಾನ' ಎಂದು ಆಶ್ಚರ್ಯದಿಂದ ಮತ್ತೊಬ್ಬನಿಗೆ ಹೇಳುತ್ತಿದ್ದನು. ಅವರಿಬ್ಬರ ಸಂಭಾಷಣೆಯನ್ನು ಆಲಿಸುತ್ತಿದ್ದ ಗದುಗಿನ ಸಂಗೀತ ವಿದ್ಯಾರ್ಥಿಯೊಬ್ಬನು 'ಕಾಶೀನಾಥ ನಿಮಗೆ ಗೊತ್ತೇನು?' ಎಂದು ಕೇಳಿದ. 'ಹೂಂ ಗೊತ್ತು. ಅದು ನಮ್ಮೂರ ಹೊಲೇರ ಹುಡುಗದ' ಎಂದು ಅವರು ಹೇಳಿದರು. ಇದರಿಂದಾಗಿ ಕಾಶೀನಾಥನ ನಿಜ ಜಾತಿ ಗೊತ್ತಾಯಿತು. ಈ ಮೊದಲು ತಮ್ಮೊಂದಿಗೆ ಬ್ರಾಹ್ಮಣನೆಂದು ಸಹಭೋಜನ ಮಾಡುತ್ತಿದ್ದ, ದೇವಾಲಯಗಳನ್ನು ಪ್ರವೇಶಿಸುತ್ತಿದ್ದ, ಸವರ್ಣೀಯರ ಬಾವಿಯಲ್ಲಿ ಈಜಾಡಿ ಸ್ನಾನ ಮಾಡುತ್ತಿದ್ದ ಕಾಶೀನಾಥನನ್ನು ಅವನ ಮೇಲ್ಜಾತಿಯ ಸಹವಿದ್ಯಾರ್ಥಿಗಳು ಜಾತಿ ಕಾರಣಕ್ಕಾಗಿ ಈಗ ಅವನನ್ನು ವಿರೋಧಿಸತೊಡಗಿದರು. ಸನಿಹಕ್ಕೆ ಸೇರಿಸಿಕೊಳ್ಳದೆ ತುಚ್ಛವಾಗಿ ಕಂಡು ದ್ವೇಷಿಸತೊಡಗಿದರು. ಹಲವಾರು ರೀತಿಯ ತೊಂದರೆಗಳನ್ನು ಕೊಟ್ಟರು. ಸ್ವಾಮಿ ಮತ್ತು ಲಿಂಗಾಯತ ವಿದ್ಯಾರ್ಥಿಗಳು ಸೇರಿ ಸಂಚುಹೂಡಿ ಹೊಡೆಯಲು ಬಂದರು. ಇದನ್ನು ಅರಿತ ಸಂಗೀತ ಮಾಸ್ತರರೊಬ್ಬರು ಕಾಶೀನಾಥನಿಗೆ ತಮ್ಮೂರಿಗೆ ಹೋಗಲು ತಿಳಿಸಿ ಬಸ್ ಹತ್ತಿಸಿದರು. ಗದುಗಿನಲ್ಲಿ ಒಂದು ವರ್ಷಕಾಲ ಇದ್ದು, ಕಾಶೀನಾಥ ಸಂಗೀತ ಅಭ್ಯಾಸ ಮಾಡಿದನು. ತಬಲ, ಕೊಳಲು, ಹಾರ್ಮೋನಿಯಂ ಜೊತೆಗೆ ಕಾಶೀನಾಥ ಈಗ ಮೃದಂಗ, ಕ್ಲಾರನೇಟ್, ಶಹನಾಯಿ (ಸನಾಯಿ), ತಂತಿವಾದ್ಯಗಳನ್ನು ನುಡಿಸತೊಡಗಿದನು.

### ತಿರುಗಿ ಹಿಲಾಲಪೂರಕ್ಕೆ

ಗದುಗಿನಿಂದ ತಿರುಗಿ ಹಿಲಾಲಪೂರಕ್ಕೆ ಬಂದ ಕಾಶೀನಾಥ ಈಗ ಮೊದಲಿನಂತಿರಲಿಲ್ಲ. ದೈಹಿಕವಾಗಿ ಬೌದ್ಧಿಕವಾಗಿ ಬೆಳೆದು ಸಾಕಷ್ಟು ಬದಲಾಗಿದ್ದನು. ಲೋಕಾನುಭವವೂ ವಿಸ್ತಾರಗೊಂಡಿತ್ತು. ತನ್ನ ಅಂಧಕಣ್ಣುಗಳಿಗೆ ಅಲಂಕಾರಕ್ಕಾಗಿ ಕಪ್ಪು ಕನ್ನಡಕವನ್ನು ಧರಿಸತೊಡಗಿದನು. ಸಂಗೀತದಲ್ಲಿ ಪರಿಣಿತಿ ಪಡೆದು, ಸಂಗೀತ ಮತ್ತು ಹಾಡುಗಾರಿಕೆಯನ್ನು ತನ್ನ ಜೀವನದ ಉಸಿರಾಗಿಸಿಕೊಂಡನು. ಸಂಗೀತದಿಂದ ಆತ್ಮವಿಶ್ವಾಸ ಬೆಳೆಯಿತು. ವೇದ, ಪುರಾಣ, ಬೈಬಲ್ ಮತ್ತು ಖುರಾನ್‌ಗಳ ಬಗ್ಗೆಯೂ ತಿಳಿದುಕೊಂಡನು. ಜ್ಞಾನದ ಕ್ಷಿತಿಜ ವಿಸ್ತಾರಗೊಂಡಿತ್ತು.

ಕಾಶೀನಾಥ ಹಿಲಾಲಪೂರಕ್ಕೆ ಬಂದ ಮೇಲೆ ಭಜನೆ ಸಂಘದೊಂದಿಗೆ ಸೇರಿ ಹಾಡುತ್ತ ಊರೂರು ಅಲೆಯತೊಡಗಿದನು. ಭಜನೆ ಸಂಘ ತೆಗೆದುಕೊಂಡು ಬೀದರಿನ ಪಾಪನಾಶ, ಚಿಂಚೋಳಿ ತಾಲೂಕಿನ ಗೊಟ್ಟಂಗೊಟ್ಟಿ, ಮಹಾರಾಷ್ಟ್ರದ ತುಳಜಾಪೂರ

ಹಾಗೂ ಪಂಡರಾಪೂರದವರೆಗೂ ಹೋಗಿದ್ದನು. ಭಜನೆಯಲ್ಲಿ ಕನ್ನಡ ಹಾಡುಗಳಲ್ಲದೆ, ಮರಾಠಿಯ ಅಭಂಗ, ಭಾರೊಢಾವನ್ನು ಹೇಳತೊಡಗಿದನು. ಮೋಹರಂ ಹಬ್ಬದ ದಿನಗಳಲ್ಲಿ ಕಾಶೀನಾಥನಿಗೆ ಬೇಡಿಕೆ ಇರುತ್ತಿತ್ತು. ದೂರದ ಹಳ್ಳಿಯ ಜನರು ಮೋಹರಂ ಹಾಡಲು ತಮ್ಮ ಹಳ್ಳಿಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ಮೋಹರಂ ಹಾಡುತ್ತ ಹಳ್ಳಿ ಹಳ್ಳಿಗಳನ್ನು ತಿರುಗಾಡುತ್ತಿದ್ದನು. ಮೋಹರಂ ಸವಾಲ್-ಜವಾಬ್ ಹಾಡಿನಲ್ಲಿ ಎದುರಾಳಿಗಳನ್ನು ಸೋಲಿಸಿ ಬಹುಮಾನವನ್ನು ಪಡೆಯುತ್ತಿದ್ದನು. ಹಾಡಿನಿಂದ ಕ್ಕಾಣಿಕೆಯ ರೂಪದಲ್ಲಿ ಹಣ ಸಿಗುತ್ತಿತ್ತು. ಅದರಿಂದ ಮನೆಯ ಖರ್ಚು ನಿಭಾಯಿಸತೊಡಗಿದನು. ಹೀಗೆ ಭಜನೆ ಮಾಡುತ್ತ ಪಾಪನಾಶ ಇತ್ಯಾದಿ ಸ್ಥಳಗಳಲ್ಲಿ ಅಲೆಯುತ್ತಿರುವ ಸಂದರ್ಭದಲ್ಲಿಯೇ ಊರಲ್ಲಿ ತಮ್ಮ ಲಕ್ಷ್ಮಣ ತೀರಿಕೊಂಡನು. ಕಾಶೀನಾಥನಿಗೆ ಇದರಿಂದ ತುಂಬ ದುಃಖವಾಯಿತು. ತಾನು ಯಾವಾಗಲೂ ಹೀಗೆ ದೇವರ ಭಜನೆ ಮಾಡುತ್ತ ದೇವರ ಸೇವೆಯಲ್ಲಿಯೇ ಇದ್ದರೂ ನನ್ನ ತಮ್ಮ ತೀರಿಕೊಂಡನಲ್ಲ ಎಂದು ಕಾಶೀನಾಥನಿಗೆ ಮೊದಲ ಬಾರಿಗೆ ದೇವರ ಬಗ್ಗೆ ಭ್ರಮನಿರಸನವುಂಟಾಯಿತು; ತಿರಸ್ಕಾರ ಭಾವನೆ ಮೂಡಿತ್ತು.

ಕಾಶೀನಾಥನಿಗೆ ಸಂಗೀತ ಹವ್ಯಾಸವೂ ಆಗಿತ್ತು; ಜೀವನ ನಿರ್ವಹಣೆಯ ಮಾರ್ಗವೂ ಆಗಿತ್ತು. ಸಂಗೀತವನ್ನೇ ವೃತ್ತಿಯಾಗಿ ಸ್ವೀಕರಿಸಿದ ಕಾಶೀನಾಥ ಭಜನೆಗಷ್ಟೇ ಸೀಮಿತವಾಗಲಿಲ್ಲ. ಹಳ್ಳಿ ಹಳ್ಳಿಗೆ ತಿರುಗಾಡಿ ಕೋಲಾಟ, ಬಯಲಾಟಗಳನ್ನು ಕಲಿಸತೊಡಗಿದನು. ಇದರಿಂದಾಗಿ ಸೃಜನಶೀಲ ಸಾಮರ್ಥ್ಯವೂ ಬೆಳೆಯಿತು. ಕೋಲಾಟ, ಬಯಲಾಟಗಳಿಗೆ ಅವಶ್ಯಕತೆಗೆ ತಕ್ಕಂತೆ ಕಥೆ, ಸನ್ನಿವೇಶಗಳನ್ನು ಸೃಷ್ಟಿಸತೊಡಗಿದ್ದನು. ಸ್ವತಃ ಹಾಡುಗಳನ್ನು ರಚಿಸತೊಡಗಿದನು. ಕಾಶೀನಾಥನ ಕೊಳಲುವಾದನ ಪ್ರಸಿದ್ಧಿಯನ್ನು ಪಡೆದಿತ್ತು. ಕೋಲಾಟ ಮತ್ತು ಬಯಲಾಟಗಳಿಗೆ ಕಾಶೀನಾಥನ ಕೊಳಲುವಾದನ ವಿಶೇಷ ಕಳೆಯನ್ನು ನೀಡುತ್ತಿತ್ತು ಕೇಳುಗರಿಗೆ ಆಹ್ಲಾದವನ್ನುಂಟು ಮಾಡಿ ಮೈಮರೆಸುತ್ತಿತ್ತು. ಒಂದೊಂದು ಸಲ ಒಬ್ಬನೇ ಏಕಕಾಲಕ್ಕೆ ತಾಳ ಮತ್ತು ತಬಲಗಳನ್ನು ನುಡಿಸುತ್ತಿದ್ದನು. ಕಾಲಿನಿಂದ ತಾಳ, ಕೈಯಿಂದ ತಬಲವನ್ನು ಕಾಶೀನಾಥ ನುಡಿಸುತ್ತಿದ್ದನಂತೆ.

ಕಾಶೀನಾಥ ಬಾಲ್ಯದಲ್ಲಿ ಅಜ್ಜ ಬಸಪ್ಪ ಹಾಗೂ ಅಮೀರಲಿ ಮಾಸ್ತರರಿಂದ ಬಯಲಾಟದ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದನು. ಈಗ ಸ್ವತಃ ತಾನೇ ಬಯಲಾಟವನ್ನು ಕಲಿಸತೊಡಗಿದ ಮೇಲೆ ಜನರು ಕಾಶೀನಾಥನನ್ನು 'ಕಾಶಿನಾಥ ಮಾಸ್ತರ' ಎಂದೇ ಗೌರವಿಸತೊಡಗಿದರು. ರಾಮ-ಲಕ್ಷ್ಮಣ, ಲವ-ಕುಶ, ವೀರ ಅಭಿಮನ್ಯು, ಕಾಶಗಿರಿ, ಭಿಕ್ಷುಕ ರಾಜ, ಚಿತ್ರಗುಪ್ತ-ಮುಂತಾದ ನೂರಾರು ನಾಟಕಗಳನ್ನು ಹೈದ್ರಾಬಾದ ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ಆಡಿಸಿದ ಕೀರ್ತಿ ಕಾಶೀನಾಥ ಗವಾಯಿಗಳಿಗೆ ಸಲ್ಲುತ್ತದೆ. ಅಷ್ಟೇ ಅಲ್ಲ, ಹೈದ್ರಾಬಾದ ಕರ್ನಾಟಕದ ಆಚೆ ಬಿಜಾಪೂರ ಜಿಲ್ಲೆಯವರೆಗೂ ಹೋಗಿ ಬಯಲಾಟವನ್ನು ಆಡಿಸಿದ್ದಾರೆ. ಹಲವಾರು ನಾಟಕಗಳಲ್ಲಿ ತಾವೇ ಪಾತ್ರವಹಿಸಿ, ಬಣ್ಣ ಹಚ್ಚಿಕೊಂಡು ಅಭಿನಯಿಸಿ ಜನಮನವನ್ನು ಗೆದ್ದಿದ್ದಾರೆ. ಅನೇಕರಿಗೆ ಸಂಗೀತ ಬಯಲಾಟದ ಕಲೆಯನ್ನು ಕಲಿಸಿಕೊಟ್ಟು ಪ್ರೋತ್ಸಾಹಿಸಿದ್ದಾರೆ. ಕಾಶೀನಾಥ ಗವಾಯಿಗಳಿಗೆ ರಾಜ್ಯೋತ್ಸವ ಪ್ರಶಸ್ತಿ

ನೀಡಿದ ಸಂದರ್ಭದಲ್ಲಿ, ಕರ್ನಾಟಕ ಸರ್ಕಾರವು ಪ್ರಕಟಿಸಿರುವ ಪ್ರಶಸ್ತಿ ವಿಜೇತರ ಪರಿಚಯವಿರುವ ಕಿರು ಹೊತ್ತಿಗೆಯಲ್ಲಿಯೂ 'ಶಾಲೆ ಕಾಲೇಜುಗಳಲ್ಲಿ, ಹಳ್ಳಿಗಳಲ್ಲಿ ನೂರಾರು ನಾಟಕಗಳನ್ನು ಕಲಿಸಿ ಹೈದ್ರಾಬಾದ ಕರ್ನಾಟಕದ ನಾಟಕ ಮಾಸ್ತರರೆಂದೇ ಪ್ರಸಿದ್ಧರಾಗಿದ್ದಾರೆ' ಎಂದು ಕಾಶೀನಾಥ ಗವಾಯಿಗಳ ಬಯಲಾಟದ ಕೊಡುಗೆಯನ್ನು ಎತ್ತಿ ಹೇಳಲಾಗಿದೆ.

ಹೈದ್ರಾಬಾದ ಕರ್ನಾಟಕದ ರಂಗಭೂಮಿಗೆ ಅಮೀರಲಿ ಮಾಸ್ತರ ಮತ್ತು ಕಾಶೀನಾಥ ಗವಾಯಿಗಳ ಕೊಡುಗೆ ಗಮನಾರ್ಹವಾದುದು. ಇವರಿಬ್ಬರು ಬಯಲಾಟವನ್ನು ಕಲಿಸುತ್ತಾ ಹೈದ್ರಾಬಾದ ಕರ್ನಾಟಕದ ತುಂಬೆಲ್ಲ ಸಂಚರಿಸಿದ್ದಾರೆ. ಒಂದೊಂದು ಊರುಗಳಲ್ಲಿ ತಿಂಗಳುಗಟ್ಟಲೆ ಉಳಿದು ಹಾಡಕ್ಕಿ ಕಲಿಸಿದ್ದಾರೆ. ನೂರಾರು ಬಯಲಾಟಗಳನ್ನು ಆಡಿಸಿದ್ದಾರೆ. ಆ ಮೂಲಕ ಹೈದ್ರಾಬಾದ ಕರ್ನಾಟಕದ ರಂಗಭೂಮಿಯನ್ನು ಶ್ರೀಮಂತಗೊಳಿಸಿದ್ದಾರೆ.

## ಬುದ್ಧ-ಅಂಬೇಡ್ಕರರ ತತ್ತ್ವದೆಡೆಗೆ

ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಬುದ್ಧ ಹಾಗೂ ಅಂಬೇಡ್ಕರರ ವಿಚಾರಗಳನ್ನು ಹಾಡುಗಳ ಮೂಲಕ ದಲಿತರ ಮನೆಮನೆಗೆ ತಲುಪಿಸಿ, ಆ ಮೂಲಕ ದಲಿತ ಸಮುದಾಯ ದಲ್ಲಿ ಜಾಗೃತಿಯನ್ನುಂಟು ಮಾಡಿದ ಮೊದಲ ಕವಿ ಎಂಬ ಗೌರವಕ್ಕೆ ಪಾತ್ರರಾಗಿರುವ ಕಾಶೀನಾಥ ಗವಾಯಿಗಳಿಗೆ, ಮೊದಲು ಬುದ್ಧ ಹಾಗೂ ಅಂಬೇಡ್ಕರರ ಬಗ್ಗೆ ಏನೇನೂ ತಿಳಿದಿರಲಿಲ್ಲ. ಸಂಗೀತ ಹಾಗೂ ಹಾಡುಗಾರಿಕೆಯನ್ನು ವೃತ್ತಿಯನ್ನಾಗಿ ಮಾಡಿಕೊಂಡು, ಹಳ್ಳಿ ಹಳ್ಳಿಗಳಿಗೆ ತಿರುಗಾಡಿ ಸಂಪ್ರದಾಯದ ಭಜನೆ ಹಾಡುಗಳನ್ನು ಹೇಳುತ್ತಿದ್ದರು, ಅವು ಹಿಂದೂಧರ್ಮ ಹಾಗೂ ದೇವರುಗಳಿಗೆ ಸಂಬಂಧಪಟ್ಟವುಗಳಾಗಿದ್ದವು. ದೇವರ ಸ್ತುತಿಗಳು, ಆತ್ಮ-ಪರಮಾತ್ಮದ ಕಲ್ಪನೆಗಳೇ ಅವುಗಳಲ್ಲಿ ಹೆಚ್ಚಾಗಿ ಇರುತ್ತಿದ್ದವು. ಹರಿಭಜನೆ, ಅಭಂಗ, ಭಾರೋಢಾ ಇವು ಅವರ ಹಾಡುಗಾರಿಕೆಯಲ್ಲಿ ಸೇರಿದ್ದವು. ಸಂಪ್ರದಾಯವನ್ನು ಬಿಟ್ಟರೆ, ಅವರು ಹಾಡುವ ಹಾಡುಗಳಲ್ಲಿ ಯಾವುದೇ ವೈಚಾರಿಕತೆ ಇರಲಿಲ್ಲ. ಕಾಶೀನಾಥ ಗವಾಯಿಗಳಿಗೂ ಮೊದಮೊದಲು ಯಾವುದೇ ವೈಚಾರಿಕ ನಿಲುವುಗಳಾಗಲಿ, ಬದ್ಧತೆ ಯಾಗಲಿ ಇರಲಿಲ್ಲ.

ನಾಗರೀಕತೆಯ ಸೋಂಕಿಲ್ಲದ, ಒಂದು ಶಾಲೆಯೂ ಇಲ್ಲದೆ, ಅನಕ್ಷರತೆಯ ಬೀಡಾದ, ನಗರ ಪ್ರದೇಶದಿಂದ ದೂರದಲ್ಲಿರುವ ಅಂದಿನ ಹಿಲಾಲಪೂರದಂತಹ ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದ ಕಾಶೀನಾಥ ಗವಾಯಿಗಳಿಗೆ ಬುದ್ಧ-ಅಂಬೇಡ್ಕರರ ಜೀವನ ತತ್ವಸಿದ್ಧಾಂತಗಳು ಹೇಗೆ ಗೊತ್ತಾದವು? ಸುಮಾರು ೫೦-೬೦ರ ದಶಕಗಳಷ್ಟು ಹಿಂದೆಯೇ ಅವರಿಗೆ ಅವುಗಳನ್ನು ತಿಳಿಸಿಕೊಟ್ಟವರಾರು? ಅವುಗಳನ್ನು ತಿಳಿದುಕೊಳ್ಳುವ ಸನ್ನಿವೇಶ ಹಾಗೂ ಸಂದರ್ಭಗಳು ಹೇಗೆ ಒದಗಿ ಬಂದವು? ಎಂಬಿತ್ಯಾದಿ ಪ್ರಶ್ನೆಗಳನ್ನು ಹಾಕಿಕೊಂಡು ಉತ್ತರ ಹುಡುಕಲು ಹೊರಟರೆ, ಗವಾಯಿಗಳು ಬುದ್ಧ-ಅಂಬೇಡ್ಕರರ ತತ್ವದೆಡೆಗೆ ತಿರುಗಲು ಕಾರಣವಾದ ಎರಡು-ಮೂರು ಪ್ರಮುಖ ಘಟನೆಗಳು ಕಾಣಸಿಗುತ್ತವೆ. ಒಂದನೆಯದು, ಮಾಣಿಕರಾವ ಜ್ಯೋತಿಯವರ ಪರಿಚಯ ಹಾಗೂ ಅವರೊಂದಿಗಿನ ಒಡನಾಟ.

ಎರಡನೆಯದು, ಅಂಬೇಡ್ಕರ ಹಾಗೂ ಬಿ. ಶ್ಯಾಮಸುಂದರರ ಭಾಷಣ ಕೇಳಿದ್ದು, ಮೂರನೆಯದು ಅಜ್ಜ ಬಸಪ್ಪನ ಪ್ರಭಾವ ಮತ್ತು ಪ್ರೇರಣೆ.

ಒಮ್ಮೆ ಮೋಹರಂ ಹಬ್ಬದ ದಿನಗಳಲ್ಲಿ ಅಲಾಯಿ ಹಾಡುತ್ತಾ ಮೂರ್‍ನಾಲ್ಕು ಜನ ಸಂಗಡಿಗರೊಂದಿಗೆ ಊರೂರು ಸಂಚರಿಸುತ್ತಾ, ಕಾಶೀನಾಥ ಗವಾಯಿಗಳು ಮೀನಕೇರಿ ಎಂಬ ಹಳ್ಳಿಗೆ ಹೋದರು. ಅವರ ಖ್ಯಾತಿ ಈಗಾಗಲೇ ಬೀದರ ಜಿಲ್ಲೆಯ ತುಂಬೆಲ್ಲ ಹರಡಿದ್ದರಿಂದ ಅವರು ಬರುವರೆಂದರೆ ಅದು ಸುದ್ದಿಯಾಗುತ್ತಿತ್ತು. ಮೋಹರಂನಲ್ಲಿ ಅವರ ವಿರುದ್ಧ ಸವಾಲ್-ಜವಾಬ್ ಹಾಡಲು ಯಾರು ಮುಂದೆ ಬರುತ್ತಿರಲಿಲ್ಲ. ಬಂದವರಿಗೆ ಸೋಲು ತಪ್ಪುತ್ತಿರಲಿಲ್ಲ. ಮೀನಕೇರಿಗೆ ಬಂದಾಗ ಇವರ ವಿರುದ್ಧ ಯಾರಿಗೆ ಹಾಡಿಸಬೇಕೆಂದು ಅಲ್ಲಿನ ಜನರಿಗೆ ಚಿಂತೆಯಾಯಿತು. ಪಾತರಪಳ್ಳಿ ಎಂಬ ಮತ್ತೊಂದು ಹಳ್ಳಿಯಲ್ಲಿ ಮಾಣಿಕರಾವ ಜ್ಯೋತಿ ಎಂಬುವವರು ಮೋಹರಂ ಹಾಡುವಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದರು. ಭಜನೆ, ಮೋಹರಂ, ಶಾಹಿರಿ ಹಾಡುವಲ್ಲಿ ಪ್ರವೀಣರಾಗಿದ್ದರು. ಮೀನಕೇರಿ ಕಡೆಯವರು ಮಾಣಿಕರಾವ ಜ್ಯೋತಿಯವರಲ್ಲಿಗೆ ಬಂದು 'ಅಲ್ಲಿ ಒಬ್ರು ಕಾಶೀನಾಥ ಅಂತ ಹಾಡೋರು ಬಂದಾರ. ಅಲ್ಯಾರ್‍ಬಿ ಅವಸರಿ ಟಕ್ಕಾಪಾರ ಮಾಡೋರಿಲ್ಲ, ನೀ ಆದರ ಅವರ ಸರಿ ಟಕ್ಕಾಪಾರಾಗ್ತದ ಬಾ' ಎಂದು ಮಾಣಿಕರಾವ ಜ್ಯೋತಿಯವರನ್ನು ಮೀನಕೇರಿಗೆ ಕರೆದು ಕೊಂಡು ಬಂದರು.

ಮೋಹರಂನಲ್ಲಿ ಸವಾಲ್-ಜವಾಬ್ ಹಾಡು ಆರಂಭವಾದವು. ಸವಾಲ್-ಜವಾಬ್‌ದಲ್ಲಿ ಹಾಡಿನ ಮೂಲಕವೇ ಪ್ರಶ್ನೆ ಕೇಳಬೇಕು; ಹಾಡಿನ ಮೂಲಕವೇ ಉತ್ತರ ನೀಡಬೇಕು. ಅಂದು ಮಾಣಿಕರಾವ ಜ್ಯೋತಿಯವರಿಗೂ ಕಾಶೀನಾಥ ಗವಾಯಿಗಳಿಗೂ ತೀವ್ರ ಸ್ಪರ್ಧೆ ಏರ್ಪಟ್ಟಿತ್ತು. ಇಡೀ ರಾತ್ರಿ ಕಳೆದು ಮಾರನೆಯ ದಿನ ಮಧ್ಯಾಹ್ನದವರೆಗೆ ಈ ಸ್ಪರ್ಧೆ ಮುಂದುವರಿಯಿತು. ಅಂದು ಮೀನಕೇರಿಯ ಜನರು ಇವರಿಬ್ಬರ ಸವಾಲ್-ಜವಾಬ್ ಹಾಡುಗಳನ್ನು ಬಹಳ ಆಸಕ್ತಿ ಹಾಗೂ ಕುತೂಹಲದಿಂದ ಕೇಳಿದರು. ಕಾಶೀನಾಥರ ಹಾಡುಗಳಿಗೆ ಮಾಣಿಕರಾವ ಜ್ಯೋತಿ ಉತ್ತರ ಕೊಟ್ಟರು. ಆದರೆ ಮಾಣಿಕರಾವ ಜ್ಯೋತಿಯವರ ಕೆಲವು ಹಾಡುಗಳಿಗೆ ಕಾಶೀನಾಥರಿಗೆ ಉತ್ತರ ಕೊಡಲು ಆಗಲಿಲ್ಲ. ಮಾಣಿಕರಾವ ಜ್ಯೋತಿಯವರ ಹಾಡಿನ ಬಗ್ಗೆ ಕಾಶೀನಾಥರಿಗೆ ಮೆಚ್ಚುಗೆಯಾಯಿತು. ಮಾರನೆಯ ದಿನ ಕಾಶೀನಾಥ ಗವಾಯಿಗಳು ಮಾಣಿಕರಾವ ಜ್ಯೋತಿಯವರ ನೆಂಟನೊಬ್ಬನನ್ನು ಕರೆದುಕೊಂಡು ಅವರಿದ್ದ ಪಾತರಪಳ್ಳಿಗೆ ಬಂದರು. ಮೂಲತಃ ಎಲಿಖಾಸಂಪೂರದವರಾದ ಮಾಣಿಕರಾವ ಜ್ಯೋತಿಯವರು ಆಗ ಪಾತರಪಳ್ಳಿಯ ಸೋದರಮಾವನ ಮನೆಯಲಿದ್ದು ಒಕ್ಕಲತನ ಮಾಡುತ್ತಿದ್ದರು. ಅಲ್ಲಿ ಅವರಿಬ್ಬರ ಭೇಟಿಯಾಗಿ, ಪರಿಚಯವಾಯಿತು. ಇಬ್ಬರೂ ಅತ್ಯಂತ ಆತ್ಮೀಯ ಗೆಳೆಯರಾದರು. ಗವಾಯಿಗಳ ಮರಣದವರೆಗೂ ಈ ಗೆಳೆತನ ಮುಂದುವರೆಯಿತು. ಇವರ ಗೆಳೆತನಕ್ಕೆ ಎಂದೂ ಕುಂದು ಬರಲಿಲ್ಲ.

ಓದು-ಬರಹ ತಿಳಿದವರಾಗಿದ್ದ ಮಾಣಿಕರಾವ ಜ್ಯೋತಿಯವರು ಕಾಶೀನಾಥ

ಗವಾಯಿಗಳ ಮನದಲ್ಲಿ ಬುದ್ಧ-ಅಂಬೇಡ್ಕರರ ವಿಚಾರಗಳನ್ನು ತುಂಬಿದರು. 'ಯಾರ್‍ಯಾರೋ ಏನೇನೋ ವಿಚಾರ ಹೇಳ್ತಾರ. ಆದರ ಬಾಬಾಸಾಹೇಬರು ಹೊಸ ವಿಚಾರ ಹೇಳತಾರಂತ, ನಾವಿದರ ಬಗ್ಗೆದಾಗ ವಿಚಾರ ಮಾಡೋಣ... ಬಾಬಾ ಸಾಹೇಬರು ಹಿಂದೂ ಧರ್ಮ ದಲ್ಲಿದ್ದರು. ಅವರ ಮನೆಯಲ್ಲಿ ಕಬೀರ ಪಂಥ ಇತ್ತು. ಅದೆಲ್ಲ ಬಿಟ್ಟು ಅವರು ಬುದ್ಧಧರ್ಮ ಸ್ವೀಕಾರ ಮಾಡ್ಯಾರಂದರ ಅದು ಹೆಂಥಾದದನೋ, ಅದರಲ್ಲೇನದನೊ ಇದರ ಬಗ್ಗೆ ವಿಚಾರ ಮಾಡಬೇಕು' ಎಂದು ನುಡಿದರು. ಮಾಣಿಕರಾವ ಜ್ಯೋತಿಯವರ ಈ ಮಾತುಗಳಿಂದ ಕಾಶೀನಾಥ ಗವಾಯಿಗಳಿಗೆ ಬುದ್ಧ-ಅಂಬೇಡ್ಕರರ ವಿಷಯದಲ್ಲಿ ಕುತೂಹಲ ಹುಟ್ಟಿತ್ತು. ಬಾಬಾಸಾಹೇಬರು ಬೌದ್ಧ ದೀಕ್ಷೆ ಪಡೆದ ಆ ದೀಕ್ಷಾಭೂಮಿ ನಾಗಪೂರನ್ನು ನೋಡಬೇಕೆನಿಸಿತು. ಹೇಗಾದರೂ ಮಾಡಿ ದೀಕ್ಷಾಭೂಮಿಗೆ ಕರೆದುಕೊಂಡು ಹೋಗಬೇಕೆಂದು ಮಾಣಿಕರಾವ ಜ್ಯೋತಿಯವನ್ನು ಕೇಳಿಕೊಂಡರು. ಇಬ್ಬರು ಸೇರಿ ೧೯೬೫ರ ಸುಮಾರಿನಲ್ಲಿ ನಾಗಪೂರಕ್ಕೆ ಹೋದರು. ಅಲ್ಲಿ ಪ್ರಸಿದ್ಧ ಬೌದ್ಧಬಿಕ್ಕು, ಭದಂತ ಆನಂದ ಕೌಸಲ್ಯಾಯನ ಅವರಿಂದ ಬೌದ್ಧ ದೀಕ್ಷೆಯನ್ನು ಪಡೆದರು.

ನಾಗಪೂರದಲ್ಲಿ ಕಾಶೀನಾಥ ಗವಾಯಿಗಳು ಗಾಯಕವಾಡ, ದಾದಾಸಾಹೇಬ, ಕುಂಬಾರೆ, ಆರ್.ಎಸ್. ಗವಾಯಿ, ಬಿ.ಪಿ. ಮೋರೆ ಮುಂತಾದ ಖ್ಯಾತ ನಾಮರ, ಅಂಬೇಡ್ಕರವಾದಿಗಳ ಭಾಷಣವನ್ನು ಕೇಳಿದರು. ಅವರ ವಿಚಾರಗಳಿಂದ ಪ್ರಭಾವಿತರಾದರು. ಅವರೆಲ್ಲರ ವಿಚಾರಗಳನ್ನು ಕೇಳಿ ತಿಳಿದುಕೊಂಡು ನಾಗಪೂರದಿಂದ ಹಿಂತಿರುಗಿ ಬರುವಾಗ ಬೌದ್ಧಾಚಾರ್ಯವಿಧಿ, ಹಾಗೂ ಅಂಬೇಡ್ಕರರು ಬರೆದ ಬುದ್ಧ ಅಂಡ್ ಹಿಜ್ ಧಮ್ಮ (ಆನಂದ ಕೌಸಲ್ಯಾಯನ ಹಿಂದಿಗೆ ಅನುವಾದಿಸಿದ) ಎಂಬ ಎರಡು ಪುಸ್ತಕಗಳನ್ನು ತೆಗೆದುಕೊಂಡು ಬಂದರು. ಅದರೊಳಗಿನ ವಿಷಯಗಳನ್ನೆಲ್ಲ ಓದಿ ಮಾಣಿಕರಾವ ಜ್ಯೋತಿಯವರು ಗವಾಯಿಗಳಿಗೆ ತಿಳಿಸಿಕೊಟ್ಟರು. 'ಅದರೊಳಗಿಂದೆಲ್ಲ ನಾ ಓದಿ ಹೇಳ್ದೆ, ಅವರಿಗಿ ಅದೆಲ್ಲ ಸತ್ಯ ಅನಸ್ತು, ಮೂರು ತಿಂಗಳು ಅವರಿಗಿ ನಮ್ಮನಿಯಲ್ಲೇ ಇಟ್ಕೊಂಡು, ರೋಜ ಒಂದು ಗಾಥಾ ಹೇಳ್ತಿದ್ದಾ. ಇವೊತ್ತು ನಾ ಒಂದು ಗಾಥಾ ಓದಿ ಹೇಳದಂದ್ರ, ಮರುದಿನ ಬಾಯಿಪಾಠ ಮಾಡ್ತಿದ್ರು, ಅಂಥ ಕಂಪ್ಯೂಟರ್ ತಲೆ ಅವ್ರುದು. ಮೂರೇ ತಿಂಗಳದಾಗ ಅಷ್ಟು ಗಾಥಾಗಳೆಲ್ಲ ಬಾಯಿಪಾಠ ಮಾಡ್ಯಾರ' ಎಂದು ಮಾಣಿಕರಾವ ಜ್ಯೋತಿಯವರು ಇಂದಿಗೂ ನೆನಪಿಸಿಕೊಳ್ಳುತ್ತಾರೆ.

ಇದಕ್ಕೂ ಮುಂಚೆ ೧೯೫೧ರಲ್ಲಿ ಒಮ್ಮೆ ಅಜ್ಜ ಬಸಪ್ಪನೊಂದಿಗೆ ಸೋಲಾಪೂರಕ್ಕೆ ಹೋಗಿದ್ದ ಕಾಶೀನಾಥ ಗವಾಯಿಗಳು ಅಲ್ಲಿ ಅಂಬೇಡ್ಕರರ ಭಾಷಣವನ್ನು ಕೇಳಿದ್ದರು. ದಲಿತರ ಅಜ್ಞಾನ, ಬಡತನ, ಅಸಹಾಯಕತೆ, ಕಷ್ಟದ ಬದುಕಿನ ಬಗ್ಗೆ ಅಂಬೇಡ್ಕರರು ತಮ್ಮ ಭಾಷಣದಲ್ಲಿ ಭಾವುಕರಾಗಿ ನುಡಿದಿದ್ದರು. ಅವರ ಭಾಷಣ ಕಾಶೀನಾಥ ಗವಾಯಿಗಳ ಮನದಲ್ಲಿ ಉಳಿದುಕೊಂಡಿತ್ತು. ಮತ್ತೊಬ್ಬ ದಲಿತ ನಾಯಕ ಬಿ. ಶ್ಯಾಮಸುಂದರರ ಭಾಷಣವೂ ಕಾಶೀನಾಥ ಗವಾಯಿಗಳನ್ನು ಬಹಳ ಪ್ರಭಾವಿಸಿತು. ಅಂಬೇಡ್ಕರರ ನಂತರ ದಲಿತರನ್ನು ಜಾಗೃತಗೊಳಿಸಲು ಶ್ರಮಿಸಿದ ಬಿ. ಶ್ಯಾಮಸುಂದರರವರು ವಿದ್ವತ್ತು, ವಾಕ್‌ಪಟುತ್ವ, ಪ್ರಗತಿಪರ ಕ್ರಾಂತಿಕಾರಕ ವಿಚಾರಗಳಿಂದಾಗಿ ಖ್ಯಾತಿಯನ್ನು ಪಡೆದಿದ್ದರು. ಅವರು ದಲಿತರ

ಹಾಗೂ ಕಾರ್ಮಿಕರ ಶೋಷಣೆಯ ವಿರುದ್ಧ ತಮ್ಮ ಭಾಷಣಗಳಲ್ಲಿ ಸಿಂಹಗರ್ಜನೆ ಮಾಡುತ್ತಿದ್ದರು.

ಒಮ್ಮೆ ಬೀದರಿನ ಉಸ್ಮಾನಗಂಜದಲ್ಲಿ ಬಿ. ಶ್ಯಾಮಸುಂದರರ ಭಾಷಣವಿತ್ತು. ಹಳ್ಳಿ-ಹಳ್ಳಿಗಳಿಂದ ಸಾವಿರಾರು ಜನರು ಅವರ ಭಾಷಣ ಕೇಳಲು ಬಂದು ಸೇರಿದ್ದರು. ಕಾಶೀನಾಥ ಗವಾಯಿಗಳು ಗೆಳೆಯ ಮಾಣಿಕರಾವ ಜ್ಯೋತಿಯವರೊಂದಿಗೆ ಬಿ. ಶ್ಯಾಮಸುಂದರರ ಭಾಷಣ ಕೇಳಲು ಹೋಗಿದ್ದರು. ಬಿ. ಶ್ಯಾಮಸುಂದರರು ತಮ್ಮ ಭಾಷಣದಲ್ಲಿ ಕಾರ್ಮಿಕರನ್ನು ಕುರಿತು ಹೀಗೆ ಹೇಳಿದರು. 'ಏಕ ಮಜದೂರ ಅದಮಿ ದಿನಭರ್ ಕಾಮ್ ಕರಕೆ, ಹಜಾರೊ ಥೈಲಾ ರ್‍ಯಾಶನ್ ಭರ್ ಭರ್‌ಕೆ, ಉಸಕೊ ಸಿಲಾಕೆ, ಬಂಡಿಮೆ ದಾಲಕೆ, ಅಡತಕೊ ಲಾಕೆ ಲಗಾದೆತಾ ಹೈ. ಮಗರ್ ಉಸಕಾ ಪಲ್ಲುಮೆ ಏಕ ಮುಟ್ಟಿಭರ್ ಖಾನಾ ಉಸಕೊ ನಹಿ ಮಿಲೆತೊ ಎ ಹಜಾರೊ ಥೈಲಾ ರ್‍ಯಾಶನ್ ಲೇಕ್ ಹಮಕೊ ಕ್ಯಾಕರನಾ ಹೈ? ಇಸಿಲಿಯೆ ಉಸಕೊ ಆಗ್ ಲಗಾನಾ ಚಾಹಿಯೆ ಕೋಯಿ ಪಾಪ ನಹಿಲಗತಾ'.

ಮತ್ತೊಮ್ಮೆ ದಲಿತರನ್ನು ಉದ್ದೇಶಿಸಿ ಹೀಗೆ ಹೇಳಿದರು. 'ಮೆರೆ ಭಾಯಿಯೊಂಕೊ ಮೈ ಏ ಕಹಿತಾ ಹುಂ ಕಿ, ಹಾಥಮೆ ಕಾನ್ಸೂರಿ ಲಾಟಿ ರಹಿನಾ ಚಾಹಿಯೆ, ಯಾ ನಹಿತೊ ಕೊರಡಿ ಸಾಥ ರಹಿನಾ ಚಾಹಿಯೆ, ಕೆಂವಕೆ ಬೀಚಮೆ ರಸ್ತೆಮೆ ಸಾಂಪ ಆಜಾತಾ ಹೈ ಯಾ ಕುತ್ತಾ ಆಜಾತಾ ಹೈ. ಕುಚ್‌ನ ಕುಚ್ ಆತಾ ಹೈ ತೊ ತಬ್ ಹಮಾರ ಉಪ್ಪರ ಹಮಲಾ ಕರೆತೊ ತಬ್ ಕ್ಯಾಕರತೆ ಹಾಥಮೆ ಕುಚ್ ನಹಿರಹೆತೊ? ಇಸಿಲಿಯೆ ಮೈ ಬೊಲತಾ ಹುಂ, ಕಿ ಆಪಕೆ ಸಾಥ್ ಲಾಟಿ ಯಾ ಕೊರಡಿ ರಹಿನಾ ಚಾಹಿಯೆ' ಬಿ. ಶ್ಯಾಮಸುಂದರರ ಇಂತಹ ಆವೇಶಪೂರ್ಣ ಭಾಷಣಗಳು ಕಾಶೀನಾಥ ಗವಾಯಿಗಳ ಮೇಲೆ ತೀವ್ರ ಪರಿಣಾಮವನ್ನು ಬೀರಿದವು.

ಕಾಶೀನಾಥ ಗವಾಯಿಗಳು ಮುಂದೆ ಅನೇಕ ಬಾರಿ ನಾಗಪೂರಕ್ಕೆ ಹೋದರು. ಮಾಣಿಕರಾವ್ ಜ್ಯೋತಿಯವರೊಂದಿಗೆ ಸೇರಿ ಬುದ್ಧಗಯಾ, ಸಾರನಾಥಕ್ಕೂ ಹೋಗಿ ಬಂದರು. ಬುದ್ಧಗಯಾಕ್ಕೆ ಹೋದಾಗ ಬುದ್ಧನಿಗೆ ಜ್ಞಾನೋದಯವಾದ ಸ್ಥಳ ಹಾಗೂ ಆ ಬೋಧಿವೃಕ್ಷವನ್ನು ಕೈಸವರಿ ಮುಟ್ಟಿ ಇದೆ ಬುದ್ಧನಿಗೆ ಜ್ಞಾನೋದಯವಾದ ಸ್ಥಳವೆಂದು ಅಲ್ಲಿಯೇ ಕುಳಿತು ಬಿಟ್ಟರಂತೆ, ಸಾರನಾಥ ಬುದ್ಧ ಮೊದಲ ಬಾರಿಗೆ ತನ್ನ ಐದು ಜನ ಶಿಷ್ಯರಿಗೆ ಉಪದೇಶಮಾಡಿದ ಸ್ಥಳ. ಅಲೆಲ್ಲ ಸುತ್ತಾಡಿದರು. ಬುದ್ಧ-ಅಂಬೇಡ್ಕರರ ವಿಚಾರಗಳು ತಿಳಿದ ಮೇಲೆ ಕಂದಾಚಾರದಿಂದ ಕೂಡಿದ ಹಿಂದೂ ಧರ್ಮದ ಬಗ್ಗೆ ಗವಾಯಿಗಳ ಮನಸ್ಸಿನಲ್ಲಿ ತಿರಸ್ಕಾರ ಭಾವನೆ ಹುಟ್ಟಿತ್ತು. 'ಅಂಥ ಹಿಂದೂ ಧರ್ಮವ ಬಿಟ್ಟು ಬುದ್ಧಧರ್ಮದೊಳು ಬರ್ತೀರಾ ಅಲ್ಲೇ ಇರತೀರಾ?' ಎಂದು ಪದಕಟ್ಟಿ ಹಾಡಿದ್ದಾರೆ. ನಂತರ ಮೊದಲಿನ ಭಜನೆ, ಮೋಹರಂ ಎಲ್ಲ ಬಿಟ್ಟುಕೊಟ್ಟರು. ಬುದ್ಧ-ಅಂಬೇಡ್ಕರರ ಜೀವನ ಹಾಗೂ ತತ್ವಗಳನ್ನು ಕುರಿತು ಸ್ವತಃ ಹಾಡುಗಳನ್ನು ರಚಿಸಿ ಹಾಡತೊಡಗಿದರು. ಈ ಭಾಗದಲ್ಲಿ ಬುದ್ಧ ಅಂಬೇಡ್ಕರರ ವಿಚಾರಗಳನ್ನು ಹಾಡುಗಳ ಮೂಲಕ ದಲಿತರ ಮನೆಮನೆಗೆ ಮುಟ್ಟಿಸಿದ ಕೀರ್ತಿ ಕಾಶೀನಾಥ ಗವಾಯಿಗಳಿಗೆ ಸಲ್ಲುತ್ತದೆ. ಜೀವನದ

ಕೊನೆಯವರೆಗೂ ಈ ಕೆಲಸವನ್ನು ಅವರು ಅತ್ಯಂತ ನಿಷ್ಠೆ ಹಾಗೂ ಕಾಳಜಿಯಿಂದ ಮುಂದುವರೆಸಿಕೊಂಡು ಬಂದರು. ಹೈದ್ರಾಬಾದ ಕರ್ನಾಟಕದ ದಲಿತ ಸಮುದಾಯದಲ್ಲಿ ಬುದ್ಧ-ಅಂಬೇಡ್ಕರ ಪ್ರಜ್ಞೆ ಮೂಡಿಸಲು ಗವಾಯಿಗಳು ಪಟ್ಟ ಶ್ರಮ ಅಸಾಧಾರಣವಾದುದು.

### ಹಿಂಸಾತ್ಮಕ ಕಾರ್ಯ ತಡೆಯಲು ಹೋರಾಟ

ದೇವರ ಮುಂದೆ ಕುರಿ-ಕೋಣಗಳನ್ನು ಬಲಿಕೊಟ್ಟು ಕಾರ್ಯ ಆಚರಿಸುವ ಅನಿಷ್ಟ ಪದ್ಧತಿ ಹಿಂದಿನ ಕಾಲದಿಂದಲೂ ನಡೆದುಕೊಂಡು ಬಂದಿತ್ತು. ಈಗಲೂ ಅದು ಸಂಪೂರ್ಣವಾಗಿ ನಿಂತಿಲ್ಲ. ದೇವರ ಮುಂದೆ ಕೋಣವನ್ನು ಬಲಿಕೊಡುವುದು ಕಾನೂನು ಬಾಹಿರವೆಂದು ಸರ್ಕಾರ ಘೋಷಿಸಿದರೂ ನಮ್ಮ ಧಾರ್ಮಿಕ ಮೂಢರು ಅದನ್ನು ಕದ್ದು ಮುಚ್ಚಿ ಆಚರಿಸುತ್ತಲೇ ಬಂದಿದ್ದಾರೆ. ವಿಪರ್ಯಾಸವೆಂದರೆ ಇಂತಹ ಹಿಂಸಾತ್ಮಕ ಕಾರ್ಯ ಆಚರಣೆ ದೇವರು ಮತ್ತು ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದವು. ಕೋಣ-ಕುರಿಗಳನ್ನು ಕಡಿದು ಅವುಗಳ ನೆತ್ತರು ದೇವರ ಮುಂದೆ ಚೆಲ್ಲುತ್ತಿದ್ದರು. ಕುಡಿದ ಅಮಲಿನಲ್ಲಿ ಕಿರಿಚಾಡುತ್ತಿದ್ದರು. ಜೀವಂತ ಕುರಿಮರಿಯನ್ನು ಬಾಯಿಂದ ಹರಿದು(ಗಾವು) ದಾನವರಂತೆ ವರ್ತಿಸುತ್ತಿದ್ದರು. ಇಲ್ಲಿ ಭಕ್ತ ಕಟುಕನಾಗಿದ್ದ. ಅಷ್ಟೇ ಅಲ್ಲ ಬಡ ಮುಗ್ಧ ಹೆಣ್ಣುಮಕ್ಕಳನ್ನು ದೇವರ ಮುಂದೆ ಸಾರ್ವಜನಿಕರ ಎದುರಿನಲ್ಲಿ ಕುಣಿಸಲಾಗುತ್ತಿತ್ತು. ಇದನ್ನು ನೋಡಿ ಊರಿನ ಪಟ್ಟಭದ್ರರು ಆನಂದ ಪಡುತ್ತಿದ್ದರು. ಖಂಡ-ಹೆಂಡ-ನೆತ್ತರು ದೇವರಿಗೆ ಪ್ರಿಯವಾದುದೆ? ದೇವರ ಮುಂದೆ ಕಡಿದ ಕೋಣ ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಿರುವುದನ್ನು ಕಂಡು ಯಾವ ದೇವರಿಗೆ ತಾನೆ ಸಂತೋಷವಾದೀತು? ಇದು ಭಕ್ತಿ ಸಲ್ಲಿಸುವ ರೀತಿಯೆ? ಆದರೂ ಜನರು ಅಜ್ಞಾನಿಗಳಾಗಿದ್ದರು. ವಿಚಿತ್ರವೆಂದರೆ ಜಗತ್ತಿಗೆ ವೈಚಾರಿಕತೆಯನ್ನು ಬೋಧಿಸಿದ, ಅಹಿಂಸೆಯನ್ನು ಪ್ರತಿಪಾದಿಸಿದ, ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದ ಬಸವಾದಿ ಶರಣರ ಕಾರ್ಯಕ್ಷೇತ್ರವಾದ ಕಲ್ಯಾಣ ಕರ್ನಾಟಕ ಭಾಗದಲ್ಲಿಯೇ ಇದು ಹೆಚ್ಚಿನ ಪ್ರಮಾಣದಲ್ಲಿ ಆಚರಣೆಯಲ್ಲಿತ್ತು. ಹಳ್ಳಿ-ಹಳ್ಳಿಗಳ ಮಧ್ಯೆ ಕಾರ್ಯಾಚರಣೆಯಲ್ಲಿ ಪೈಪೋಟಿ ಏರ್ಪಡುತ್ತಿತ್ತು. ನೂರಾರು ಕೋಣ-ಕುರಿಗಳನ್ನು ದೇವರಿಗೆ ಬಲಿಕೊಡಲಾಗುತ್ತಿತ್ತು. ಅದನ್ನು ನೋಡಲು ಜನರು ಜಾತ್ರೆಯಂತೆ ಸೇರುತ್ತಿದ್ದರು.

> ದಯವಿಲ್ಲದ ಧರ್ಮ ಅದಾವುದಯ್ಯಾ?
> ದಯವೇ ಬೇಕು ಸಕಲ ಪ್ರಾಣಿಗಳೆಲ್ಲದರಲಿ
> ದಯವೇ ಧರ್ಮದ ಮೂಲವಯ್ಯಾ

ಎಂಬ ಬಸವಣ್ಣನವರ ಮಾತಿಗೆ ಅವರು ಕಿವುಡಾಗಿದ್ದರು. ಬಸವಣ್ಣನವರ ಸಪ್ತಸೂತ್ರಗಳಲ್ಲಿ ಒಂದಾದ 'ಕೊಲಬೇಡ'ವೆಂಬುವುದೂ ಧರ್ಮಾಂಧರ ಕಿವಿಗೆ ಇಳಿದಿರಲಿಲ್ಲ.

ಹೈದ್ರಾಬಾದ ಕರ್ನಾಟಕದ ಡಾಕುಳಗಿ, ನಾರಾಯಣಪೂರ, ಇಸ್ಲಾಂಪೂರ, ಹಣಕುಣಿ, ಹಲಚೇರಿ, ದೇವಗಿರಿ, ಕೊಡದೂರು ಮುಂತಾದ ಊರುಗಳಲ್ಲಿ ಆಚರಿಸುತ್ತಿದ್ದ ಕಾರ್ಯಗಳು ಬಹಳ ಪ್ರಸಿದ್ಧಿಯನ್ನು ಪಡೆದಿದ್ದವು. ಲಕ್ಷ್ಮಿ, ದ್ಯಾವಮ್ಮಾ, ಮರಗೆಮ್ಮಾ, ದುರ್ಗೆಮ್ಮಾ ಮುಂತಾದ ದೇವರುಗಳ ಮುಂದೆ ನೂರಾರು ಕೋಣಗಳನ್ನು ಕಡಿದು ರಾಶಿ ಒಟ್ಟಲಾಗುತ್ತಿತ್ತು. ಬೌದ್ಧ

ಧರ್ಮಕ್ಕೆ ಮಾರು ಹೋಗಿ ಬುದ್ಧನ ಅಹಿಂಸಾ ತತ್ವವನ್ನು ನಂಬಿದ ಕಾಶೀನಾಥ ಗವಾಯಿಗಳಿಗೆ ಇಂತಹ ಕಾರ್ಯಾಚರಣೆ ಸರಿಕಾಣಲಿಲ್ಲ. ಇಂತಹ ಹಿಂಸಾತ್ಮಕ

ಕಾರ್ಯಾಚರಣೆಯನ್ನು ಜನವಿರೋಧಿ, ಜೀವವಿರೋಧಿ, ಧರ್ಮವಿರೋಧಿ, ದೈವವಿರೋಧಿ ಹಾಗೂ ಕಾನೂನು ವಿರೋಧಿಯೆಂದು ಭಾವಿಸಿದರು. ಅಲ್ಲದೆ ಕಾರ್ಯ ಆಚರಣೆ ನೆಪದಲ್ಲಿ ದಲಿತ ಸ್ತ್ರೀ-ಪುರುಷರ ಶೋಷಣೆ ನಡೆಯುತ್ತಿರುವುದನ್ನು ಮನಗಂಡರು. ದಲಿತರು ಜಾಣಿ-ಜೋಗಣಿ, ಪೋತ್ಯಾ, ಭೂತಾಳ್ಯಾ ಆಗಿ ಕಾರ್ಯದಲ್ಲಿ ಕುಣಿಯುವುದನ್ನು ತಪ್ಪಿಸಲು ಹಾಗೂ ಹಿಂಸೆಯನ್ನು ಕೊನೆಗಾಣಿಸಲು ಕಾರ್ಯಾಚರಣೆಯನ್ನು ತಡೆಯ ಬೇಕೆಂದು ಕಾಶೀನಾಥ ಗವಾಯಿಗಳು ದೃಢಸಂಕಲ್ಪಮಾಡಿದರು.

ಕಾಶೀನಾಥ ಗವಾಯಿಗಳ ಊರಾದ ಹಿಲಾಲಪೂರ ಸೀಮೆಗೆ ಹೊಂದಿಕೊಂಡೇ ಡಾಕುಳಗಿ ಎಂಬ ಊರಿದೆ. ಅಲ್ಲಿ ಆಚರಿಸುವ ಲಕ್ಷ್ಮಿದ್ಯಾವಮ್ಮನ ಕಾರ್ಯ ಬಹಳ ಪ್ರಸಿದ್ಧವಾಗಿತ್ತು. ದೊಡ್ಡದಾದ ಲಕ್ಷ್ಮಿದ್ಯಾವಮ್ಮನ ಗುಡಿಯೂ ಇತ್ತು. (ಈಗ ಆ ಊರು ಮತ್ತು ಗುಡಿ ಕಾರಂಜಾ ಹಿನ್ನೀರಿನಲ್ಲಿ ಮುಳುಗಡೆಯಾಗಿದೆ) ಡಾಕುಳಗಿಯ ಕಾರ್ಯ ಆಚರಣೆ ಕಾಶೀನಾಥರು ತೀರ ಚಿಕ್ಕವರಿದ್ದಾಗಿನಿಂದಲೂ (ಆಗಿನ್ನು ಕಣ್ಣುಗಳಿದ್ದವು) ನೋಡುತ್ತಾ ಬಂದಿದ್ದರು. ತಾತನ ಹೆಗಲ ಮೇಲೆ ಕುಳಿತು ಕಾರ್ಯ ನೋಡಲು ಡಾಕುಳಗಿಗೆ ಹೋಗುತ್ತಿದ್ದರು. ಬಾಲ್ಯದಲ್ಲಿ ನೋಡಿದ ಅಲ್ಲಿನ ಪ್ರತಿಯೊಂದು ಘಟನೆಯೂ ಅವರ ನೆನಪಿನಲ್ಲಿ ಉಳಿದಿತ್ತು. ಈಗ ಅದನ್ನು ತಡೆಯಲು ಮುಂದಾಗಿ ಕಾರ್ಯಾಚರಣೆಯ ಸಂದರ್ಭದಲ್ಲಿ ಡಾಕುಳಗಿಗೆ ಹೋದರು. ಅಲ್ಲಿನ ಜನರು ಗವಾಯಿ ಗಳನ್ನು ವಿರೋಧಿಸಿದರು. ಇವರೊಂದಿಗೆ ವಾದಕ್ಕಿಳಿದು ವಾಪಾಸ ಕಳುಹಿಸಿಕೊಟ್ಟರು. ಆದರೂ ಗವಾಯಿಗಳು ಪಟ್ಟು ಬಿಡಲಿಲ್ಲ. ಕೆಲವು ದಲಿತರ ಸಹಾಯ ಪಡೆದುಕೊಂಡು ಹೋಗಿ ಡಾಕುಳಗಿಯ ಕಾರ್ಯವನ್ನು ನಿಲ್ಲಿಸುವಲ್ಲಿ ಯಶಸ್ವಿಯಾದರು. ಅಲ್ಲಿಯೇ ಕಾರ್ಯ ಕುರಿತು ಪದಕಟ್ಟಿ ಹಾಡಿ ಜನರಲ್ಲಿ ಜಾಗೃತಿ ಮೂಡಿಸಿದರು.

ಕಾರ್ಯಾಚರಣೆಯ ವಿರುದ್ಧ ಹಂತ ಹಂತವಾಗಿ ಹೋರಾಟವನ್ನು ಮುಂದು ವರೆಸಿದ ಕಾಶೀನಾಥ ಗವಾಯಿಗಳು ಮುಂದೆ ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ದೇವಗಿರಿಗೆ ಬಂದರು. ದೇವಗಿರಿಯ ಕಾಡಿನಲ್ಲಿ ದುರ್ಗಮ್ಮಾತಾಯಿ ಗುಡಿ ಇದೆ. ದೇವಗಿರಿಯ ಲಂಬಾಣಿ ತಾಂಡದ ಆರಾಧ್ಯದೈವ ಈ ದುರ್ಗಮ್ಮಾತಾಯಿ. ಅಲ್ಲಿನ ಲಂಬಾಣಿಗಳು ಪ್ರತಿವರ್ಷ ನೂರಾರು ಕೋಣ-ಕುರಿಗಳನ್ನು ಕಡಿದು ಕಾರ್ಯ ಆಚರಿಸಿ ಜಾತ್ರೆ ಮಾಡುತ್ತಿದ್ದರು. ಕಾಶೀನಾಥರು ಅದನ್ನು ತಡೆದು ನೂರಾರು ಕೋಣಗಳ ಜೀವ ಉಳಿಸಿದರು. ಆದರೆ ನಂತರದ ದಿನಗಳಲ್ಲಿ ದೇವಗಿರಿಯ ಕಾರ್ಯ ಮತ್ತೆ ಮುಂದುವರೆಸಿಕೊಂಡು ಬರಲಾಗುತ್ತಿದೆ.

ಹೈದ್ರಾಬಾದ ಕರ್ನಾಟಕ ಭಾಗದಲ್ಲಿಯೇ ಅತ್ಯಂತ ಪ್ರಸಿದ್ಧಿಯನ್ನು ಪಡೆದ, ದೊಡ್ಡ ಪ್ರಮಾಣದ ಕಾರ್ಯವೆಂದರೆ ಕೊಡದೂರ ಕಾರ್ಯ. ಗುಲಬರ್ಗಾ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಕೊಡದೂರದಲ್ಲಿ ಆಚರಿಸುತ್ತಿದ್ದ ಮರಗೆಮ್ಮಾನ ಕಾರ್ಯದಲ್ಲಿ ೧೦೦ರಿಂದ

೫೦೦ರವರೆಗೆ ಕೋಣಗಳನ್ನು ಬಲಿ ಕೊಡಲಾಗುತ್ತಿತ್ತು. ಅಲ್ಲಿಗೆ ಹೋಗಿ ಕಾಶೀನಾಥ ಗವಾಯಿಗಳು ಪ್ರತಿಭಟಿಸಿದರು. ಕಾಶೀನಾಥರ ವಿರುದ್ಧ ಜನರು ಜಗಳಕ್ಕೆ ಬಂದರು. 'ಕಣ್ಣಿಲ್ಲದ ಕುಡ್ಡ ಇವನಿಗೇನಬೇಕಾಗ್ಯಾದ. ನಮ್ಮೂರ ಕಾರ್ಯ ನಾವ್ ಮಾಡ್ತೇವು' ಎಂದರು. ಇತರ ಕಡೆಗಳಲ್ಲಿ ಕಾರ್ಯ ಆಚರಣೆಯನ್ನು ತಡೆಯುತ್ತಾ ಬಂದಿದ್ದ ಗವಾಯಿಗಳ ಬಗ್ಗೆ ಸವರ್ಣೀಯರಲ್ಲಿ ಅಸಮಾಧಾನವಿತ್ತು. ದಲಿತರಲ್ಲಿಯೂ ಒಕ್ಕಟ್ಟು ಇರಲಿಲ್ಲ. ಕೆಲವು ಜನ ದಲಿತರು ಸವರ್ಣೀಯರ ಪಕ್ಷ ಸೇರಿದರು. ಕೊಡದೂರಿನ ಜನ ಕಾಶೀನಾಥರ ಮೇಲೆ ಬಿದ್ದು ದೈಹಿಕವಾಗಿ ಹಲ್ಲೆ ಮಾಡಿದರು. ಅವರ ಕೂದಲು ಹಿಡಿದು ಜಗ್ಗಾಡಿದರು. ಅಷ್ಟೇ ಅಲ್ಲ ಕೊಲೆ ಮಾಡಲು ಮುಂದಾದರು. ಕಾಶೀನಾಥರು ಐದಾರು ಜನ ಬೆಂಬಲಿಗರ ಸಹಾಯದಿಂದ ತಪ್ಪಿಸಿಕೊಂಡು ಪಸಪೂರದಲ್ಲಿ ಅಡಗಿ ಕುಳಿತರು. ಆನಂತರ ಪೊಲೀಸರನ್ನು ಕರೆಸಲಾಯಿತು. ಅಂದಿನಿಂದ ಕೊಡದೂರ ಕಾರ್ಯ ಸಂಪೂರ್ಣ ವಾಗಿ ನಿಂತು ಹೋಯಿತು. ಈ ಘಟನೆಯಾದ ನಂತರ ಪ್ರತಿವರ್ಷ ಆ ದಿನದಂದು ಅಲ್ಲಿ ಪೊಲೀಸ್ ವ್ಯಾನ್ ಹಾಜರಿರುತ್ತಿತ್ತು. ಜೀವನದ ಹಂಗು ತೊರೆದು ಹೋರಾಡಿ ಕಾಶೀನಾಥ ಗವಾಯಿಗಳು ಕೊಡದೂರ ಕಾರ್ಯವನ್ನು ನಿಲ್ಲಿಸುವಲ್ಲಿ ಯಶಸ್ವಿಯಾಗಿದ್ದಾರೆ. 'ಕೊಡದೂರ ಕಾರ್ಯ ನಿಲ್ಲಸ್ಲಾಕ ಹೋಗಿ ಅವ ಸಾಯ್ತಾ ಸಾಯ್ತಾ ಬದುಕ್ಯಾನ' ಎಂದು ಕಾಶೀನಾಥರ ಗೆಳೆಯ ಮಾಣಿಕರಾವ ಜ್ಯೋತಿ ಹೇಳುತ್ತಾರೆ. ಮುಂದೆ ಕೊಡ ದೂರಲ್ಲೊಂದು ಬುದ್ಧ ಮಂದಿರವನ್ನು ನಿರ್ಮಿಸಿ ಅಲ್ಲಿಯೇ ತಮ್ಮ ಹಿರಿಯ ಮಗಳು ಪಂಚಶೀಲಳ ಜಾವುಳವನ್ನು ತೆಗೆಸಿದರು. ಹಲಚೇರಿ ಕಾರ್ಯವನ್ನು ಸಹ ನಿಲ್ಲಿಸಿದರು.

ಕಾರ್ಯಾಚರಣೆಯ ವಿರುದ್ಧದ ಹೋರಾಟಕ್ಕೆ ಗವಾಯಿಗಳಿಗೆ ಕಾನೂನಿನ ಬೆಂಬಲವಿತ್ತು. ಪೊಲೀಸರು ಮತ್ತು ಗೆಳೆಯರ ನೆರವು ಪಡೆಯುತ್ತಿದ್ದರು. ಶ್ರೇಷ್ಠ ಆಶುಕವಿಗಳಾದ ಅವರು ಸ್ಥಳದಲ್ಲಿಯೇ ಕಾರ್ಯ ಕುರಿತಾದ ಹಾಡುಗಳನ್ನು ರಚಿಸಿ, ಹಾಡಿ ಜನರಲ್ಲಿ ಪರಿವರ್ತನೆಯನ್ನುಂಟು ಮಾಡುತ್ತಿದ್ದರು. ಕಾರ್ಯ ಒಂದು ಅವೈಜ್ಞಾನಿಕ ಮೂಢ ಆಚರಣೆ, ಅದರಲ್ಲಿ ದಲಿತರನ್ನು, ದಲಿತ ಮಹಿಳೆಯರನ್ನು ಹೇಗೆ ಶೋಷಣೆ ಮಾಡಲಾಗುತ್ತಿದೆ ಎಂಬುದನ್ನು ತಮ್ಮ ಹಾಡುಗಳ ಮೂಲಕ ತಿಳಿಸಿ ಹೇಳಿದ್ದಾರೆ.

ಹಿಂಸೆಯನ್ನು ಮಾಡಬೇಡರಿ ಕಂಡದೇವರ ಕಾಲಬೀಳಬೇಡರಿ
ಜಾಣಿ-ಜೋಗಣಿ, ಪೊತ್ಯಾ ಭೂತಾಳ್ಯಾ ವಗ್ಗ್ಯಾನ ಬಿಡಬೇಡರಿ
ಇವು ಯಾವ ದೇವರು ನಮಗಲ್ಲ ನಮ್ಮ ಸರಿ ಮಾತೇ ಆಡಿಲ್ಲ
'ಮುಟ್ಟ' ಎಂದು ಕೇಳಿ ನೂಕಿದಾಗ ದೇವರು ಗಪ್ಪಾಯಿತು

ಎಂದು, ಕಾರ್ಯ ಆಚರಣೆ ಮಾಡಕೂಡದೆಂದು ದಲಿತರಿಗೆ ಕರೆ ನೀಡಿದ್ದಾರೆ. 'ಉಚ್ಚ ಕುಲದಲ್ಲಿ ಜಾಣಿ-ಜೋಗಣಿ ಯಾಕ ಬಿಟ್ಟಿಲ್ಲರಿ' ಎಂದು ತಮ್ಮ ಹಾಡಗಳಲ್ಲಿ ಪ್ರಶ್ನಿಸಿದ್ದಾರೆ. ಕಾರ್ಯ ಕುರಿತಾದ ಕಾಶೀನಾಥರ ಹಾಡುಗಳು ಜನಮನವನ್ನು ಪ್ರಭಾವಿಸಿದವು. ವಿಶೇಷವಾಗಿ ದಲಿತರು ಜಾಗೃತರಾದರು. ತಮ್ಮ ಓಣಿಗಳಲ್ಲಿರುವ ಮರಗೆಮ್ಮಾ, ದುರುಗೆಮ್ಮಾ, ಲಕ್ಷ್ಮಿ, ಪೋಚಮ್ಮಾ ಮುಂತಾದ ದೇವತೆಗಳ ಪೂಜೆಯನ್ನು ನಿಲ್ಲಿಸಿದರು. ಕೆಲವು ಕಡೆ ಆ ದೇವಾಲಯಗಳನ್ನು ತೆಗೆದು ಹಾಕಿ ಆ ಸ್ಥಳದಲ್ಲಿ ಸಮುದಾಯ ಭವನಗಳನ್ನು ನಿರ್ಮಾಣ ಮಾಡಲಾಯಿತು. ಹಿಲಾಲಪೂರದ ದಲಿತ ಓಣಿಯಲ್ಲಿದ್ದ ಮರಗೆಮ್ಮನ ಗುಡಿಯನ್ನು

ತೆಗೆಯಿಸಿ, ಅಲ್ಲಿ ಕಾಶೀನಾಥ ಗವಾಯಿಗಳು ಒಂದು ಸಮುದಾಯ ಭವನವನ್ನು ದಲಿತರಿಗಾಗಿ ನಿರ್ಮಿಸಿಕೊಟ್ಟಿದ್ದಾರೆ.

ಕ್ರಿ.ಶ. ೧೯೬೨-೬೩ರ ಸಂದರ್ಭದಲ್ಲಿ ಕಾಶೀನಾಥ ಗವಾಯಿಗಳು ಲವ-ಕುಶ ಬಯಲಾಟ ಆಡಿಸಲು ಬೀದರ ಸಮೀಪದ ವಾಲ್ದೊಡ್ಡಿ ಎಂಬ ಹಳ್ಳಿಗೆ ಹೋಗಿದ್ದರು. ಅಲ್ಲಿನ ದಲಿತರ ಓಣಿಯಲ್ಲಿದ್ದ ಪೋಚಮ್ಮಾ, ಮರಗೆಮ್ಮಾರ ಕಟ್ಟೆಗೆಯ ಮೂರ್ತಿಗಳನ್ನು ಕಣ್ಣು ಕಾಣದಿದ್ದರೂ ಕೈಸವರಿ ಬುಟ್ಟಿಯಲ್ಲಿ ತುಂಬಿ ತಂದು ನಡುಬೀದಿಯಲ್ಲಿ ಸುಟ್ಟರು. ಆಗಿನ್ನೂ ಬಾಲಕರಾಗಿದ್ದ ಇಂದಿನ ಸಮುದಾಯ ರಂಗಭೂಮಿಯ ನಟರು, ಖ್ಯಾತ ಗಾಯಕರೂ ಆದ ಶಂಭುಲಿಂಗ ವಾಲ್ದೊಡ್ಡಿಯವರು ಆ ಘಟನೆಯನ್ನು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಕಾರ್ಯಾಚರಣೆಯ ಸಂದರ್ಭದಲ್ಲಿ ಮರಗೆಮ್ಮನ ಗುಡಿಯ ಮುಂದೆ ನಿಂತು 'ಈ ಮರಗೆಮ್ಮಾ ನಮ್ಮನ್ನು ಕಾಯುವವಳಾಗಿದ್ದರೆ, ಅಷ್ಟು ಸತ್ಯವಂತಳಾಗಿದ್ದರೆ ನನ್ನ ಕಣ್ಣು ಕೊಡಲಿ ನೋಡೋಣ. ಬೇಕಾದರೆ ನಾನವಳಿಗೆ ಲಕ್ಷ ಕೋಣ ಕಡಿಸುತ್ತೇನೆ' ಎಂದು ಸವಾಲು ಹಾಕುತ್ತಿದ್ದರು.

## ಮದುವೆ ಮತ್ತು ದಾಂಪತ್ಯ

ಈಗಾಗಲೇ ಕಾಶೀನಾಥ ಗವಾಯಿಗಳು ಹೈದ್ರಾಬಾದ ಕರ್ನಾಟಕದ ತುಂಬೆಲ್ಲ ಪ್ರಸಿದ್ಧರಾಗಿದ್ದರು. ಅವರ ಹೆಸರು ದಲಿತರ ಮನೆಮಾತಾಗಿತ್ತು. ವಯಸ್ಸು ನಲವತ್ತರ ಆಸುಪಾಸಿನಲ್ಲಿದ್ದರೂ ಇನ್ನು ಮದುವೆಯಾಗಿರಲಿಲ್ಲ. ಭಜನೆ ಮತ್ತು ಅಂಬೇಡ್ಕರ ಜಯಂತಿಯ ಮೂಲಕ ದಲಿತರನ್ನು ಜಾಗೃತಗೊಳಿಸುತ್ತಾ, ಊರೂರು ಅಲೆಯುತ್ತಲೇ ಇದ್ದರು. ತಾನು ಕುರುಡ, ತನಗೆ ಮದುವೆ ಏಕೆ ಎಂದು ಬಗೆದು ಮದುವೆಯ ಬಗ್ಗೆ ನಿರಾಸಕ್ತಿಯನ್ನು ತಾಳಿದರು. ನನ್ನಂಥ ಕುರುಡನಿಗೆ ಯಾರು ಹೆಣ್ಣು ಕೊಡುತ್ತಾರೆ ಎನ್ನುತ್ತಿದ್ದರು. ಆದರೆ ಗೆಳೆಯರು, ಹಿತೈಷಿಗಳು ಮದುವೆಗೆ ಒತ್ತಾಯಿಸತೊಡಗಿದರು. 'ಮುಂದೆ ನಿನಗೆ ಯಾರು ಗತಿ, ಇಳಿ ವಯಸ್ಸಿನಲ್ಲಿ ಹೇಗೆ ಮಾಡುತ್ತಿ. ಮದುವೆ ಮಾಡಿಕೊ' ಎಂದು ಸಲಹೆ ನೀಡಿದರು. ಎಲ್ಲರ ಒತ್ತಾಯಕ್ಕೆ ಮಣಿದು ಮಂಗಲಗಿ, ನಿರ್ಣಾ, ಮುತ್ತಂಗಿ, ಹಳ್ಳಿಖೇಡ, ಯಲ್ಲಮಡಗಿ ಮುಂತಾದ ಕಡೆಗಳಲ್ಲಿ ಹೆಣ್ಣು ನೋಡಲು ತಿರುಗಾಡಿದರು. ಕೊನೆಗೆ ಬಸವಕಲ್ಯಾಣ ತಾಲೂಕಿನ ಘಾಟ ಹಿಪ್ಪರಗಾ ಗ್ರಾಮದ ಶಿವಪ್ಪ ಮತ್ತು ಲಕ್ಕಮ್ಮ ದಂಪತಿಗಳ ಮಗಳು ಹದಿನಾರು ವರ್ಷದ ಮಹಾದೇವಿ (ಮಾಯಾದೇವಿ) ಕಾಶೀನಾಥ ಗವಾಯಿಗಳ ಕೈಹಿಡಿದು ಮಡದಿಯಾಗಿ ಮನೆ ತುಂಬಿದರು.

ಗವಾಯಿಗಳಿಗೆ ಹಿಪ್ಪರಗಾದೊಂದಿಗೆ ಸಂಪರ್ಕ ಬೆಳೆಯಲು ಮಾರುತಿ ಮಾಸ್ತರ ಕಾರಣರಾಗಿದ್ದಾರೆ. ಅರವತ್ತರ ದಶಕದಲ್ಲಿ ಭಾಲ್ಕಿ ತಾಲೂಕಿನ ಮುರಾಳದ ಮಾರುತಿ ಎಂಬುವರು ಘಾಟ ಹಿಪ್ಪರಗಾದಲ್ಲಿ ಶಿಕ್ಷಕರಾಗಿದ್ದರು. ಸ್ವಾಭಿಮಾನಿಗಳೂ, ಸುಧಾರಣಾವಾದಿಗಳೂ ಆದ ಅವರು ಘಾಟ ಹಿಪ್ಪರಗಾದ ಜನರನ್ನು ಸಾಕ್ಷರರನ್ನಾಗಿ ಮಾಡಲು ಬಹಳಷ್ಟು ಶ್ರಮಿಸಿದರು. ಅವರು ದಲಿತರಾಗಿದ್ದು, ಸವರ್ಣೀಯರ ಓಣಿಯಲ್ಲಿ ಇರುತ್ತಿದ್ದರು. ಸವರ್ಣೀಯರು ಅವರನ್ನು ತಮ್ಮ ಮನೆಗಳಿಗೆ ಚಹಾ, ಊಟಕ್ಕೆ ಕರೆಯುತ್ತಿದ್ದರು. ಯಾವಾಗ ಮಾರುತಿ ಮಾಸ್ತರ ದಲಿತರೆಂಬುವುದು ಗೊತ್ತಾಯಿತೊ, ಆಗ ಸವರ್ಣೀಯರ

ದೃಷ್ಟಿಕೋನವೇ ಬದಲಾಯಿತು. ಅವರಿಗೆ ಮೊದಲಿನ ಪ್ರೀತಿ ಆದರಗಳು ತೋರಲಿಲ್ಲ. ಜಾತಿಯ ವಿಷದೃಷ್ಟಿಯಿಂದ ನೋಡತೊಡಗಿದರು. ತಮ್ಮ ಓಣಿಯಿಂದ ಅವರನ್ನು ಹೊರ ಹಾಕಿದರು. ಅಷ್ಟೇ ಅಲ್ಲ, ಕೆಲವು ಕಿಡಿಗೇಡಿಗಳು ಅವರಿದ್ದ ಶಾಲೆಗೆ ಹೋಗಿ ಕಿಟಕಿಯ ಮೂಲಕ ಕಲ್ಲು ತೂರಿದರು. ಇದಾದ ನಂತರ ಮಾರುತಿ ಮಾಸ್ತರರು ದಲಿತರ ಓಣಿಯಲ್ಲಿ ಬಂದು ನೆಲೆಸಿ, ಹಿಪ್ಪರಗಾದ ದಲಿತರಿಗೆ ಅಂಬೇಡ್ಕರ ವಿಚಾರಗಳ ಮೂಲಕ ಜಾಗೃತ ಗೊಳಿಸತೊಡಗಿದರು. ಕಾಶೀನಾಥ ಗವಾಯಿಗಳ ಕೀರ್ತಿ ಮತ್ತು ಹಾಡುಗಾರಿಕೆಯ ಬಗ್ಗೆ ಕೇಳಿದ ಮಾರುತಿ ಮಾಸ್ತರರು ಒಮ್ಮೆ ಅಂಬೇಡ್ಕರ ಜಯಂತಿಗೆಂದು ಅವರನ್ನು ಹಿಪ್ಪರಗಾಕ್ಕೆ ಕರೆತಂದರು. ಅಲ್ಲಿಂದ ಮುಂದೆ ಜಯಂತಿ ಇತ್ಯಾದಿ ಕಾರ್ಯಕ್ರಮಗಳ ನಿಮಿತ್ತ ಗವಾಯಿಗಳು ಮೇಲಿಂದ ಮೇಲೆ ಹಿಪ್ಪರಗಾಕ್ಕೆ ಬರತೊಡಗಿದರು.

ಘಾಟಹಿಪ್ಪರಗಾದ ದಲಿತರೊಂದಿಗೆ ಕಾಶೀನಾಥ ಗವಾಯಿಗಳ ಸಂಬಂಧ ಅನನ್ಯ ವಾಗಿ ಮುಂದುವರೆಯಿತು. ಅವರ ಹಾಡು ಹಾಗೂ ವಿಚಾರಗಳನ್ನು ಕೇಳಿದ ಅಲ್ಲಿನ ದಲಿತರಿಗೆ ಕಾಶೀನಾಥ ಗವಾಯಿಗಳ ಬಗ್ಗೆ ಅಭಿಮಾನ ಮೂಡಿತ್ತು. ಘಾಟ ಹಿಪ್ಪರಗಾದ ಮಾರುತಿ ಭೂರೆ, ಭೀಮಶಾ ಭೂರೆ, ಚಂದ್ರಪ್ಪ ತಂಬಾಕೆ, ಅಪ್ಪಣ್ಣ ಪೋಸ್ತೆ, ರಾಮಚಂದ್ರ ಉಕ್ಕೆ, ಮಾಣಿಕ ದಾಂಡಗೆ, ಗುಂಡಪ್ಪ ಸಿಂಗೆ ಮುಂತಾದವರು ಗವಾಯಿಗಳ ಅನುಯಾಯಿ ಗಳಾದರು. ಭಜನಿ ಮಂಡಳಿಯನ್ನು ಕಟ್ಟಿ ಗವಾಯಿಗಳಿಂದ ಹಾಡು ಕಲಿತು ಹಾಡುತ್ತಾ ಅವರೊಂದಿಗೆ ಊರೂರು ಅಲೆಯತೊಡಗಿದರು.

ಗವಾಯಿಗಳ ವ್ಯಕ್ತಿತ್ವಕ್ಕೆ ಮಾರುಹೋಗಿದ್ದ ಹಿಪ್ಪರಗಾದ ದಲಿತರು ಅವರಿಗೆ ತಮ್ಮ ಹೆಣ್ಣು ಕೊಟ್ಟು ಓಲೈಸಿಕೊಳ್ಳಬೇಕು, ತಮ್ಮೂರಿನ ಅಳಿಯನನ್ನಾಗಿ ಮಾಡಿಕೊಳ್ಳಬೇಕು, ಆ ಮೂಲಕ ಅವರೊಂದಿಗಿನ ಸಂಬಂಧವನ್ನು ಇನ್ನೂ ಗಟ್ಟಿಗೊಳಿಸಿಕೊಳ್ಳಬೇಕೆಂದು ನಿರ್ಧರಿಸಿ, ಮಹಾದೇವಿಯನ್ನು ಕಾಶೀನಾಥರಿಗೆ ಕೊಡಲು ಮುಂದಾದರು. ಮಹಾದೇವಿಯ ತಂದೆ ಶಿವಪ್ಪ ಇಂತಹ ಕುರುಡನಿಗೆ ಮಗಳನ್ನು ಕೊಡುವುದು ಹೇಗೆಂದು ಮೊದಮೊದಲು ಹಿಂಜರಿದನು. ಅವರಿಗೆ ಹೊಲವಿಲ್ಲ; ಒಳ್ಳೆಯ ಮನೆಯಿಲ್ಲವೆಂಬ ಚಿಂತೆ ಶಿವಪ್ಪನನ್ನು ಕಾಡಿತ್ತು. ಆದರೆ ಮಹಾದೇವಿಯ ಅಣ್ಣ ಚಂದ್ರಪ್ಪ ಗವಾಯಿಗಳ ಅಭಿಮಾನಿಯಾಗಿದ್ದನು. ಭಜನೆ ಮಂಡಳಿಗಳಲ್ಲಿ ಅವರೊಂದಿಗೆ ಹೋಗುತ್ತಿದ್ದನು. ಅವನು ತನ್ನ ತಂಗಿಯನ್ನು ಕಾಶೀನಾಥರಿಗೆ ಕೊಡುವುದಾಗಿ ಪಟ್ಟು ಹಿಡಿದನು. ಎಲ್ಲರೂ ಒಪ್ಪಿದರು.

ಹಿಪ್ಪರಗಾದಲ್ಲಿ ಚಂದ್ರಪ್ಪನ ಕಿರಾಣಿ ಅಂಗಡಿ ಇತ್ತು (ಈಗಲೂ ಇದೆ) ಮಹಾದೇವಿಯೂ ಒಮ್ಮೊಮ್ಮೆ ಕಿರಾಣಿ ಅಂಗಡಿಯಲ್ಲಿ ಕುಳಿತುಕೊಳ್ಳುತ್ತಿದ್ದಳು. ಒಂದು ಸಲ ಕಿರಾಣಿ ಅಂಗಡಿಯಲ್ಲಿ ಕುಳಿತಿದ್ದ ಮಹಾದೇವಿಯಲ್ಲಿಗೆ ಮುದುಕಿಯೊಬ್ಬಳು ಬಂದು, ನಿನಗೆ ಕುರುಡನಿಗೆ ಕೊಡುತ್ತಾರಂತೆ ಎಂದು ಅಲ್ಲಿ ನಡೆದ ಮಾತುಕತೆಯ ವಿವರವನ್ನು ನೀಡಿದಳು. ಅಲ್ಲದೆ ಅವರಿವರು ಬಂದು ಹುಡುಗಿಯ ಮನಸ್ಸನ್ನು ಕೆಡಿಸಿದರು. ಕುರುಡನೊಂದಿಗೆ ಹೇಗೆ ಮದುವೆಯಾಗುವೆ, ಒಲ್ಲೆ ಅನ್ನು ಎಂದು ಕೆಲವರು ಕಲಿಸಿಕೊಟ್ಟರು. ಅವರಿವರ ಮಾತು ಕೇಳಿ ಏನೂ ಅರಿಯದ, ಇನ್ನೂ ಬಾಲಕಿಯಾಗಿದ್ದ ಮಹಾದೇವಿ ಮದುವೆ ಒಲ್ಲೆಯೆಂದು ಕುಳಿತಳು. ಚಂದ್ರಪ್ಪ ತಂಗಿಯನ್ನು ತಿಳಿಹೇಳಿದ ಮೇಲೆ

ಒಪ್ಪಿಕೊಂಡಳು. ಗವಾಯಿಗಳು ಹುಡುಗಿ ಮಹಾದೇವಿಯನ್ನು ಕರೆದು ಕೇಳಿದರಂತೆ 'ನೀ ನನ್ನ ಮದುವೆಯಾಗ್ತೇನು' ಎಂದು. ಆಗ ಮಹಾದೇವಿ ನಮ್ಮ ತಂದೆ-ತಾಯಿ ಕೊಟ್ಟಲ್ಲಿ ಮಾಡಿಕೊಳ್ಳುವುದಾಗಿ ಹೇಳಿದಳಂತೆ. ದಿನಾಂಕ ೨೧.೫.೧೯೬೯ರ ಬುದ್ಧಪೂರ್ಣಿಮೆಯ ದಿನದಂದು ಕಾಶೀನಾಥ ಗವಾಯಿಗಳ ಮದುವೆ ಮಹಾದೇವಿಯೊಂದಿಗೆ ಹಿಲಾಲಪೂರದಲ್ಲಿ ನೆರವೇರಿತು. ಬೌದ್ಧ ಧರ್ಮದ ಅನುಸಾರವಾಗಿ ನಡೆದ ಈ ಮದುವೆಯನ್ನು ಬೌದ್ಧ ಉಪಾಸಕ ಛತ್ರಪತಿ ಮಾಣಿಕರಾವ ನಡೆಸಿಕೊಟ್ಟರು.

ಮದುವೆಯಾಗಿ ಕಾಶೀನಾಥ ಗವಾಯಿಗಳು ಹಿಲಾಲಪೂರದಲ್ಲಿಯೇ ತಮ್ಮ ದಾಂಪತ್ಯ ಜೀವನವನ್ನು ಆರಂಭಿಸಿದರು. ತಂದೆ ತೀರಿಕೊಂಡಿದ್ದರು. ತಾಯಿ, ತಮ್ಮ, ತಂಗಿಯೊಂದಿಗೆ ವಾಸಿಸತೊಡಗಿದರು. ಗೋಡೆ ಇಲ್ಲದ ಕಣಕಿಧಡಿಯ ಮನೆಯಲ್ಲಿ ಅವರ ಸಂಸಾರ ಸಾಗಿತ್ತು. ಬಡತನ ಮುಂದುವರೆದಿತ್ತು. ಕುಟುಂಬಕ್ಕೆ ಹೊರೆಯಾಗಬಾರದೆಂದು ಗವಾಯಿಗಳ ಹೆಂಡತಿ ಮಹಾದೇವಿಯೂ ಕುಟುಂಬದ ಇತರ ಸದಸ್ಯರೊಂದಿಗೆ ಕೂಲಿ ಕೆಲಸಕ್ಕೆ ಹೋಗತೊಡಗಿದಳು. ಹೆಂಡತಿ ಕೆಲಸಕ್ಕೆ ಹೋಗುವುದು ಕಾಶೀನಾಥ ಗವಾಯಿಗಳಿಗೆ ಬೇಡವಾಗಿತ್ತು. ಯಾವುದೇ ಕೆಲಸಕ್ಕೂ ಬೇಡ ಎನ್ನುತ್ತಿದ್ದರು. ತಾವೇ ಊರೂರು ಅಲೆದು ಹಾಡು, ಸಂಗೀತ ಹೇಳುತ್ತಾ ಅದರಿಂದ ಬಂದ ಅಲ್ಪ ಆದಾಯದಲ್ಲಿಯೇ ಜೀವನ ಸಾಗಿಸಿದರು. ಹೆಂಡತಿಯನ್ನು ಸುಖವಾಗಿ ಇಟ್ಟು ಚೆನ್ನಾಗಿ ನೋಡುಕೊಂಡರು. 'ಅವ್ರು ಎನ್ ಮಾಡ್ತಿದ್ರೋ ಎಲ್ಲಿಗಿ ಹೋಗ್ತಿದ್ರೋ ನಮಗ ಮಾತ್ರ ಎನ್ ಕಮ್ಮಿಲ್ಲಧಾಂಗ ನೋಡ್ಕೊತಿದ್ರು' ಎಂದು ಗವಾಯಿಗಳ ಹೆಂಡತಿ ಮಹಾದೇವಿ ಹೇಳುತ್ತಾರೆ.

ಮದುವೆಯ ನಂತರವೂ ಕಾಶೀನಾಥ ಗವಾಯಿಗಳು ಘಾಟ ಹಿಪ್ಪರಗಾಕ್ಕೆ ಮೇಲಿಂದ ಮೇಲೆ ಬರುತ್ತಿದ್ದರು. ಅವರು ಸಂಗೀತ ಕಾರ್ಯಕ್ರಮಕ್ಕಾಗಿಯೇ ಬರಲಿ, ಅಂಬೇಡ್ಕರ ಜಯಂತಿಗಾಗಿಯೇ ಬರಲಿ, ಇಲ್ಲವೆ ಮಾವನ ಮನೆಗೆಂದೇ ಬರಲಿ ಅವರು ಹಿಪ್ಪರಗಾಕ್ಕೆ ಬಂದರೆ ಸಾಕು ಮಾವನ ಮನೆಯವರಷ್ಟೇ ಅಲ್ಲ, ಅಲ್ಲಿನ ದಲಿತರೆಲ್ಲ ಹಿಗ್ಗಿ ಹೋಗುತ್ತಿದ್ದರು. ಕಾಶೀನಾಥ ಗವಾಯಿಗಳು ತಮ್ಮೂರಿನ ಹೆಣ್ಣನ್ನು ಮದುವೆಯಾದದ್ದು, ಹಿಪ್ಪರಗಾಕ್ಕೆ ಅವರು ಬರುವುದು ತಮ್ಮ ಭಾಗ್ಯವೆಂದು ಅಲ್ಲಿನ ದಲಿತರು ಭಾವಿಸಿದರು. ಗವಾಯಿಗಳು ಹಿಪ್ಪರಗಾಕ್ಕೆ ಬರುವರೆಂಬ ಸುದ್ದಿ ತಿಳಿದೊಡನೆ ಎತ್ತಿನಗಾಡಿ ಕಟ್ಟಿಕೊಂಡು ಐದಾರು ಜನರು ಸೇರಿಕೊಂಡು ಮಳೆ, ಕೆಸರನ್ನು ಲೆಕ್ಕಿಸದೆ ಅವರನ್ನು ಕರೆತರಲು ಹಿಪ್ಪರಗಾದಿಂದ ಹನ್ನೆರಡು ಕಿ.ಮೀ. ದೂರದಲ್ಲಿರುವ ಸಪ್ತಾಪೂರ ಬಂಗ್ಲಾದವರೆಗೂ ಬಂದು, ಅವರಿಗಾಗಿ ಕಾದು ಕರೆದುಕೊಂಡು ಬರುತ್ತಿದ್ದರು.

ಘಾಟ ಹಿಪ್ಪರಗಾದ ದಲಿತರು ಕಾಶೀನಾಥ ಗವಾಯಿಗಳಲ್ಲಿ ಅಪಾರವಾದ ಗೌರವ ಹಾಗೂ ಅಭಿಮಾನವನ್ನು ಇಟ್ಟುಕೊಂಡಿದ್ದರು. ಅವರು ಬರುವಾಗ ಹೆಣ್ಣುಮಕ್ಕಳು ಆರತಿಯೊಂದಿಗೆ ಎದುರುಗೊಂಡು ಅತ್ಯಂತ ಗೌರವದಿಂದ ಬರಮಾಡಿಕೊಳ್ಳುತ್ತಿದ್ದರು. ಅವರಿದ್ದಷ್ಟು ದಿನ ದಲಿತರ ಓಣಿಗೆ ಒಂದು ರೀತಿಯ ಕಳೆ ಬರುತ್ತಿತ್ತು. ಹಿಪ್ಪರಗಾದಲ್ಲಿ ಅವರು ಎಷ್ಟು ದಿನಗಳಿದ್ದರೂ ಯಾರಿಗೂ ಬೇಸರವಾಗುತ್ತಿರಲಿಲ್ಲ. ಎಲ್ಲರೂ ತಮ್ಮ ತಮ್ಮ ಮನೆಗೆ ಕರೆದು ಊಟ ಉಪಚಾರ ಮಾಡಿಸಿ ಸಂತೋಷ ಪಡುತ್ತಿದ್ದರು. ಪ್ರತಿಯೊಬ್ಬರು

ಗವಾಯಿಗಳನ್ನು ತಮ್ಮ ಮನೆಯ ಅತಿಥಿ ಎಂದೇ ಭಾವಿಸುತ್ತಿದ್ದರು. ಅಲ್ಲಿದ್ದಷ್ಟು ದಿನ ದಲಿತರಿಗೆ ಬುದ್ಧ-ಅಂಬೇಡ್ಕರರ ವಿಚಾರಗಳನ್ನು ತಿಳಿಸುವುದು; ಹಾಡು, ಸಂಗೀತ ಕಲಿಸಿಕೊಡುವುದು ಮಾಡುತ್ತಿದ್ದರು. ಗವಾಯಿಗಳ ಸುತ್ತಲೂ ಜನರು ಮುಗಿಬೀಳುತ್ತಿದ್ದರು. 'ಕಾಶೀನಾಥ ಮಾಸ್ತರ ಹೊಂಟಾರಂದರ ಢೀಗಾರಿ ಜನ ಗೋಳಿಯಾಗತಿದ್ರು, ಕಮ್ಯೂನಿಟಿ ಹಾಲ್ ಮುಂದ ಜನ ಠೇಲ್ ಹೊಡಿತಿತ್ತು. ಕತ್ತಲಾದರ ಗೋಲಾ ಇಲ್ಲಂದ್ರ ಕಂದೀಲ ಹಚ್ಚಿ ಕೊಡ್ತಿದ್ದೇವು. ಅವರ ಮಾತಿಗಿ ಎಂಥೆಂಥವ್ರೂ ತೆಲಿ ತೂಗ್ತಿದ್ರು, ಅವರ ಮಾತಿನಿಂದ ಹುಚ್ಚು ಹೆಣ್ಣಮಕ್ಕಳಬಿ ಹುಷೇರಾಗ್ತಿದ್ರು... ಗೋಲಿಹಾಕಿ ಹೊಡೆಯಲುರ‍್ಯಾಕ ಖರನೆ ನಾ ಬಾಬಾಸಾಬರ ಹಾಡ ಹಾಡೋದು ಬಿಡಲ್ಲ ಅಂತಿದ್ರು, ಅವರಿಗಿ ನಾವ್ ಅಂಬೇಡ್ಕರ ಅಂತ ತಿಳಿದಿದ್ದೇವು' ಎಂದು ಘಾಟ ಹಿಪ್ಪರಗಾದ ದಲಿತ ಮಹಿಳೆ ಸರಸ್ವತಿ ದಾಂಡಗೆ ಗವಾಯಿಗಳನ್ನು ನೆನಸಿಕೊಂಡು ಭಾವುಕರಾಗಿ ನುಡಿಯುತ್ತಾರೆ.

ಕಾಶೀನಾಥ ಗವಾಯಿಗಳನ್ನು ಅಳಿಯನನ್ನಾಗಿ ಪಡೆದ ಘಾಟ ಹಿಪ್ಪರಗಾದ ದಲಿತರು ಅವರಿಂದ ಅನೇಕ ಪ್ರಯೋಜನಗಳನ್ನು ಪಡೆದು ಮುಂದೆ ಬಂದರು. ಅಲ್ಲಿನ ದಲಿತರಿಗೆ ಮನೆ ನಿರ್ಮಿಸಿಕೊಳ್ಳಲು ಜಾಗದ ಅಡಚಣೆ ಇತ್ತು. ಸರ್ಕಾರಿ ಜಮೀನಿನಲ್ಲಿ ಮನೆ ನಿರ್ಮಿಸಿಕೊಳ್ಳಲು ಮುಂದಾದಾಗ ಲಿಂಗಾಯತ ಜನರು ಅವರನ್ನು ತಡೆದರು. ದಲಿತರ ಮತ್ತು ಲಿಂಗಾಯತರ ಮಧ್ಯೆ ಜಗಳದಲ್ಲಿ ಬಿದ್ದಿದ್ದ ಐದು ಎಕ್ಕರೆ ಜಮೀನನ್ನು ತಮ್ಮ ಹೋರಾಟ ಹಾಗೂ ಪ್ರಯತ್ನದ ಮೂಲಕ ದಲಿತರಿಗೆ ದೊರಕಿಸಿಕೊಡುವಲ್ಲಿ ಯಶಸ್ವಿಯಾದರು. ಎಲ್ಲಕ್ಕಿಂತಲೂ ಮುಖ್ಯವಾಗಿ ಅಲ್ಲಿನ ದಲಿತರಿಗೆ ಜಾಗೃತಗೊಳಿಸಿದರು. ಅವರು ಶಿಕ್ಷಣ ಕಲಿಯಲು ಪ್ರೇರಣೆ ನೀಡಿದರು. ಅವರಲ್ಲಿ ಸ್ವಾಭಿಮಾನ, ಅಂಬೇಡ್ಕರ ಪ್ರಜ್ಞೆಯನ್ನು ಮೂಡಿಸಿದರು. ಸುಮಾರು ೩೦-೩೫ ವರ್ಷಗಳ ಹಿಂದೆಯೇ ಅಂಬೇಡ್ಕರರ ಸೊಸೆ ಮೀರಾ ತಾಯಿಯವರನ್ನು ಕರೆಯಿಸಿ, ಅಂಬೇಡ್ಕರ ಜಯಂತಿಯನ್ನು ಆಚರಿಸಿದ ಅಗ್ಗಳಿಕೆ ಹಿಪ್ಪರಗಾ ಗ್ರಾಮಕ್ಕಿದೆ; ಅಲ್ಲಿನ ದಲಿತರಿಗಿದೆ. ಬೀದರ ಜಿಲ್ಲೆಯಲ್ಲಿ ಅಂಬೇಡ್ಕರ ಜಯಂತಿಯನ್ನು ಮೊಟ್ಟಮೊದಲು ಆಚರಿಸಿದ ಗ್ರಾಮಗಳಲ್ಲಿ ಘಾಟ ಹಿಪ್ಪರಗಾವೂ ಒಂದು.

ಮುಂದೆ ಕಾಶೀನಾಥ ಗವಾಯಿಗಳು ಪಂಚಶೀಲಾ, ಸತ್ಯಶೀಲಾ, ಚಂದ್ರಶೀಲಾ, ಇಂದ್ರಶೀಲಾ, ಕನ್ನಡಪ್ರಭ, ಭಾರತ ರತ್ನ, ಜಯಂತಿ ಎಂಬ ಏಳು ಜನ ಹೆಣ್ಣು ಮಕ್ಕಳನ್ನು ಪಡೆದರು. ನಾಲ್ವರು ಹಿಲಾಪೂರದಲ್ಲಿದ್ದಾಗ, ಉಳಿದವರು ಬೀದರಕ್ಕೆ ಬಂದ ಮೇಲೆ ಜನಿಸಿದರು. ಅವರೆಲ್ಲರಿಗೂ ತಕ್ಕಮಟ್ಟಿಗೆ ಶಿಕ್ಷಣವನ್ನು ಕೊಡಿಸಿದ್ದಾರೆ. ಇನ್ನೂ ಇಬ್ಬರು ಮಕ್ಕಳು ಕಾಲೇಜು ಓದುತ್ತಿದ್ದಾರೆ.

### ಹಿಲಾಲಪೂರದಿಂದ ಬೀದರಕ್ಕೆ

ಹಿಲಾಲಪೂರದಲ್ಲಿ ಕಾಶೀನಾಥ ಗವಾಯಿಗಳ ಕೆಲವು ದಾಯಾದಿಗಳು ಅವರ ವಿರೋಧಿಗಳಾಗಿದ್ದರು. ಗವಾಯಿಗಳ ತಮ್ಮ ಪುಂಡಲೀಕನ ಮದುವೆ ಅದೇ ಊರಿನ ಹುಡುಗಿಯೊಬ್ಬಳೊಂದಿಗೆ ನಡೆದಿತ್ತು. ತಮ್ಮನ ಮಾವನಿಗೆ ಸಂಬಂಧಿಸಿದ ಹೊಲದ

ಬಗ್ಗೆ ದಾಯಾದಿಗಳು ಜಗಳ ಹಿಡಿದಿದ್ದರು. ಆ ಜಗಳ ಕೋರ್ಟು ಕಟ್ಟೆ ಹತ್ತಿ ದೀರ್ಘ ಕಾಲದವರೆಗೆ ನಡೆಯಿತು. ಮೇಲಿಂದ ಮೇಲೆ ಜಗಳ ಕಾಯುತ್ತಿದ್ದ ಸ್ವಜಾತಿಯ ಬಂಧು ಗಳಿಂದ ಅವರು ಬೇಸತ್ತು ಹೋಗಿದ್ದರು. ತಮ್ಮ ಮೇಲೇರಿ ಜಗಳಕ್ಕೆ ಬಂದವರ ವಿರುದ್ಧ ಕೇಸು ಕೊಟ್ಟು ಕಾಶೀನಾಥ ಗವಾಯಿಗಳು ಅವರನ್ನೆಲ್ಲ ಪೊಲೀಸ್ ಕಸ್ಟಡಿಗೆ ಒಪ್ಪಿಸಿದರು. ಇದರಿಂದ ಕೋಪಗೊಂಡ ದಾಯಾದಿಗಳು ಮತ್ತಷ್ಟು ಹಗೆ ಸಾಧಿಸತೊಡಗಿದರು. ಅವರನ್ನು ಹೊಡೆಯಬೇಕೆಂದು ಸಂಚು ಹೂಡಿದರು. ಈ ಜಗಳದಿಂದ ಗವಾಯಿಗಳು ಖಿನ್ನರಾದರು. ತಾನು ಕಣ್ಣು ಕಾಣದ ಕುರುಡ. ಇಂತಹ ಹುಂಬ ದಾಯಾದಿಗಳ ಮಧ್ಯೆ ಇರುವುದು ಸರಿಯಲ್ಲವೆಂದು ಭಾವಿಸಿದರು. ಅಲ್ಲದೆ ಹಿಲಾಲಪೂರದ ದಲಿತರಿಗೆ ಊರಲ್ಲಿ ಹೊಲತನ ಮಾಡುವುದನ್ನು, ಮೇಲ್ಜಾತಿಯವರ ಮನೆಯಲ್ಲಿ ಹೆಂಡಿ, ಕಸ ತೆಗೆಯುವುದನ್ನು ಬಿಡಿಸಿದರು. ಇದರಿಂದ ಮೇಲ್ಜಾತಿಯವರು ಅಸಮಾಧಾನಗೊಂಡರು. ತಮಗೆ ಬರುವ ಆದಾಯ ತಪ್ಪಿತ್ತೆಂದು ಕೆಲವು ದಲಿತರೂ ಕಾಶೀನಾಥ ಗವಾಯಿಗಳ ವಿರುದ್ಧ ಸಿಟ್ಟಿಗೆದ್ದರು. ಇದ್ದ ಅರ್ಧ ಎಕರೆ ಹೊಲವೂ ಕಾರಂಜಾ ಪ್ರೊಜೆಕ್ಟನಲ್ಲಿ ಮುಳುಗಡೆಯಾಯಿತು. ಇವೆಲ್ಲ ಘಟನೆಗಳು ಕಾಶೀನಾಥ ಗವಾಯಿಗಳು ಹಿಲಾಲಪೂರ ಬಿಡಲು ಕಾರಣವಾದವು.

ಕಾಶೀನಾಥ ಗವಾಯಿಗಳು ಹಿಲಾಲಪೂರವನ್ನು ಬಿಟ್ಟು ಬೀದರಕ್ಕೆ ಬರಲು ಇನ್ನೊಂದು ಮುಖ್ಯ ಕಾರಣವೆಂದರೆ, ಅವರ ಗೆಳೆಯ ಮಾಣಿಕರಾವ ಜ್ಯೋತಿ. ಕಾಶೀನಾಥ ಗವಾಯಿಗಳ ಹತ್ತಿರದ ಗೆಳೆಯ ಮಾಣಿಕರಾವ ಜ್ಯೋತಿಯವರು ಈಗಾಗಲೇ ಪಾತರಪಳ್ಳಿಯನ್ನು ಬಿಟ್ಟು, ಬೀದರಿನ ಹಾರೂರಗೇರಿಯಲ್ಲಿ ನೆಲೆಸಿದ್ದರು. ಗವಾಯಿಗಳೂ ಬೀದರಕ್ಕೆ ಬಂದು ನೆಲೆಸಬೇಕೆಂಬುದು ಅವರ ಒತ್ತಾಸೆಯಾಗಿತ್ತು. ಆಗೊಮ್ಮೆ ಈಗೊಮ್ಮೆ ಭೇಟಿಯಾಗುತ್ತಿದ್ದ ಗವಾಯಿಗಳು ಶಾಶ್ವತವಾಗಿ ಬೀದರಿನಲ್ಲಿ ಬಂದು ನೆಲೆಸಿದರೆ, ತಮ್ಮಿಬ್ಬರ ಒಡನಾಟಕ್ಕೆ ಹೆಚ್ಚಿನ ಅನುಕೂಲವಾಗುತ್ತದೆಂದು ಅವರು ಭಾವಿಸಿದರು. ಅಲ್ಲದೆ ತಮ್ಮ ಮಕ್ಕಳ ಶಿಕ್ಷಣ, ಹಾಗೂ ಮುಂದಿನ ಭವಿಷ್ಯದ ದೃಷ್ಟಿಯಿಂದ ಬೀದರ ಸೂಕ್ತವೆಂದು ನಿರ್ಧರಿಸಿ, ಕಾಶಿನಾಥ ಗವಾಯಿಗಳು, ಹಿಲಾಲಪೂರವನ್ನು ಬಿಟ್ಟು ಬೀದರಕ್ಕೆ ಬಂದರು.

ಬೀದರಕ್ಕೆ ಬಂದು ನೆಲೆಸಿದ ಮೇಲೆಯೂ ಬದುಕು ಸುಲಭವಾಗಿರಲಿಲ್ಲ. ಮಡದಿ ಮಕ್ಕಳನ್ನು ಕಟ್ಟಿಕೊಂಡು ಬೀದರಕ್ಕೆ ಬಂದ ಗವಾಯಿಗಳು ಆರಂಭದಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಿದರು. ಹಾರೂರಗೇರಿಯಲ್ಲಿ ಒಂದು ಬಾಡಿಗೆಯ ಮನೆಯನ್ನು ಹಿಡಿದು ಅಲ್ಲಿ ಮೂರು ತಿಂಗಳಕಾಲ ಉಳಿದರು. ಅಲ್ಲಿಂದ ಅಂಬೇಡ್ಕರ ಕಾಲೋನಿಗೆ ಬಂದರು. ಅಂಬೇಡ್ಕರ್ ಕಾಲೋನಿಯಲ್ಲಿ ನಗರಸಭೆಗೆ ಸೇರಿದ ಸರ್ಕಾರಿ ಜಾಗದಲ್ಲಿ ಗೆಳೆಯ ಮಾಣಿಕರಾವ ಜ್ಯೋತಿ ಮತ್ತಿತರರ ಸಹಾಯದಿಂದ ಲಕ್ಕಿಧಡಿಯ ಮೇಲೆ ತಗಡದ ಶೆಡ್ ನಿರ್ಮಿಸಿಕೊಂಡು ವಾಸಿಸತೊಡಗಿದರು. ಪ್ರಾರಂಭದಲ್ಲಿ ಈ ಜಾಗದ ಬಗ್ಗೆಯೂ ಅಲ್ಲಿನ ದಲಿತರು ತಕರಾರು ತೆಗೆದರು. ಅಲ್ಲಿಂದ ಅವರನ್ನು ಬಿಡಿಸಿ ಓಡಿಸುವ ಪ್ರಯತ್ನವೂ ನಡೆಯಿತು. ಆದರೆ ಆಗಿನ ಬೀದರ ಜಿಲ್ಲಾಧಿಕಾರಿಗಳಾಗಿದ್ದ ಎಚ್. ಶಿವರಾಮ ಅವರು ನಗರ ಸಭೆಯವರಿಗೆ ಹೇಳಿಸಿ, ಆ ಜಾಗವನ್ನು ಕಾಶೀನಾಥ ಗವಾಯಿಗಳ ಹೆಸರಿಗೆ ಸೇರುವಂತೆ ಮಾಡಿದರು. ಮುಂದೆ ಆ ಜಾಗದಲ್ಲಿಯೇ ಸಣ್ಣದೊಂದು ಮನೆ ನಿರ್ಮಿಸಿ

ಕೊಂಡರು. ತಮ್ಮ ಪುಂಡಲೀಕನಿಗೆ ಓದಿಸಿ ನೌಕರಿ ಕೊಡಿಸಿದರು. ಹೆಂಡತಿ ಮಹಾದೇವಿಗೂ ಸಣ್ಣದೊಂದು ನೌಕರಿ ಸಿಕ್ಕಿತ್ತು. ತಮಗೆ ಗಂಡುಮಕ್ಕಳಿಲ್ಲದ ಕಾರಣ ತಮ್ಮ ಮಗಳು ಚಂದ್ರಶೀಲಾಳನ್ನು ತಂಗಿ ಲಕ್ಷ್ಮಿಯ ಮಗ ಪ್ರಕಾಶನಿಗೆ ಕೊಟ್ಟು ಮದುವೆ ಮಾಡಿ ಮನೆಯಲ್ಲಿಯೇ ಇಟ್ಟುಕೊಂಡರು.

ಬೀದರಿನ ವಾತಾವರಣ ಗವಾಯಿಗಳಿಗೆ ಹಿಡಿಸಿತ್ತು. ಕಾರ್ಯಕ್ಷೇತ್ರವೂ ವಿಸ್ತಾರವಾಯಿತು. ಜನರು ಬೇರೆ ಬೇರೆ ಊರುಗಳಿಂದ ಬಂದು ಕಾರ್ಯಕ್ರಮಗಳಿಗೆ ಆಹ್ವಾನಿಸಿ ಕರೆದುಕೊಂಡು ಹೋಗುತ್ತಿದ್ದರು. ಅನೇಕ ದಿನಗಳವರೆಗೆ ಪ್ರವಾಸದಲ್ಲಿ ಇರುತ್ತಿದ್ದರು. ಬೆಂಗಳೂರು, ದೆಹಲಿ, ಮುಂಬೈ, ನಾಗಪೂರಗಳಿಗೆ ಕಾಶೀನಾಥ ಗವಾಯಿಗಳ ಅಲೆದಾಟ ನಿರಂತರವಾಗಿ ಇತ್ತು. ಸರಕಾರದಿಂದ ಮಾಸಿಕ ಐದುನೂರು ರೂಪಾಯಿ ಸಹಾಯಧನವೂ ಬರತೊಡಗಿತ್ತು. ಅಲ್ಲದೆ ಮುಂದೆ ಬೀದರ ಜಿಲ್ಲೆಯ ಅಂಗವಿಕರ ಸಂಘದ ಅಧ್ಯಕ್ಷರಾಗಿ ನೇಮಕಗೊಂಡರು. ಸಂಘಕ್ಕಾಗಿ ನಿಷ್ಠೆಯಿಂದ ಸೇವೆ ಸಲ್ಲಿಸಿದರು. ಬೀದರಿನಲ್ಲಿ ನಡೆಯುವ ಸಭೆ ಸಮಾರಂಭಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಯಾವುದೇ ರಾಜ್ಯ ಅಥವಾ ರಾಷ್ಟ್ರ ನಾಯಕರುಗಳ ಭಾಷಣವಿದ್ದರೂ ಅಲ್ಲಿ ಹಾಜರಿರುತ್ತಿದ್ದರು. ಗೀತ ರಚನೆಯೂ ನಿರಂತರವಾಗಿ ಮುಂದುವರೆಯಿತು.

## ಸಮಾನತೆಗಾಗಿ ಹೋರಾಟ

ಜಾತಿ ಪ್ರಧಾನವಾದ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿಯ ಮೇಲು-ಕೀಳು ಭೇದ ಮೊದಲಿನಿಂದಲೂ ಇದೆ. ಅಸ್ಪೃಶ್ಯತೆಯ ಆಚರಣೆ ಅನಾದಿಕಾಲದಿಂದಲೂ ನಡೆದುಕೊಂಡು ಬಂದಿದೆ. ಅಸಮಾನತೆಯ ಆಧಾರದ ಮೇಲೆ ಭಾರತೀಯ ಸಮಾಜ ನಿರ್ಮಾಣಗೊಂಡಿದೆ. ಮಾನವ ಮಾನವರಲ್ಲಿಯೇ ಭೇದ ಕಲ್ಪಿಸುವ ಈ ಜಾತಿ ವ್ಯವಸ್ಥೆಯನ್ನು ಬುದ್ಧ, ಬಸವ, ಗಾಂಧಿ, ಅಂಬೇಡ್ಕರರಾದಿಯಾಗಿ ಅನೇಕ ಮಹಾಪುರುಷರು, ವಿಚಾರವಾದಿಗಳು ವಿರೋಧಿಸಿದ್ದಾರೆ. ಆದರೂ ಸಮಾನತೆಯ ಸಮಾಜ ನಿರ್ಮಾಣ ಕನಸಿನ ಮಾತಾಗಿದೆ. 'ಮನುಷ್ಯ ಜಾತಿ ತಾನೊಂದೆ ವಲಂ' ಎಂದ ಪಂಪ. 'ನೆಲವೊಂದೇ ಹೊಲಗೇರಿ ಶಿವಾಲಯಕ್ಕೆ' ಎಂದು ಸಾರಿದ ಬಸವಣ್ಣ. 'ಕುಲ ಕುಲ ಕುಲವೆಂದು ಹೊಡೆದಾಡದಿರಿ' ಎಂದು ಕೈಮುಗಿದ ಕನಕದಾಸ. 'ಜಾತಿ ವಿಜಾತಿ ಎನಬೇಡ' ಎಂದು ನೀತಿ ಹೇಳಿದ ಸರ್ವಜ್ಞ. ಇಷ್ಟಾದರೂ ಕುಲ-ಜಾತಿ, ಮೇಲು-ಕೀಳು ಎಂಬ ಭಾವನೆ ಜಿಡ್ಡುಗಟ್ಟಿದ ಭಾರತೀಯ ಸಮಾಜ ಬಿಟ್ಟುಕೊಟ್ಟಿಲ್ಲ: ಬಿಟ್ಟು ಕೊಡಲು ತಯಾರೂ ಇಲ್ಲ. ಮಹಾರಾಷ್ಟ್ರದ ದಲಿತ ಸಂತ ಚೋಕಾಮೇಳಾಗೆ ಪಂಡರಾಪುರದ ವಿಠ್ಠಲನ ಗುಡಿಯ ಪ್ರವೇಶ ನಿರಾಕರಣೆ, ಕನಕದಾಸರಿಗೆ ಉಡುಪಿಯ ಶ್ರೀಕೃಷ್ಣ ಮಂದಿರ ಪ್ರವೇಶಕ್ಕೆ ನಿರ್ಬಂಧ, ಅಂಬೇಡ್ಕರರಿಗೆ ಕಾಳಾರಾಮ ಮಂದಿರ ಪ್ರವೇಶಕ್ಕೆ ವಿರೋಧ, ತುಳಜಾಪುರದಲ್ಲಿ ಅಸ್ಪೃಶ್ಯರಿಗಾಗಿಯೇ ಪ್ರತ್ಯೇಕವಾಗಿರುವ ಗುಡಿ ಮತ್ತು ಸ್ನಾನಕುಂಡ-ಇವೆಲ್ಲವುಗಳು ಅಸ್ಪೃಶ್ಯತೆಯ ಆಚರಣೆಯ ಚಾರಿತ್ರಿಕ ಕುರುಹುಗಳು.

ಅಂಬೇಡ್ಕರವಾದಿಗಳಾಗಿದ್ದ ಕಾಶೀನಾಥ ಗವಾಯಿಗಳು ಅಸಮಾನತೆಯ,

ಜಾತಿವಾದದ, ಅಸ್ಪೃಶ್ಯತೆಯ ವಿರೋಧಿಗಳಾಗಿದ್ದರು. ಹಾಗೂ ಸಾಮಾಜಿಕ ಸಮಾನತೆಯ ಪ್ರಭಲ ಪ್ರತಿಪಾದಕರಾಗಿದ್ದರು. ದಲಿತರ ಶೋಷಣೆಯ ವಿರುದ್ಧ ಅವರು ನಿರಂತರವಾಗಿ ಧ್ವನಿ ಎತ್ತಿದರು. ಕಾರ್ಯಾಚರಣೆಯನ್ನು ತಡೆಯುವ ಉದ್ದೇಶವೂ ದಲಿತರ ಶೋಷಣೆಯನ್ನು ತಪ್ಪಿಸುವುದೇ ಆಗಿತ್ತು. ೫೦, ೬೦ ಹಾಗೂ ೭೦ರ ದಶಕದಲ್ಲಿ, ಆಗಿನ್ನೂ ಜಾತಿ ಆಚರಣೆ ಕಠಿಣವಾಗಿದ್ದ ಕಾಲದಲ್ಲಿ ಕಾಶೀನಾಥ ಗವಾಯಿಗಳು ದೇವಾಲಯ ಮತ್ತು ಹೋಟೆಲ್‌ಗಳಲ್ಲಿಯ ಅಸ್ಪೃಶ್ಯತೆ ಆಚರಣೆಯನ್ನು ವಿರೋಧಿಸಿದರು. ದೇವಾಲಯಗಳಲ್ಲಿ ದಲಿತರಿಗೂ ಪ್ರವೇಶಿಸುವ ಹಕ್ಕಿದೆ ಎಂದು ಪ್ರತಿಪಾದಿಸಿದರು. ಹೋಟೆಲ್‌ಗಳಲ್ಲಿ ಅಸ್ಪೃಶ್ಯರಿಗಾಗಿ ಕಪ್ಪು ಬಸಿ ಪ್ರತ್ಯೇಕವಾಗಿಡುವ ಪದ್ಧತಿಯನ್ನು ವಿರೋಧಿಸಿದರು. ಹೀಗೆ ವಿರೋಧಿಸುವಾಗ ಎಂತಹ ಕಠಿಣ ಪ್ರಸಂಗ ಬಂದರೂ ಅವರು ಎದೆಗುಂದುತ್ತಿರಲಿಲ್ಲ. ಅನೇಕ ಸಲ ಜಾತಿವಾದಿಗಳೊಂದಿಗೆ ಮುಖಾ-ಮುಖಿ ಸಂಘರ್ಷಕ್ಕೂ ಇಳಿದ ಉದಾಹರಣೆಗಳಿವೆ.

ಒಂದು ಸಲ ಕಾಶೀನಾಥ ಗವಾಯಿಗಳು ಕಾಳಗಿಯ ಕಾಳೂರುಲಿಂಗ ದೇವರ ಗುಡಿಗೆ ಸಂಗಡಿಗರೊಂದಿಗೆ ಭಜನೆಗೆಂದು ಹೋಗಿದ್ದರು. ಅಲ್ಲಿ ಕಾಳೂರ ಲಿಂಗ ದೇವಾಲಯದ ಹತ್ತಿರ ಒಂದು ನೀರಿನ ಬುಗ್ಗೆ ಇದೆ. ಅದಕ್ಕೆ ಹೊಲೆಯಮಾದಿಗರು ಮುಟ್ಟಿದರೆ ಪಾಪ ತಟ್ಟಿ ಸಾಯುವರು, ಇಲ್ಲವೆ ಯಾವುದಾದರೂ ಕೇಡಿಗೆ ಗುರಿಯಾಗುವರು ಎಂಬ ನಂಬಿಕೆ ಇದೆ. ಇದನ್ನು ಕೇಳಿದ ಕಾಶೀನಾಥ ಗವಾಯಿಗಳು ಅಸ್ಪೃಶ್ಯತೆಯನ್ನು ಕಾಪಾಡಿಕೊಂಡು ಬರಲು ಜಾತಿವಾದಿಗಳು ಕಟ್ಟಿದ ಇದೊಂದು ಕಟ್ಟು ಕಥೆಯೆಂದು ಭಾವಿಸಿದರು. ನನಗೆ ಅದ್ಯಾವ ಶಾಪ ತಟ್ಟುತ್ತದೆಯೊ ನೋಡಿಯೇ ಬಿಡುತ್ತೇನೆಂದು ಅಲ್ಲಿನ ನೀರಿನ ಬುಗ್ಗೆಗೆ ಮುಟ್ಟಿ ನೀರು ಕುಡಿದರು. ಇದನ್ನು ತಿಳಿದು ಅಲ್ಲಿನ ಸವರ್ಣೀಯರು ಕಾಶೀನಾಥ ಗವಾಯಿಗಳನ್ನು ಹೊಡೆಯಲು ಬಂದರು. ಪರಿಸ್ಥಿತಿ ಕೈಮೀರಿ ಹೋಗುವುದೆಂದು ಅರಿತ ಅಲ್ಲಿನ ಸ್ವಾಮಿ ಸವರ್ಣೀಯರನ್ನು ತಡೆದನು. 'ಏಯ್, ಅವನನ್ನು ಹೊಡಿಬ್ಯಾಡರಿ ಅವನ ಎಲ್ಲರಂತಲ್ಲ. ಬೇರೆ ರೀತಿಯ ಮನುಷ್ಯ ಹನ' ಎಂದನು. ಆಗ ಹೊಡೆಯಲು ಬಂದ ಸವರ್ಣೀಯರು ಸುಮ್ಮನಾದರು. ಆಗ ಗವಾಯಿಗಳು ಅಲ್ಲಿಯೇ ಕಾಳೂರು ಲಿಂಗ ದೇವರ ಚರಿತ್ರೆಯನ್ನು ಕುರಿತು ಪದಕಟ್ಟಿ ಹಾಡಿದರು. ಎಲ್ಲರೂ ಬೆರಗಾಗಿ ಹೋದರು.

ಮತ್ತೊಂದು ಸಲ ರಟಕಲಕ್ಕೆ ಹೋಗಿದ್ದರು. ರಟಕಲದ ಪ್ರಸಿದ್ಧ ರೇವಣಸಿದ್ಧೇಶ್ವರ ದೇವಾಲಯದಲ್ಲಿ ದಲಿತರಿಗೆ ಪ್ರವೇಶವಿರಲಿಲ್ಲ. ಹಾಗೂ ಅಲ್ಲಿನ ತೀರ್ಥಗುಂಡ ದಲಿತರು ಮುಟ್ಟುವಂತಿರಲಿಲ್ಲ. ಇದನ್ನು ಅರಿತ ಕಾಶೀನಾಥ ಗವಾಯಿಗಳು ಹಿಂದು-ಮುಂದು ನೋಡದೆ ಗರ್ಭಗುಡಿಯನ್ನು ಪ್ರವೇಶ ಮಾಡಿ, ತೀರ್ಥಗುಂಡದ ನೀರನ್ನು ಬೊಗಸೆಯಲ್ಲಿ ತೆಗೆದುಕೊಂಡು ಕುಡಿದರು. ಇಲ್ಲಿಯೂ ಮೇಲ್ಜಾತಿಯವರು ಗವಾಯಿಗಳ ಮೇಲೇರಿ ಹೊಡೆಯಲು ಬಂದರು. ತಮ್ಮನ್ನು ಮುಟ್ಟಿದರೆ ಪೊಲೀಸ್ ಕೇಸ್ ಕೊಡುತ್ತೇನೆಂದು ಕಾಶೀನಾಥ ಗವಾಯಿಗಳು ಎಚ್ಚರಿಕೆ ನೀಡಿದರು. ಹೊಡೆಯಲು ಬಂದವರು ಹೆದರಿಕೊಂಡು ಹಿಂಜರಿದರು. ಇಲ್ಲಿಯೂ ರೇವಣಸಿದ್ಧೇಶ್ವರ ಚರಿತ್ರೆ ಕುರಿತು ಪದಕಟ್ಟಿ ಹಾಡಿದರು.

ತಮಗೆ ಮೀಸಲಾಗಿದ್ದ ಗುಡಿ-ಗುಂಡಾರಗಳು, ತೀರ್ಥಗುಂಡಗಳನ್ನು ಹೊಲೆಯ ಮುಟ್ಟುತ್ತಿದ್ದಾನೆಂದು ಮೇಲ್ಜಾತಿಯವರಲ್ಲಿ ಗವಾಯಿಗಳ ಬಗ್ಗೆ ದ್ವೇಷ ಹುಟ್ಟಿತ್ತು. ಅವರ ಹಾಡುಗಳಲ್ಲಿಯೂ ಜಾತಿ ಖಂಡನೆ ಇರುತ್ತಿತ್ತು. ಇದು ಮೇಲ್ಜಾತಿಯವರ ಸಿಟ್ಟಿಗೆ ಕಾರಣವೂ ಆಗಿತ್ತು. ಅವರು ಗವಾಯಿಗಳನ್ನು ಸಹಿಸದಾದರು. ಒಮ್ಮೆ ಅಂಬೇಡ್ಕರ ಜಯಂತಿಗೆಂದು ಗುಲಬರ್ಗಾ ಜಿಲ್ಲೆಯ ಹಲಚೇರಿಗೆ ಹೋಗಿದ್ದರು. ಹೊಲಗೇರಿಗೆ ಹೊಂದಿಕೊಂಡೇ ಇರುವ ಸವರ್ಣೀಯರಿಗೆ ಸಂಬಂಧಿಸಿದ ಕಿರಾಣಿ ಅಂಗಡಿಯ ಸಮೀಪದಲ್ಲಿ ದಲಿತರ ಭಜನೆ ನಡೆದಿತ್ತು; ದಲಿತರೆಲ್ಲ ಸೇರಿದರು; ಗವಾಯಿಗಳ ಹಾಡು ಮೊಳಗುತ್ತಿತ್ತು. ರಾತ್ರಿಯ ಹೊತ್ತು ಊರಿನ ಲಿಂಗಾಯತ ಜನರು ಕಮಿಟಿ ಮಾಡಿಕೊಂಡು ಗವಾಯಿಗಳ ಕೊಲೆ ಮಾಡಬೇಕೆಂದು ನಿರ್ಧರಿಸಿ, ಅವರು ಭಜನೆ ಮಾಡುತ್ತಿದ್ದ ಸ್ಥಳಕ್ಕೆ ಬಂದರು. ಈ ವಿಷಯ ತಿಳಿದ ಕಾಶೀನಾಥ ಗವಾಯಿಗಳು ತಪ್ಪಿಸಿಕೊಂಡು ದಲಿತರೊಬ್ಬರ ಮನೆಯಲ್ಲಿ ಅಡಗಿ ಕುಳಿತರು. ಗವಾಯಿಗಳನ್ನು ಅಟ್ಟಿಸಿಕೊಂಡು ಬಂದ ಗುಂಪು, ಕಲ್ಲು ಬಡಿಗೆಯೊಂದಿಗೆ ಅವರು ಅಡಗಿ ಕುಳಿತ ಮನೆಯನ್ನು ಮುತ್ತಿದರು. ಆ ಮನೆಯ ಮೇಲೆ ಕಲ್ಲು ತೂರಿದರು. ಬಡಿಗೆಯಿಂದ ಬಾಗಿಲು ಬಡಿದರು. ಬಾಗಿಲು ಕದ ಮುರಿಯಲು ಯತ್ನಿಸಿದರು. ದಲಿತ ಮಹಿಳೆಯೊಬ್ಬಳು ಧೈರ್ಯಮಾಡಿ, ಕತ್ತಲಲ್ಲಿ ಹತ್ತಿರದ ಮರ ಏರಿ ಸವರ್ಣೀಯರ ಮೇಲೆ ಖಾರದ ಪುಡಿ ಎರಚಿದಳು. ರಾತ್ರಿ ಬಹಳ ಹೊತ್ತಿನವರೆಗೂ ಬಾಗಿಲ ಕದ ತೆಗೆಯಲು ಪ್ರಯತ್ನಿಸಿದರು. ಕೊನೆಗೂ ಅದು ಸಾಧ್ಯವಾಗಲಿಲ್ಲ. ಬೆಳಗಿನ ನಸುಕಿನಲ್ಲಿ ಗವಾಯಿಗಳು ತಪ್ಪಿಸಿಕೊಂಡು, ಗೆಳೆಯರ ಸಹಾಯದಿಂದ ಲಾರಿ ಹತ್ತಿ ಗುಲಬರ್ಗಾಕ್ಕೆ ಬಂದು ಪೊಲೀಸ್ ಕೇಸ್ ಕೊಟ್ಟರು. ಕೊಲೆಗೆ ಯತ್ನಿಸಿದ ನಲವತ್ತು ಜನ ಸವರ್ಣೀಯರನ್ನು ಹಿಡಿದು ಎರಡು ತಿಂಗಳ ಕಾಲ ನ್ಯಾಯಾಂಗ ಬಂಧನದಲ್ಲಿ ಇಡಲಾಯಿತು. ಆ ಗದ್ದಲದಲ್ಲಿ ಏನಾದರೂ ಬಾಗಿಲ ಕದ ಮುರಿದಿದ್ದರೆ, ಅಥವಾ ತಳ್ಳಾಟದಲ್ಲಿ ಬಾಗಿಲ ಚಿಲಕ ತೆಗೆದುಕೊಂಡಿದ್ದರೆ, ಖಂಡಿತ ಆ ದಿನ ಗವಾಯಿಗಳ ಕೊಲೆಯಾಗುತ್ತಿತ್ತು. ಇದು ಗವಾಯಿಗಳ ಬದುಕಿನಲ್ಲಿ ಮರೆಯಲಾರದ ಘಟನೆಯಾಗಿದೆ. ಅಂದು ನಾನು ಬುದ್ಧನ ಕೃಪೆಯಿಂದಲೇ ಬದುಕುಳಿದೆನೆಂದು ಗವಾಯಿ ಹೇಳುತ್ತಿದ್ದರು.

ಹಳ್ಳಿಯ ಹೋಟೆಲುಗಳಲ್ಲಿ ದಲಿತರಿಗೆ ಮೇಲಿನಿಂದ ನೀರು ಕೊಡುವುದು, ಅವರಿಗಾಗಿ ಕಪ್ಪು ಬಸಿ ಪ್ರತ್ಯೇಕವಾಗಿ ಇಟ್ಟು ಅಸ್ಪೃಶ್ಯತೆಯನ್ನು ಆಚರಿಸುವುದನ್ನು ಕಾಶೀನಾಥ ಗವಾಯಿಗಳು ೬೦ರ ದಶಕದಷ್ಟು ಹಿಂದೆಯೇ ಪ್ರತಿಭಟಿಸಿದ್ದಾರೆ.

> ಹಳ್ಳಿ ಜನರ ಮಳ್ಳ ವಿಚಾರ
> ಇನ್ನು ಬಿಟ್ಟಿಲ್ಲಪ್ಪ ಕಳ್ಳಾಟ ಚೋರ
> ಹಳ್ಳಿ ಹೋಟಲ ಕಪ್ಪು-ಬಸಿ ಬ್ಯಾರ
> ಕುಲ ಕೇಳ್ತಾರೊ ನೀವು ಯಾತರವರ
> ತಾಯಿ ಹಾರೂರಕಿ ತಂದೆ ಜೈಭೀಮ ದೇವರ
> ಯಾವುದು ಹೇಳಬೇಕರಿ ಭೂಮಿ ಬೀಜ ಬ್ಯಾರ

ಎಂದು ಹಾಡಿ ಅಸ್ಪೃಶ್ಯತೆಯನ್ನು ಆಚರಿಸುವ ಮಳ್ಳತನವನ್ನು (ಅವಿವೇಕತನ) ಬಿಟ್ಟು ಕೊಡಲು ಹೇಳಿದ್ದಾರೆ. 'ಕಟ್ಟಿ ಹಾಕೊ ಕೆಟ್ಟ ಗುಣದ ನಾಯಿ, ಕುಲಗೋತ್ರದ ಬಾಯಿ'

ಎಂದು ಹೇಳಿ ಕುಲಗೋತ್ರ ಎಂದು ಬಡಿದಾಡುವವರ ಬಾಯಿ ಮುಚ್ಚಿಸಿದ್ದಾರೆ. 'ಮುಟ್ಟಿ ತಟ್ಟಿ ಎಂಬುವರು ಹುಟ್ಟೇರಿ ಹ್ಯಾಂಗ?' ಎಂದು ಹಾಡಿನ ಮೂಲಕ ಪ್ರಶ್ನಿಸಿದ್ದಾರೆ. ಅವರ ಹಾಡಿನ ಪ್ರೇರಣೆಯಿಂದಾಗಿ ಅನೇಕ ಹಳ್ಳಿಗಳಲ್ಲಿ ದಲಿತರು ಅಸಮಾನತೆಯನ್ನು ವಿರೋಧಿಸ ತೊಡಗಿದರು. ಇದರ ಪರಿಣಾಮವಾಗಿ ಕೆಲವು ಊರುಗಳಲ್ಲಿ ದಲಿತರಿಗಾಗಿ ಹೋಟೆಲ್‌ಗಳಲ್ಲಿ ಪ್ರತ್ಯೇಕವಾಗಿ ಕಪ್ಪು ಬಸಿ ಇಡುವ ಪದ್ಧತಿ ನಿಂತಿತ್ತು. ಸಾರ್ವಜನಿಕ ಕೆರೆ, ಬಾವಿ, ಕೊಳವೆ ಬಾವಿಯ ನೀರು ಬಳಸಲು ದಲಿತರಿಗೆ ಸಾಧ್ಯವಾಯಿತು.

ಕಾಶೀನಾಥ ಗವಾಯಿಗಳು ಸಂಗೀತ, ಗಾಯನ ಹಾಗೂ ಕಾವ್ಯ ಪ್ರತಿಭೆಯ ಮೂಲಕ ಪ್ರಸಿದ್ಧಿಯನ್ನು ಪಡೆದಿದ್ದರೂ ಮೇಲ್ಜಾತಿಯ ಜನರು ಜಾತಿಕಾರಣಕ್ಕಾಗಿ ಇವರನ್ನು ತಿರಸ್ಕಾರದಿಂದಲೇ ಕಾಣುತ್ತಿದ್ದರು. ಇವರ ಪ್ರತಿಭೆಯ ಬಗ್ಗೆ ಲಘುವಾಗಿಯೇ ಮಾತನಾಡು ತ್ತಿದ್ದರು. ಒಮ್ಮೆ ತಂಗಿ ಲಕ್ಷ್ಮಿಯನ್ನು ಕಾಣಲು ಖಾನಾಪೂರಕ್ಕೆ ಹೋಗಿದ್ದರು. ಊರಿನ ಹನುಮಾನ ದೇವಾಲಯದಲ್ಲಿ ರಾತ್ರಿ ಭಜನೆ ನಡೆದಿತ್ತು. ಊಟವಾದ ಮೇಲೆ ಕಾಶೀನಾಥ ಗವಾಯಿಗಳು ಸೋದರಳಿಯ ದೇವೇಂದ್ರನನ್ನು ಕರೆದುಕೊಂಡು ಭಜನೆ ನಡೆದ ಸ್ಥಳಕ್ಕೆ ಹೋದರು. ಗವಾಯಿಗಳ ಖ್ಯಾತಿ ಗೊತ್ತಿದ್ದರೂ ಅಲ್ಲಿನ ಲಿಂಗಾಯತ ಜನರು ಇವನೇನು ಹಾಡುತ್ತಾನೆ; ಇವನಿಗೇನು ಬರುತ್ತದೆ ಎಂದು ಲಘುವಾಗಿ ಮಾತನಾಡಿದರು. ಶ್ರೇಷ್ಠ ಆಶುಕವಿಗಳಾದ ಗವಾಯಿಗಳು ಅಲ್ಲಿಯೇ ಬಸವಣ್ಣನವರ ಮೇಲೆ ಪದಕಟ್ಟಿ ಹಾಡ ತೊಡಗಿದರು. ಬಸವಣ್ಣನ ಹುಟ್ಟು, ತಂದೆ-ತಾಯಿ, ಕಲ್ಯಾಣಕ್ರಾಂತಿ, ಅವನ ತತ್ವಸಿದ್ಧಾಂತ ಇತ್ಯಾದಿ ಇಡೀ ಬಸವಣ್ಣನವರ ಚರಿತ್ರೆಯನ್ನೇ ನಿರರ್ಗಳವಾಗಿ ಹಾಡಿದರು. ರಾತ್ರಿ ಹನ್ನೆರಡಕ್ಕೆ ಆರಂಭವಾದ ಹಾಡು ಬೆಳಗಿನ ಜಾವ ನಾಲ್ಕು ಘಂಟೆಗೆ ಮುಗಿಸಿದರು. ಅಂದಿನಿಂದ ಖಾನಪೂರದ ಜನರು ಗವಾಯಿಗಳ ಹಾಡುಗಾರಿಕೆ, ಕಾವ್ಯ ಪ್ರತಿಭೆಯ ಬಗ್ಗೆ ಹಗುರವಾಗಿ ಮಾತನಾಡುವುದನ್ನು ನಿಲ್ಲಿಸಿದರು.

## ಪ್ರಶಸ್ತಿ ಹಾಗೂ ಗೌರವ

ಕಾಶೀನಾಥ ಗವಾಯಿಗಳು ಕಣ್ಣುಕಾಣದ ಗಾವಿಲರಾದರೂ ಅನೇಕ ಹೋರಾಟಗಳನ್ನು ಮಾಡಿದ್ದಾರೆ; ದಲಿತ ಸಮಾಜದ ಬಗ್ಗೆ ಸತತ ಚಿಂತನೆ ಮಾಡಿದ್ದಾರೆ. ನೂರಾರು ಹಾಡು ಗಳನ್ನು ರಚಿಸಿ ಅವುಗಳ ಮೂಲಕ ಅವರು ಉಂಟುಮಾಡಿದ ಜಾಗೃತಿ ಸಾಮಾನ್ಯವಾದುದಲ್ಲ. ಕಣ್ಣಿದ್ದವರು ಮಾಡಲು ಅಸಾಧ್ಯವಾದ ಕೆಲಸವನ್ನು ಗವಾಯಿಗಳು ಮಾಡಿ ತೋರಿಸಿದ್ದಾರೆ. ಕಣ್ಣಿಲ್ಲದವರು ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಲವು ಉದಾಹರಣೆಗಳು ಇರಬಹುದು. ಆದರೆ ಕಾಶೀನಾಥ ಗವಾಯಿಗಳಂತೆ ಸಾಮಾಜಿಕ ಹೋರಾಟವನ್ನು ಹುಟ್ಟುಹಾಕಿದವರು ಇಲ್ಲವೆಂದೇ ಹೇಳಬೇಕು. ಅವರ ಸಾಧನೆ ಕೇವಲ ಸಂಗೀತ ಕ್ಷೇತ್ರಕ್ಕಷ್ಟೇ ಸೀಮಿತವಾದುದಲ್ಲ. ಸಾಹಿತ್ಯ ರಚನೆ, ಸಾಮಾಜಿಕ ಸಂಘಟನೆ, ಸಾಮಾಜಿಕ ಪರಿವರ್ತನೆಯ ಹೋರಾಟಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಅವರ ಸಾಧನೆಯನ್ನು ಗುರುತಿಸಿ ಸರ್ಕಾರ ಹಲವು ಪ್ರಶಸ್ತಿಗಳನ್ನು ನೀಡಿದೆ. ಸಂಘ ಸಂಸ್ಥೆ ಹಾಗೂ ಸಾರ್ವಜನಿಕರಿಂದ ಅವರಿಗೆ ಸನ್ಮಾನ ಗೌರವಗಳು ಅರ್ಪಿತವಾಗಿವೆ.

ಕಾಶೀನಾಥ ಗವಾಯಿಗಳ ಸಾಹಿತ್ಯ ಸೇವೆಯನ್ನು ಗುರುತಿಸಿ ನವದೆಹಲಿಯ ಭಾರತೀಯ ದಲಿತ ಸಾಹಿತ್ಯ ಅಕಾಡೆಮಿಯು ೧೯೮೭-೮೮ರ ಸಾಲಿನ 'ಡಾ. ಬಾಬಾ ಸಾಹೇಬ ಅಂಬೇಡ್ಕರ ರಾಷ್ಟ್ರ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ. ಕನ್ನಡದ ನಾಡು-ನುಡಿಗೆ ಗವಾಯಿಗಳು ಸಲ್ಲಿಸಿದ ಸೇವೆಗಾಗಿ ಕರ್ನಾಟಕ ಸರ್ಕಾರ ೧೯೯೦ರ 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ'ಯನ್ನು ಕೊಡಮಾಡಿದೆ. 'ಸಂಗೀತಗಾರ, ಕವಿ, ಸಮಾಜ ಸೇವಕ, ಬಡ ಜನತೆಯ ಏಳಿಗೆಯಲ್ಲಿ ಅಚಲ ಸಂಕಲ್ಪ ಹೊಂದಿದವರು' ಎಂದು ೧೯೯೦ರ ರಾಜ್ಯೋತ್ಸವ ಪ್ರಶಸ್ತಿ ವಿಜೇತರ ಪರಿಚಯವಿರುವ ಕಿರು ಹೊತ್ತಿಗೆಯಲ್ಲಿ ಗವಾಯಿಗಳ ಬಹುಮುಖ ಸಾಧನೆಯನ್ನು ಕೊಂಡಾಡಲಾಗಿದೆ.

ಬಯಲಾಟದ ಮಾಸ್ತರರಾಗಿ ಹಳ್ಳಿ ಹಳ್ಳಿಗಳಿಗೆ ತಿರುಗಾಡಿ ಹೈದ್ರಾಬಾದ ಕರ್ನಾಟಕ ಭಾಗದ ಆಚೆಗೂ ಹೋಗಿ ನೂರಾರು ಬಯಲಾಟಗಳನ್ನು ಕಲಿಸಿ ಆಡಿಸಿದ ಕಾಶೀನಾಥ ಗವಾಯಿಗಳು ಜಾನಪದ ಕ್ಷೇತ್ರಕ್ಕೂ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅಂತೆಯೇ ಜನಪದರು ಇವರನ್ನು 'ಕಾಶೀನಾಥ ಮಾಸ್ತರ'ರೆಂದೇ ಗುರುತಿಸಿದ್ದಾರೆ. ಜಾನಪದ ಕ್ಷೇತ್ರಕ್ಕೆ ಗವಾಯಿಗಳ ಸೇವೆಯನ್ನು ಪರಿಗಣಿಸಿ ೧೯೯೬ರಲ್ಲಿ 'ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ' ನೀಡಲಾಗಿದೆ. ದೀಕ್ಷಾಭೂಮಿ ನಾಗಪೂರದಲ್ಲಿ ಒಂದು ಬೃಹತ್ ಸಭೆಯಲ್ಲಿ ಬೌದ್ಧಭಿಕ್ಕು ಆನಂದ ಕೌಸಲ್ಯಾಯನರ ಸಮ್ಮುಖದಲ್ಲಿ ಕಾಶೀನಾಥರನ್ನು ಸನ್ಮಾನಿಸಿ 'ಪಂಚಶೀಲ ಗವಾಯಿ' ಎಂಬ ಬಿರುದನ್ನು ನೀಡಿ ಗೌರವಿಸಲಾಗಿದೆ. ೧೯೯೦ರಲ್ಲಿ ಬೀದರದಲ್ಲಿ ನಡೆದ ಕನ್ನಡ ಶಕ್ತಿಕೇಂದ್ರದ ಮೂರನೆಯ ಅಧಿವೇಶನದಲ್ಲಿ ಕನ್ನಡ ಸೇವೆಗಾಗಿ ಗವಾಯಿಗಳನ್ನು ಸನ್ಮಾನಿಸಲಾಯಿತು. ಎಸ್. ನಿಜಲಿಂಗಪ್ಪ, ಚೆನ್ನಬಸವ ಪಟ್ಟದ್ದೇವರು, ಎಸ್.ಎಲ್. ಭೈರಪ್ಪ, ಚಿದಾನಂದಮೂರ್ತಿ, ಚಿತ್ರನಟ ಅಶೋಕ ಮುಂತಾದ ಗಣ್ಯರು ಉಪಸ್ಥಿತರಿದ್ದ ಅಂದಿನ ಸಭೆಯಲ್ಲಿ ಗವಾಯಿಗಳ ಕನ್ನಡ ಸೇವೆಯನ್ನು ಕೊಂಡಾಡಲಾಯಿತು. ಅಲ್ಲದೆ ೧೯೯೯ರಲ್ಲಿ ಬಾಬಾ ಸಾಹೇಬ ಅಂಬೇಡ್ಕರರ ೧೦೮ನೆಯ ಜಯಂತಿ ಉತ್ಸವ ಸಂದರ್ಭದಲ್ಲಿ ಗವಾಯಿಗಳಿಗೆ ಸನ್ಮಾನ ಪತ್ರ ನೀಡಿ ಗೌರವಿಸಲಾಗಿದೆ. ವಿವಿಧ ಸಂಘ-ಸಂಸ್ಥೆಗಳು ಗವಾಯಿಗಳಿಗೆ ಮಾಡಿದ ಸನ್ಮಾನಗಳಿಗೆ ಲೆಕ್ಕವಿಲ್ಲ.

ಗವಾಯಿಗಳು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ನೀಡಿದ ಸೇವೆಯನ್ನು ಪರಿಗಣಿಸಿಯೇ ಕರ್ನಾಟಕ ಸರ್ಕಾರ ಅವರಿಗೆ ಮಾಸಿಕ ೫೦೦ ರೂ ಗೌರವ ಧನವನ್ನು ಮಂಜೂರು ಮಾಡಿತ್ತು. ಬಹಳ ವರ್ಷಗಳ ಹಿಂದೆಯೇ ಕಾಶೀನಾಥ ಗವಾಯಿಗಳ ಜೀವನ ಚರಿತ್ರೆಯನ್ನು ೨ನೇ ತರಗತಿಯ 'ನುಡಿಗನ್ನಡ' ಪಠ್ಯಪುಸ್ತಕದಲ್ಲಿ ಇಟ್ಟಿದ್ದರೆಂಬುವುದು ಅನೇಕರಿಗೆ ಗೊತ್ತಿಲ್ಲ. ಗವಾಯಿಗಳ ಜೀವನ ಚರಿತ್ರೆಯನ್ನು ಪಠ್ಯಪುಸ್ತಕದ ಮೂಲಕ ಮಕ್ಕಳಿಗೆ ಪರಿಚಯಿಸಿ ಸರ್ಕಾರ ಅವರಿಗೆ ಅಪಾರವಾದ ಗೌರವವನ್ನು ನೀಡಿದೆ. ಹಲವಾರು ದೊಡ್ಡ ದೊಡ್ಡ ಸಭೆ ಸಮಾರಂಭಗಳಲ್ಲಿ ರಾಷ್ಟ್ರನಾಯಕರು ಉಪಸ್ಥಿತರಿದ್ದ ವೇದಿಕೆಗಳಲ್ಲಿ ಕಾಶೀನಾಥ ಗವಾಯಿಗಳಿಗೆ ಹಾಡುವ, ಮಾತನಾಡುವ ಅವಕಾಶಗಳು ಸಿಕ್ಕಿವೆ. ಆದರೆ ಬೀದರ ಜೀಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ ಗವಾಯಿಗಳಿಗೆ ದೊರೆಯದೆ ಹೋದದ್ದು ವಿಷಾದನೀಯವೆಂದೇ ಹೇಳಬೇಕು. ೫೦-೬೦ರ ದಶಕಗಳಷ್ಟು ಹಿಂದೆಯೇ ಕವಿತೆಗಳನ್ನು

ರಚಿಸಿ ಹಾಡಿದ ಕವಿಯಿವರು. ಅವರ ಮೊದಲ ಕವನ ಸಂಕಲನ ಪ್ರಕಟವಾದುದು ೧೯೫೪ರಲ್ಲಿ. ಪ್ರಾಯಶಃ ಇದೇ ಬೀದರ ಜಿಲ್ಲೆಯ ಮೊದಲ ಕವನ ಸಂಕಲನವಾಗಿರಲು ಸಾಧ್ಯ. ಕಾಲದ ದೃಷ್ಟಿಯಿಂದ ಬಹಳ ಮಹತ್ವ ಪಡೆಯುವ ಗವಾಯಿಗಳಿಗೆ 'ಸಮ್ಮೇಳನಾಧ್ಯಕ್ಷ' ಗೌರವ ದೊಡ್ಡದಾಗಿರಲಿಲ್ಲ. ಆದರೆ ಅದನ್ನು ಅವರಿಗೆ ಕೊನೆಯವರೆಗೂ ಸಿಗದಂತೆ ನೋಡಿಕೊಂಡ ಜಿಲ್ಲಾ ಸಾಹಿತ್ಯ ಪರಿಷತ್ತಿನವರು ತಮ್ಮ ಸಣ್ಣತನವನ್ನು ತೋರಿದ್ದಾರೆ. ಇದುವರೆಗೆ ಆದ ಸಾಹಿತ್ಯ ಸಮ್ಮೇಳನ ಅಧ್ಯಕ್ಷರುಗಳನ್ನು ನೋಡಿದರೆ, ಅವರಲ್ಲಿ ಬಹಳಷ್ಟು ಜನರಿಗೆ ಗವಾಯಿಗಳಿಗಿರುವಂತೆ ಬಹುಮುಖ ವ್ಯಕ್ತಿತ್ವ, ಹೋರಾಟದ ಹಿನ್ನೆಲೆ ಇಲ್ಲ. ಇದೆಲ್ಲ ಗಮನಿಸಿದಾಗ ಬೀದರ ಜಿಲ್ಲಾ ಸಾಹಿತ್ಯ ಪರಿಷತ್ತು, ಕಾಲಕಾಲಕ್ಕೆ ಬಂದ ಪರಿಷತ್ತಿನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಸಮ್ಮೇಳನಾಧ್ಯಕ್ಷರ ಆಯ್ಕೆಯ ವಿಷಯದಲ್ಲಿ ಕಾಶೀನಾಥ ಗವಾಯಿಗಳನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸುತ್ತಾ ಬಂದಂತೆ ತೋರುತ್ತದೆ.

### ಕೊನೆಯ ದಿನಗಳು

ಬುದ್ಧ-ಅಂಬೇಡ್ಕರರ ವಿಚಾರಗಳನ್ನು ತಲೆಯ ತುಂಬ ಹೊತ್ತು ಊರೂರು ಅಲೆದು ಪ್ರಚಾರ ಮಾಡಿದ ಗವಾಯಿಗಳ ಬಾಳಿನಲ್ಲಿಯೂ ಒಮ್ಮೆ ಮುಪ್ಪು ಆವರಿಸಿತು. ಸುಮಾರು ಆರು ದಶಕಗಳ ಕಾಲ ನಿರಂತರವಾಗಿ ಅಲೆದಾಡಿದ ಗವಾಯಿಗಳು ಶಿಕ್ಷಿತ-ಅಶಿಕ್ಷಿತ ರೆಲ್ಲರನ್ನೂ ಪ್ರಭಾವಿಸಿದರು. ಹೋದಲ್ಲೆಲ್ಲ ದಲಿತರ ಸಂಕಷ್ಟವನ್ನು ಕಂಡು ದುಃಖಿಸಿದರು. ತಮ್ಮ ಇಳಿವಯಸ್ಸಿನಲ್ಲಿಯೂ ಈ ಅಲೆದಾಟ ನಿಲ್ಲಲಿಲ್ಲ. ತಂಗಿಯ ಮಗ, ಅಳಿಯ ಪ್ರಕಾಶನ ಕೈಹಿಡಿದುಕೊಂಡು ಜನರು ಕರೆದ ಕಾರ್ಯಕ್ರಮಗಳಿಗೆಲ್ಲ ಹೋಗಿ ಬರುತ್ತಿದ್ದರು. ಸದಾ ಪ್ರಕಾಶ ಅವರ ಜೊತೆಯಲ್ಲಿಯೇ ಇರುತ್ತಿದ್ದನು. ಇಳಿವಯಸ್ಸಿನಲ್ಲಿ ಸಹಾಯ ವಾಗಲೆಂದೇ ಗಂಡುಮಕ್ಕಳಿಲ್ಲದ ಗವಾಯಿಗಳು ಪ್ರಕಾಶನಿಗೆ ತಮ್ಮ ಮಗಳು ಚಂದ್ರಶೀಲಾಳನ್ನು ಕೊಟ್ಟು ಮದುವೆ ಮಾಡಿ ತಮ್ಮಲ್ಲಿಯೇ ಇಟ್ಟುಕೊಂಡಿದ್ದರು. ತಮ್ಮ ಜೀವಿತ ಅವಧಿ ಯಲ್ಲಿಯೇ ದಲಿತರಲ್ಲುಂಟಾದ ಬದಲಾವಣೆಯನ್ನು ಕಂಡು ಸಂತೋಷಗೊಂಡರು. ಹೊಸ ಪೀಳಿಗೆಯ ದಲಿತ ವಿದ್ಯಾವಂತ ಯುವಕರ ಬಗ್ಗೆ ಹೆಮ್ಮೆ ಪಟ್ಟರು. ತಮ್ಮ ತಮ್ಮನಾದ ಪುಂಡಲೀಕನಿಗೆ ಓದಿಸಿ, ನೌಕರಿ ಕೊಡಿಸಿದ್ದರು. ಅವನೀಗ ಪ್ರತ್ಯೇಕವಾದ ಮನೆ ಮಾಡಿಕೊಂಡು ಬೀದರದಲ್ಲಿಯೇ ನೆಲೆಸಿದ್ದನು. ಐದು ಜನ ಹೆಣ್ಣು ಮಕ್ಕಳ ಮದುವೆ ಮಾಡಿ ಮುಗಿಸಿದ್ದರು. ಹೆಂಡತಿ ಮಹಾದೇವಿಗೆ ನೌಕರಿಯೂ ಸಿಕ್ಕಿತ್ತು; ಸಂಸಾರ ಸಾಗಿತ್ತು; ಮೊದಲಿನ ತೊಂದರೆ ಇರಲಿಲ್ಲ.

ಬಾಲ್ಯಕಾಲದಿಂದಲೂ ಹಾಡುತ್ತಲೇ ಬಂದ ಗವಾಯಿಗಳಿಗೆ ಅದೇಕೊ ಇಳಿವಯಸ್ಸಿನಲ್ಲಿ ಗಂಟಲ ನೋವು ಕಾಣಿಸಿಕೊಂಡಿತ್ತು. ಇವರನ್ನು ಪರೀಕ್ಷಿಸಿದ ಡಾಕ್ಟರರು ಹಾಡುವುದಾಗಲಿ, ಹೆಚ್ಚಿಗೆ ಮಾತನಾಡುವುದಾಗಲಿ ಮಾಡಕೂಡದೆಂದು ಸಲಹೆ ನೀಡಿದರು. ಕಾರಣ ಮೂರು ವರ್ಷಗಳ ಕಾಲ ಅವರು ಎಲ್ಲಿಗೂ ಹೋಗದೆ ಮನೆಯಲ್ಲಿಯೇ ಉಳಿದುಕೊಂಡರು. ಮಡದಿ, ಮಕ್ಕಳು ಅವರನ್ನು ಮನೆಯ ಹೊರಗೆ ಹೋಗಲು ಬಿಡಲಿಲ್ಲ. ಮುಂದೆ ಅಂಬೇಡ್ಕರರ ಮಹಾಪರಿನಿರ್ವಾಣ ಕಾರ್ಯಕ್ರಮಕ್ಕೆಂದು ೬ನೆಯ ಡಿಸೆಂಬರ್‌ಕ್ಕೆ ಮುಂಬೈಗೆ ಹೋದರು. ಅಲ್ಲಿ ದಾದರಿನಲ್ಲಿರುವ ಅಂಬೇಡ್ಕರ ಸಮಾಧಿಗೆ ಭೇಟಿ ನೀಡಿ ಗೌರವ

ಸಲ್ಲಿಸಿದರು. ಮುಂಬೈಯ ಚಿಕ್ಕವಾಡಿ, ಭಾಂಡುಪ, ಮನ್ಖೂರ ಸ್ಟೇಶನ್ ಮುಂತಾದ ಕಡೆಗಳಲ್ಲಿ ವಾಸವಾಗಿದ್ದ ದಲಿತ ಕನ್ನಡಿಗರು, ಗವಾಯಿಗಳ ಬಂಧುಗಳು, ಅಭಿಮಾನಿಗಳು ಅವರನ್ನು ಸನ್ಮಾನಿಸಿ, ಎಂಟು ದಿನಗಳವರೆಗೆ ಮುಂಬಯಿಯಲ್ಲಿಯೇ ಇಟ್ಟುಕೊಂಡರು. ಮತ್ತೆ ಹಾಡಕೂಡದೆಂದು ಈ ಹಿಂದೆ ಡಾಕ್ಟರರು ನೀಡಿದ ಸಲಹೆಯನ್ನು ಮುಂಬಯಿಗೆ ಬಂದ ಮೇಲೆ ಮರೆತು ಮುಂಬಯಿನ ಅಭಿಮಾನಿಗಳಿಗೋಸ್ಕರ ಅಲ್ಲಿನ ಕಾರ್ಯಕ್ರಮದಲ್ಲಿ ಹಾಡಿದರು. ಪುನಃ ಗಂಟಲು ನೋವು ಕಾಣಿಸಿಕೊಂಡಿತ್ತು. ದಿನಾಂಕ ೧೪.೪.೨೦೦೫ರಂದು ಬೀದರನಲ್ಲಿ ನಡೆದ ಅಂಬೇಡ್ಕರ ಜಯಂತಿಯ ಕಾರ್ಯಕ್ರಮದಲ್ಲಿ ಸಚಿವ ಗುರುಪಾದಪ್ಪ ನಾಗಮಾರಪಳ್ಳಿ ಗವಾಯಿಗಳನ್ನು ಸನ್ಮಾನಿಸಿದರು. ಸನ್ಮಾನ ಸ್ವೀಕರಿಸಿ ಸಾಯಂಕಾಲ ಮನೆಗೆ ಬಂದ ಗವಾಯಿಗಳಿಗೆ ಗಂಟಲು ನೋವು ಉಲ್ಬಣಗೊಂಡು ಮಾತೇ ಹೊರಡಲಿಲ್ಲ. ಮಾತು ಸಂಪೂರ್ಣ ನಿಂತು ಹೋಯಿತು. ಒಂದು ವರ್ಷಕಾಲ ಮಾತಿಲ್ಲದೆ ಹಾಸಿಗೆಯಲ್ಲಿ ಮಲಗಿದರು.

ಕಾಶೀನಾಥ ಗವಾಯಿಗಳಿಗೆ ಚಿಕಿತ್ಸೆಗೆಂದು ಹೈದ್ರಾಬಾದಕ್ಕೆ ಕರೆದುಕೊಂಡು ಹೋಗಿ, ಅಲ್ಲಿನ ನಿಜಾಮ ಆಸ್ಪತ್ರೆಯಲ್ಲಿ ಸೇರಿಸಲಾಯಿತು. ಸಂಗ್ರಹಿಸಿಕೊಂಡಿದ್ದ ಹಣವೆಲ್ಲ ಒಂದು ವಾರದಲ್ಲಿಯೇ ಖರ್ಚಾಗಿ ಹಣದ ಕೊರತೆಯುಂಟಾಯಿತು. ಹೊರ ಲೋಕದಲ್ಲಿ ಸಾಕಷ್ಟು ಹೆಸರು, ಖ್ಯಾತಿ ಪಡೆದಿದ್ದರೂ ಗವಾಯಿಗಳು ಶ್ರೀಮಂತರೇನೂ ಆಗಿರಲಿಲ್ಲ. ಆಸ್ಪತ್ರೆಯ ವೆಚ್ಚ ಭರಿಸಲು ಅವರ ಹೆಂಡತಿ, ಅಳಿಯ ಪ್ರಕಾಶ ಸಾಕಷ್ಟು ಪರದಾಡಿದರು. ಕಂಡವರಲ್ಲಿ ಹಣಕಾಸಿನ ಸಹಾಯ ಕೇಳಿದರು. ಶ್ರೀಮಂತ ದಲಿತರಾಗಲಿ, ಗವಾಯಿಗಳಿಂದ ಸಹಾಯ ಪಡೆದು ಮುಂದೆ ಬಂದವರಾಗಲಿ, ಯಾರೂ ಅವರ ನೆರವಿಗೆ ಬರಲಿಲ್ಲ. ಈ ಹಿಂದೆ ನಿಮಗೆ ಹಣ ಕೊಡುತ್ತೇನೆಂದು ಹೇಳಿ, ಗವಾಯಿಗಳ ಹಾಡುಗಳ ಹಸ್ತಪ್ರತಿಯನ್ನು ಒಯ್ದು ಪುಸ್ತಕ ಪ್ರಕಟಿಸಿಕೊಂಡ ದಲಿತ ಸಾಹಿತಿಯೊಬ್ಬರ ಮನೆಗೂ ಹೋಗಿ ಗವಾಯಿಗಳ ಹೆಂಡತಿ ಬರಿಗೈಯಿಂದ ವಾಪಸಾದರು. ಖರ್ಗೆಯವರ ಅಳಿಯ ನೀಡಿದ ಹತ್ತು ಸಾವಿರ ರೂಪಾಯಿ ಆಗಲೇ ಖರ್ಚಾಗಿತ್ತು. ನಿಜಾಮ ಆಸ್ಪತ್ರೆಯ ದುಬಾರಿ ವೆಚ್ಚ ಭರಿಸಲಾಗದೆ ಗವಾಯಿಗಳಿಗೆ ತಿರುಗಿ ಬೀದರಕ್ಕೆ ತರಲಾಯಿತು.

ಗವಾಯಿಗಳು ಮಾತಿಲ್ಲದೆ ಹಾಸಿಗೆ ಹಿಡಿದ ಸುದ್ದಿ ತಿಳಿದು ಅವರಿಗೆ ಸಂಗೀತ ಕಲಿಸಿದ ಅಮೀರಲಿ ಮಾಸ್ತರರು ತಮ್ಮ ಪ್ರೀತಿಯ ಶಿಷ್ಯನನ್ನು ನೋಡಲು ಸಿರಕಟನಳ್ಳಿಯಿಂದ ಬೀದರಕ್ಕೆ ಬಂದರು. ಶಿಷ್ಯನನ್ನು ಮಾತನಾಡಿಸಿ ನೋಡಿದರು. ಗವಾಯಿಗಳಿಗೆ ಮಾತು ಹೊರಡಲಿಲ್ಲ. ಸನ್ನೆಯ ಮೂಲಕವೇ ಮಾತನಾಡಿದರು. ಮಾತು ಬರುತ್ತಿಲ್ಲವೆಂದು ಕೈಸನ್ನೆಯಿಂದಲೇ ಹೇಳಿದರು. ಕೊನೆಯ ಗಳಿಗೆಯಲ್ಲಿ ಶಿಷ್ಯನೊಂದಿಗೆ ಮಾತನಾಡಲು ಆಗಲಿಲ್ಲವಲ್ಲ ಎಂಬ ಕೊರಗಿನಿಂದಲೇ ತೊಂಬತ್ತೈದು ವರ್ಷದ ಇಳಿವಯಸ್ಸಿನ ಅಮೀರಲಿ ಮಾಸ್ತರ ಹಿಂದಿರುಗಿದರು. ಗವಾಯಿಗಳ ತಂಗಿ ಲಕ್ಷ್ಮಿ ಮಾತನಾಡಲು ಬಂದಾಗ ಇನ್ನು ಅಲ್ಪ ಸ್ವಲ್ಪ ಮಾತು ಬರುತ್ತಿತ್ತು. ಲಕ್ಷ್ಮಿಯನ್ನು ಕಂಡೊಡನೆಯೆ 'ನನ್ನ ತಾಯಿ' ಎಂದು ಅಪ್ಪಿಕೊಂಡರು. ಬಾಲ್ಯದಿಂದಲೂ ಒಟ್ಟಿಗೆ ಇದ್ದು, ಒಟ್ಟಿಗೆ ಉಂಡು, ಉಪವಾಸವಿದ್ದು, ಆಡುತ್ತಾ, ಹಾಡುತ್ತಾ, ಅನನ್ಯವಾಗಿ ಕಾಲ ಕಳೆದ ತಂಗಿಯನ್ನು ಗವಾಯಿಗಳು ಬಹಳ

ಕಾಲದ ನಂತರ ಕಂಡಿದ್ದರು. ಅವಳನ್ನು ಕಂಡ ಕೂಡಲೇ ಭಾವ ಉಕ್ಕಿಬಂತು. ಬಾಲ್ಯದಲ್ಲಿ ತಂಗಿ ತನ್ನ ಕುರುಡು ಬದುಕಿಗೆ ಊರುಗೋಲಾದದ್ದು, ತಾನು ತಂಗಿಯ ಕೈಹಿಡಿದು ಹಳ್ಳಿಯ ಮನೆ ಮನೆ ಅಲೆದು ಹಾಡಿ ಭಿಕ್ಷೆ ಬೇಡಿ ಉಂಡದ್ದು, ಈ ಹಳೆಯ ಘಟನೆಗಳೆಲ್ಲ ಮರುಕಳಿಸಿ ಗವಾಯಿಗಳು ಕಣ್ಣಲ್ಲಿ ನೀರೂರಿದವು. ತನಗೆ ಸಾವು ಖಚಿತವೆಂದು ಅವರು ತಿಳಿದಿದ್ದರು. ಕಾಲು ಒತ್ತುತ್ತಾ ತನ್ನ ಹಾಸಿಗೆಯ ಬಳಿ ಕುಳಿತ ತಂಗಿ ಲಕ್ಷ್ಮಿಯನ್ನು ಕುರಿತು 'ನನ್ನ ತಂಗಿ, ನನ್ನ ತಾಯಿ, ನನ್ನ ಕಾಶಿ' ಎಂದು ದುಃಖಿಸಿ ಅವಳ ಮೈಮೇಲೆ ಪ್ರೀತಿ ಯಿಂದ ಕೈಸವರಿದರು.

ಕಾಶೀನಾಥರ ಬಹುಕಾಲದ ಗೆಳೆಯ ಮಾಣಿಕರಾವ ಜ್ಯೋತಿಯವರು ಗವಾಯಿಗಳ ನಿಧನಕ್ಕಿಂತ ಎರಡು ದಿನಗಳ ಮುಂಚೆ ಅವರನ್ನು ಕಾಣಲು ಮನೆಗೆ ಬಂದರು. ಆಗಲೂ ಮಾತು ಹೊರಡಲಿಲ್ಲ. ಗವಾಯಿಗಳು ಎದ್ದು ಕುಳಿತು ತಮ್ಮ ಶಿರವನ್ನು ಗೆಳೆಯನ ಎದೆಯಲ್ಲಿಟ್ಟು, ಮಾತು ಬರುತ್ತಿಲ್ಲವೆಂದು ದುಃಖಿಸಿದರು. ಆಗ ಮಾಣಿಕರಾವ ಜ್ಯೋತಿಯವರು 'ನಿನ್ನ ಮಾತು ನೀನು ಹಾಡಿನ ಮೂಲಕ, ಭಾಷಣದ ಮೂಲಕ ಖರ್ಚು ಮಾಡಿದ್ದಿ. ನಿನ್ನಲ್ಲಿದ್ದ ಮಾತುಗಳೆಲ್ಲ ಈಗ ಖರ್ಚಾಗಿ ಹೋಗಿವೆ. ಮತ್ತೆ ಮಾತನಾಡಲು ನಿನ್ನಲ್ಲೀಗ ಏನೂ ಉಳಿದಿಲ್ಲ' ಎಂದು ಹೇಳಿ ಗೆಳೆಯನನ್ನು ಸಮಾಧಾನ ಪಡಿಸಿದರು. ಕೊನೆಗೆ ಕಾಶೀನಾಥ ಗವಾಯಿಗಳು ಬೀದರಿನ ತಮ್ಮ ನಿವಾಸದಲ್ಲಿ ದಿನಾಂಕ ೬.೪.೨೦೦೬ರಂದು ಮಹಾಪರಿನಿರ್ವಾಣ ಹೊಂದಿದರು.

ದಲಿತ ಸಮಾಜದ ಗೋಳಿನ ಕಥೆಯನ್ನು ಬದುಕಿನುದ್ದಕ್ಕೂ ಪದಕಟ್ಟಿ ಹಾಡಿದರು; ಅವರ ಅಜ್ಞಾನ, ಕಷ್ಟದ ಬದುಕನ್ನು ಕಂಡು ಅತ್ತರು; ತಮ್ಮ ಸಮಾಜಕ್ಕಾಗಿ ಜೀವವನ್ನು ಸವೆಸಿದರು; ಆದರೆ ಅದಕ್ಕೆ ಪ್ರತಿಯಾಗಿ ಸಮಾಜ ಅವರಿಗೆ ಏನನ್ನು ಕೊಟ್ಟಿತು? ಬದುಕಿನ ಕೊನೆಯ ಗಳಿಗೆಯಲ್ಲಿಯೂ ಸಮಾಜ ಅವರಿಗೆ ಸಹಾಯ ಹಸ್ತ ಚಾಚಲಿಲ್ಲ.

## ವ್ಯಕ್ತಿತ್ವ

ಕಾಶೀನಾಥ ಗವಾಯಿಗಳದು ಸಾಧಾರಣ ಎತ್ತರ, ಕಪ್ಪು ಬಣ್ಣ, ಗಟ್ಟಿ ಮುಟ್ಟಾದ ದೇಹ, ಆಜಾನುಬಾಹು. ಧೋತರ ಮೇಲೊಂದು ಖಮೀಸ್ ಅಂಗಿ, ಕಾಲಲ್ಲಿ ಚಪ್ಪಲಿ ಧರಿಸುತ್ತಿದ್ದರು. ಬಾಲ್ಯದಲ್ಲಿ ಸಿಡುಬು ರೋಗಕ್ಕೆ ತುತ್ತಾದ ಕಾರಣ ಅವರ ದುಂಡಾದ ಮುಖದ ಮೇಲೆ ಸಿಡುಬಿನ ಕಲೆಗಳು (ದೇವಿಗಾಯ) ಎದ್ದು ಕಾಣುತ್ತಿದ್ದವು. ಆ ಕಾರಣಕ್ಕಾಗಿಯೇ ಮುಖ ಒರಟು ಒರಟಾಗಿ ಕಾಣುತ್ತಿತ್ತು. ಎರಡು ಅಂಧ ಕಣ್ಣುಗಳು ಕಪ್ಪು ಕನ್ನಡಕದಿಂದ ಸದಾ ಅಲಂಕಾರಗೊಂಡಿರುತ್ತಿದ್ದವು. ಕಾರ್ಯಕ್ರಮ ನೀಡಲು ಬೇರೆ ಎಲ್ಲಿಗಾದರೂ ಹೋಗಬೇಕಾದರೆ ಯಾರದಾದರೂ ಕೈ ಹಿಡಿದುಕೊಂಡು ಹೋಗುತ್ತಿದ್ದರು. ಬಗಲಿಗೊಂದು ಬ್ಯಾಗ್ ಇರುತ್ತಿತ್ತು. ಆ ಬ್ಯಾಗ್‌ನಲ್ಲಿ ಕೊಳಲು, ಪುಸ್ತಕ ಇರುತ್ತಿದ್ದವು.

ಅವರ ದಿನಚರಿ ಕ್ರಮಬದ್ಧವಾಗಿತ್ತು. ನಸುಕಿನಲ್ಲಿ ಬೇಗನೆ ನಾಲ್ಕು ಗಂಟೆಗೆ ಏಳುತ್ತಿದ್ದರು. ಬುದ್ಧನ ಪ್ರಾರ್ಥನೆಗಳು ಹೇಳುತ್ತಿದ್ದರು. ನಂತರ ಆ ಪ್ರಶಾಂತ ವಾತಾವರಣದಲ್ಲಿ ಕವಿತೆ

ಕಟ್ಟುತ್ತಿದ್ದರು. ಇಡೀ ಕವಿತೆ ಮನಸ್ಸಿನಲ್ಲಿಯೇ ಸೃಷ್ಟಿ ಮಾಡಿ ಅದು ಓಕೆ ಆದ ಮೇಲೆ, ಅದನ್ನು ಯಾರಿಂದಲಾದರೂ ಬರೆಸುತ್ತಿದ್ದರು. ಬಹಳ ದಿನಗಳವರೆಗೆ ಅವರ ಮನೆಯಲ್ಲಿ ಬಾಡಿಗೆಗೆ ಇದ್ದ ಕುರುಬ ಖೇಳಗಿಯ ನೀಲಕಂಠ ಅವರು ಹಾಡು ಬರೆದುಕೊಡುವಲ್ಲಿ ನೆರವಾಗುತ್ತಿದ್ದರು. ಐದು ಗಂಟೆಗೆ ಯಾರದಾದರು ಕೈಹಿಡಿದುಕೊಂಡು ವಾಕಿಂಗ್ ಹೋಗುತ್ತಿದ್ದರು. ನಂತರ ಸ್ನಾನ, ಊಟ. ಮಾವನ ಮನೆಯಲ್ಲಿದ್ದರೂ ಇದೇ ದಿನಚರಿ ಮುಂದುವರೆಯುತ್ತಿತ್ತು. ಅವರ ಊಟ ತುಂಬ ಸಾಧಾರಣವಾಗಿತ್ತು. ಮೊಸರು, ಮಜ್ಜಿಗೆ, ರೊಟ್ಟಿ, ಚಟ್ನಿ, ಅನ್ನ ಇಷ್ಟಪಡುತ್ತಿದ್ದರು. ಮಾಂಸ ಆಹಾರದಲ್ಲಿ ವಿಶೇಷ ಆಸಕ್ತಿ ಇರಲಿಲ್ಲ.

ಅಂಥ ಕವಿಗಳು ವಿರಳ, ಕವಿಯಾಗಿ ಗಾಯಕರಾಗಿರುವುದು ಇನ್ನು ವಿರಳ. ಕವಿ, ಗಾಯಕ, ಹೋರಾಟಗಾರರಾಗಿರುವುದು ಅತ್ಯಂತ ವಿರಳ. ಕಾಶೀನಾಥ ಗವಾಯಿಗಳು ಅತ್ಯಂತ ವಿರಳ ವರ್ಗಕ್ಕೆ ಸೇರುತ್ತಾರೆ. ಅವರು ಉತ್ತಮ ಕವಿ, ಗಾಯಕ, ಸಂಗೀತಗಾರರಾಗಿದ್ದರು. ಕವಿತೆ ರಚನೆ, ಹಾಡುಗಾರಿಕೆ, ಸಂಗೀತ ಇವು ಅವರಿಗೆ ಬಾಲ್ಯದಿಂದಲೇ ಬಂದ ಹವ್ಯಾಸಗಳಾಗಿದ್ದವು. ಅವು ಬದುಕಿನ ಅವಿಭಾಜ್ಯ ಅಂಗವಾಗಿದ್ದವು. ಅವರ ಹಾಡುಗಳು ಕೇಳುಗರ ಮೇಲೆ ತೀವ್ರ ಪರಿಣಾಮವನ್ನುಂಟು ಮಾಡುತ್ತಿದ್ದವು. ಅವುಗಳ ಪರಿಣಾಮ ಎಷ್ಟಿರುತ್ತಿತ್ತೆಂದರೆ, ಅನೇಕ ಸಲ ಕೇಳುಗರು ಅತ್ತುಬಿಡುತ್ತಿದ್ದರು. ಅವರೊಬ್ಬರು ಶ್ರೇಷ್ಠ ಆಶುಕವಿಗಳಾಗಿದ್ದರು. ಸ್ಥಳದಲ್ಲಿಯೇ ಪದಕಟ್ಟಿ ಹಾಡುತ್ತಿದ್ದರು. ಕೊಡದೂರು ಕಾರ್ಯ ತಡೆಯಲು ಹೋದಾಗ, ರಟಕಲ್ ರೇವಣಸಿದ್ಧೇಶ್ವರ ದೇವಾಲಯ ಪ್ರವೇಶ ಹಾಗೂ ಕಾಳಗಿಯ ಕಾಳೂರು ಲಿಂಗದೇವರ ನೀರಿನ ಬುಗ್ಗೆ ಮುಟ್ಟಿದ ಸಂದರ್ಭಗಳಲ್ಲಿ, ಆ ಘಟನೆಗೆ ಸಂಬಂಧಿಸಿದಂತೆ ಅಲ್ಲಿಯೇ ಹಾಡು ರಚಿಸಿ, ಹಾಡಿ, ವಿರೋಧಿಸಲು ಬಂದ ಮೇಲ್ಜಾತಿಯವರು ಬೆರಗಾಗುವಂತೆ ಮಾಡಿದ್ದಾರೆ. ಇಂದಿರಾ ಗಾಂಧಿ ಸತ್ತಾಗ, ಘಾಟಹಿಪ್ಪರಗಾದಲ್ಲಿ ಇಂದಿರಾ ಗಾಂಧಿ ಮೇಲೆ ಪದಕಟ್ಟಿ ಹಾಡಿದ ಸಂದರ್ಭವನ್ನು ಅಲ್ಲಿ ಜನರು ಇಂದಿಗೂ ನೆನೆಯುತ್ತಾರೆ.

ಕೊಳಲು ನುಡಿಸುವುದರಲ್ಲಿ ಗವಾಯಿಗಳು ಸಿದ್ಧಹಸ್ತರಾಗಿದ್ದರು. ಉತ್ತಮ ದರ್ಜೆಯ ಕೊಳಲು ಅವರ ಬ್ಯಾಗ್‌ನಲ್ಲಿ ಯಾವಾಗಲೂ ಇರುತ್ತಿತ್ತು. ಒಮ್ಮೆ ಬಡತನದಲ್ಲಿ ಬಳಲುತ್ತಿದ್ದ ಸೋದರಮಾವನ ಕುಟುಂಬದ ಐದಾರು ಜನ ಸದಸ್ಯರನ್ನು ಕೆಲಸ ಕೊಡಿಸಲೆಂದು ಮುಂಬಯಿಗೆ ಕರೆದುಕೊಂಡು ಹೊರಟಿದ್ದರು. ಗುಲಬರ್ಗಾಕ್ಕೆ ಬಂದು ಎಲ್ಲರೂ ರೈಲು ಹತ್ತಿದ್ದರು. ಅವರೆಲ್ಲರಿಗೂ ಹಸಿವಾಗಿತ್ತು. ಹಸಿವು ತಾಳಲಾರದೆ ಗವಾಯಿಗಳ ಸೋದರಳಿಯ ಅಳತೊಡಗಿದ್ದನು. ಬಿದ್ದು ಸಾಯುತ್ತೇನೆಂದು ದುಃಖಿಸತೊಡಗಿದನು. ಗವಾಯಿಗಳಿಗೆ ಏನು ಮಾಡುವುದೆಂದು ತೋಚದಾಯಿತು. ಕೂಡಲೆ ಬ್ಯಾಗ್‌ನಲ್ಲಿದ್ದ ಕೊಳಲನ್ನು ತೆಗೆದು ಅದ್ಭುತವಾಗಿ ನುಡಿಸತೊಡಗಿದರು. ಸಹಪ್ರಯಾಣಿಕರಿಂದ ಸಾಕಷ್ಟು ಕಾಣಿಕೆ ಸಂಗ್ರಹ ವಾಯಿತು. ಸೋಲಾಪೂರಕ್ಕೆ ಬಂದ ಮೇಲೆ ಅವರೆಲ್ಲರಿಗೂ ಊಟ ಕೊಡಿಸಿದರು.

ತಂಗಿ ಲಕ್ಷ್ಮಿ ಮನೆಗೆ ಖಾನಾಪೂರಕ್ಕೆ ಹೋದಾಗಲೆಲ್ಲ ಮನೆಯ ಹತ್ತಿರವಿರುವ ಜಟ್ಟಪ್ಪ ಮುತ್ಯಾನ ಗುಡ್ಡ ಹತ್ತಿ ಕೊಳಲು ನುಡಿಸುತ್ತಿದ್ದರು. ಅವರ ಕೊಳಲಿನ ಇಂಪಾದ ನಾದ ಆ ಪುಟ್ಟ ಹಳ್ಳಿಯೆಲ್ಲ ಆವರಿಸುತ್ತಿತ್ತು. ಅಲ್ಲಿನ ಜನರು ಬೆರಗಾಗಿ ನೋಡುತ್ತಿದ್ದರು;

ಕೊಳಲಿನ ಆನಂದವನ್ನು ಸವಿಯುತ್ತಿದ್ದರು. ಸಾಯಂಕಾಲದ ಹೊತ್ತಿನಲ್ಲಿ ನುಡಿಸುತ್ತಿದ್ದ ಆ ಕೊಳಲ ನಾದ ಖಾನಪೂರದ ಹತ್ತಿರವಿರುವ ಐನಾಪೂರದವರೆಗೂ ಕೇಳಿಬರುತ್ತಿತ್ತಂತೆ. ಬಯಲಾಟ, ಕೋಲಾಟಗಳಲ್ಲಿ ನುಡಿಸುತ್ತಿದ್ದ ಕೊಳಲು ವಾದನ ಕೇಳುಗರನ್ನು ಮೋಡಿ ಮಾಡಿಬಿಡುತ್ತಿತ್ತು. ಹಾದಿಹೋಕರು ಗವಾಯಿಗಳು ಕೊಳಲು ನುಡಿಸುವುದನ್ನು ನಿಂತು ಆಲಿಸುತ್ತಿದ್ದರು.

ಹಿಂದೂ ಧರ್ಮದ ಕಂದಾಚಾರ, ಮೂಢನಂಬಿಕೆಗಳ ಬಗ್ಗೆ ಗವಾಯಿಗಳಿಗೆ ವಿರೋಧವಿತ್ತು. ಧರ್ಮ ಮತ್ತು ದೇವರ ಹೆಸರಿನಲ್ಲಿ ನಡೆಯುತ್ತಿರುವ ದಲಿತ ಮಹಿಳೆಯರ ಶೋಷಣೆಯನ್ನು ಗವಾಯಿಗಳು ಖಂಡಿಸಿದರು. ಹತ್ತಾರು ದೇವರುಗಳಿಗೆ ಹರಕೆ ಹೊತ್ತು, ಸಿಕ್ಕ ಸಿಕ್ಕ ದೇವಾಲಯಗಳಿಗೆ ಅಲೆಯುವುದು ಅಜ್ಞಾನವೆಂದು ಹೇಳುತ್ತಿದ್ದರು. ಕೊಲ್ಲುವವ ದೇವರಲ್ಲ. ಶಂಬುಕನನ್ನು ಕೊಂದ 'ಹಿಂಸೆ ರಾಮಚಂದ್ರ ಅಲ್ಲೋ ದೇವರ' ಎಂದು ಪದ ಕಟ್ಟಿ ಹಾಡಿದ್ದಾರೆ. ಕಾಶೀನಾಥ ಗವಾಯಿಗಳಿಗೆ ಬುದ್ಧ ಧರ್ಮ ಪ್ರಿಯವಾಗಿತ್ತು. ಅದನ್ನು ಬಹಳ ಮೆಚ್ಚಿಕೊಂಡಿದ್ದರು. ಅಂತೆಯೇ ನಾಗಪೂರಕ್ಕೆ ಹೋಗಿ ಬುದ್ಧ ಧರ್ಮವನ್ನು ಸ್ವೀಕರಿಸಿದರು. ಬುದ್ಧ ಧರ್ಮದ ತತ್ವಗಳನ್ನು ಹಾಡಿನ ಮೂಲಕ ಪ್ರಚಾರ ಮಾಡಿದರು. ಗವಾಯಿಗಳು ಅಂಬೇಡ್ಕರವಾದಿಗಳಾಗಿದ್ದರು. ಅಂಬೇಡ್ಕರರ ಅಪ್ಪಟ ಅಭಿಮಾನಿಯಾಗಿದ್ದರು. ತಮ್ಮ ಹಾಡುಗಳಲ್ಲಿ ಬುದ್ಧ–ಅಂಬೇಡ್ಕರರನ್ನು ದೇವರೆಂದೇ ಧ್ಯಾಸಿಸಿದ್ದಾರೆ. ಬಸವಣ್ಣನವರ ಬಗ್ಗೆಯೂ ಅಷ್ಟೇ ಗೌರವವಿತ್ತು.

ಕಾಶೀನಾಥ ಗವಾಯಿಗಳದು ಬಹುಮುಖ ವ್ಯಕ್ತಿತ್ವ. ಅವರು ಕವಿ, ಗಾಯಕ, ಸಂಗೀತಗಾರ, ನಟ, ಹೋರಾಟಗಾರ, ದೇಶಭಕ್ತ, ಸಮಾಜ ಸುಧಾರಕರಾಗಿದ್ದರು. ಅವರಲ್ಲಿ ವೈಚಾರಿಕ ಬದ್ಧತೆ ಇತ್ತು. ಆಶೆ ಆಮಿಷಗಳಿಗೆ ಒಳಗಾಗಿ ತಮ್ಮ ಸಿದ್ಧಾಂತವನ್ನು ಬಿಟ್ಟು ಕೊಟ್ಟವರಲ್ಲ. ಯಾವುದನ್ನೂ ತಮಗೆ ಬೇಕೆಂದು ಹಪಹಪಿಸುತ್ತಿರಲಿಲ್ಲ. ಹಣದ ವ್ಯಾಮೋಹವು ಅವರಿಗಿರಲಿಲ್ಲ. ಅವರು ಕೊನೆಯವರೆಗೂ ಬಡವರಾಗಿಯೇ ಉಳಿದರು. ಕಾಶೀನಾಥ ಗವಾಯಿಗಳು ಸಂಚಾರಿ ಜೀವಿಗಳಾಗಿದ್ದರು. ಯಾವಾಗಲೂ ಪ್ರವಾಸ ದಲ್ಲಿರುತ್ತಿದ್ದರು. ಅವರಿಗೆ ಜ್ಞಾಪಕಶಕ್ತಿ ಅಗಾಧವಾಗಿತ್ತು. ಒಮ್ಮೆ ಒಬ್ಬರ ಜೊತೆಯಲ್ಲಿ ಮಾತನಾಡಿ ಪರಿಚಯಿಸಿಕೊಂಡರೆ, ಮತ್ತೆ ಆ ವ್ಯಕ್ತಿ ಎಲ್ಲಿ, ಯಾವಾಗ ಸಿಕ್ಕರೂ ಅವನನ್ನು ಗುರುತಿಸಿ ಹೆಸರು ಹಿಡಿದು ಕರೆಯುತ್ತಿದ್ದರು.

ತಮ್ಮ ಸಂಪರ್ಕಕ್ಕೆ ಬಂದ ಜನರ ಮೇಲೆ ಪ್ರಭಾವ ಬೀರುವಂತಹ ವ್ಯಕ್ತಿತ್ವ ಅವರ ದಾಗಿತ್ತು. ಅವರ ಪ್ರಭಾವಶಾಲಿ ಅರ್ಥಪೂರ್ಣ ಮಾತುಗಳು ಹಾಗೂ ಅಭಿವ್ಯಕ್ತಿ ರೀತಿ ಹತ್ತಿರವಿದ್ದವರನ್ನು ತಟ್ಟುತ್ತಿದ್ದವು. ಒಮ್ಮೊಮ್ಮೆ ಅವರ ಮಾತುಗಳು ಮಹೋನ್ನತಿಯ ಮಾತಾಗಿ **ಕೇಳುಗರ** ಮನಸ್ಸಿನಲ್ಲಿ ಮರೆತು ಹೋಗದಂತೆ ಉಳಿದುಬಿಡುತ್ತಿದ್ದವು. ನಾನು ಬಿ.ಎ. ಓದುವಾಗ ಒಮ್ಮೆ ಹುಮನಾಬಾದದಲ್ಲಿ ಗವಾಯಿಗಳನ್ನು ಕಂಡು ಮಾತನಾಡಿಸಿದ್ದೆ. ಅವರು ನನಗೆ ಹೀಗೆ ಹೇಳಿದ್ದರು, 'ಒಂದು ಹುಡುಗಿಯನ್ನು ಪ್ರೀತಿಸಿದಾಗ ಹೇಗೆ ನಮ್ಮ ಮನಸ್ಸು ಹಗಲು ರಾತ್ರಿ ಅವಳ ಧ್ಯಾನದಲ್ಲಿರುತ್ತದೆಯೋ ಹಾಗೆಯೇ ನಮ್ಮ ಮನಸ್ಸು ಧ್ಯಾನ ಹಗಲು ರಾತ್ರಿ ನಮ್ಮ ಓದಿನ ಮೇಲಿರಬೇಕು. ನಮ್ಮ ದಲಿತರಿಗೆ ಅಡವಿಯಲ್ಲಿ

ಹೊಲ ಇಲ್ಲ; ಊರಲ್ಲಿ ಮನೆಯಿಲ್ಲ. ಶಿಕ್ಷಣವೇ ನಮಗೆ ಆಸ್ತಿ.' ಅವರ ಈ ಮಾತು ನನಗೆ ಎಂದೂ ಮರೆತು ಹೋಗಿಲ್ಲ. ಮೇಲಿಂದ ಮೇಲೆ ನೆನಪಾಗುತ್ತದೆ. ಸಾಂದರ್ಭಿಕವಾಗಿ ಇಂತಹ ಅನೇಕ ಮಾತುಗಳನ್ನು ಅವರು ಆಡುತ್ತಿದ್ದರು.

ಕಾಶೀನಾಥ ಗವಾಯಿಗಳಿಗೆ ಯಾವುದೇ ದುಶ್ಚಟಗಳು ಇರಲಿಲ್ಲ. ಮದ್ಯ, ಧೂಮಪಾನ ವನ್ನು ಅವರು ಮುಟ್ಟುತ್ತಿರಲಿಲ್ಲ. ಅಲ್ಲದೆ ಇತರರಿಗೂ ದುಶ್ಚಟದಿಂದ ದೂರವಿರುವಂತೆ ನೀತಿ ಹೇಳುತ್ತಿದ್ದರು. ತಮ್ಮ ಜೊತೆಯಲ್ಲಿರುತ್ತಿದ್ದ ಭಜನೆ ಮಂಡಳಿಯ ಸದಸ್ಯರು ಗವಾಯಿಗಳನ್ನು ಅನುಸರಿಸುತ್ತಿದ್ದರು. ಅವರಲ್ಲಿ ಯಾರಾದರೂ ಚಟವಿದ್ದವರು ಭಜನೆ ಮಂಡಳಿಯಿಂದ ಎದ್ದು ಹೋಗಿ ಕದ್ದು ಬೀಡಿ ಸಿಗರೇಟ್ ಸೇದಿ ಬಂದು ಕುಳಿತರೆ ಅಂಥವರನ್ನು ಕಣ್ಣಿಲ್ಲದಿದ್ದರೂ ಸೂಕ್ಷ್ಮ ಸಂವೇದನೆಯಿಂದಲೇ ಗುರುತಿಸುತ್ತಿದ್ದರು. ಅಂಥ ವರನ್ನು ಕುರಿತು 'ಗೂಟದ ಹಗ್ಗ ಕಡಕೊಂಡು ಹೊಸಲು ತಿಂದು ಬಂತು ದನ' ಎಂದು ಒಗಟಿನ ರೀತಿಯಲ್ಲಿ ಟೀಕಿಸುತ್ತಿದ್ದರು; ಬೈಯುತ್ತಿದ್ದರು. ಯಾರಾದರೂ ಕೈಯಲ್ಲಿ ತಂಬಾಕು ಹಿಡಿದುಕೊಂಡರೆ 'ಎ ತಮ್ಮಾ ಯಾರಿದ್ದೀರಿ ತಂಬಾಕು ಒರಸವ್ರು ಆ ಕಡೀಗಿ ಹೋಗ್ರಿ' ಎಂದು ಹೇಳಿ ಗುಂಪಿನಿಂದ ಎಬ್ಬಿಸಿ ಕಳಿಸುತ್ತಿದ್ದರು.

ಕಾಶೀನಾಥ ಗವಾಯಿಗಳು ನಿಷ್ಠುರವಾದ ನಡೆಯುಳ್ಳವರೂ ಛಲವಾದಿಗಳೂ ಆಗಿದ್ದರು. ಬಡತನ, ಜಾತಿಯ ಅವಮಾನಗಳೆಲ್ಲ ಛಲದಿಂದಲೇ ಎದುರಿಸಿದರು. ಛಲ, ನಿಷ್ಠುರತೆಗೆ ಹೆಸರಾದಂತೆ ನಯ, ವಿನಯಕ್ಕೂ ಹೆಸರಾಗಿದ್ದರು. ಗುರು ಹಿರಿಯರಲ್ಲಿ ಅವರಿಗೆ ಅಪಾರವಾದ ಗೌರವವಿತ್ತು. ತಮಗೆ ಸಂಗೀತ ಕಲಿಸಿಕೊಟ್ಟ ಅಮೀರಲಿ ಮಾಸ್ತರ ಮತ್ತು ಅವರ ಪತ್ನಿ ಫಾತಿಮಾರ ಪಾದ ಮುಟ್ಟಿ ನಮಸ್ಕರಿಸುತ್ತಿದ್ದರು. ಸಣ್ಣ ಸಹಾಯ ಮಾಡಿದವರನ್ನೂ ಅವರು ಮರೆಯುತ್ತಿರಲಿಲ್ಲ. ಅಂತಹವರನ್ನು ಕೃತಜ್ಞತೆಯಿಂದ ನೆನೆಸಿ ಕೊಳ್ಳುತ್ತಿದ್ದರು. ಕಣ್ಣಿಲ್ಲದಿದ್ದರೂ ಗವಾಯಿಗಳು ಅಂತರಂಗದ ಬೆಳಕಾಗಿದ್ದರು.

# ಸಾಹಿತ್ಯ

# ಸಾಹಿತ್ಯ

**ಸು**ಮಾರು ಇನ್ನೂರಕ್ಕೂ ಹೆಚ್ಚು ತತ್ವಪದಗಳನ್ನು ರಚಿಸಿರುವ ಕಾಶೀನಾಥ ಪಂಚಶೀಲ ಗವಾಯಿಗಳು ಹೈದ್ರಾಬಾದ ಕರ್ನಾಟಕದ ಜನಪ್ರಿಯ ಕವಿ. ಇತರ ತತ್ವಪದಕಾರರಂತೆ ಆತ್ಮ-ಪರಮಾತ್ಮಕ್ಕಷ್ಟೇ ಜೋತು ಬೀಳದೆ, ಸಮಕಾಲೀನ ಬದುಕಿನ ಸಮಸ್ಯೆ ಕುರಿತು ಹಾಡಿದ, ತತ್ವಪದಗಳಿಗೆ ವೈಚಾರಿಕ ಸ್ಪರ್ಶವನ್ನು ನೀಡಿದ ಕವಿಯಿವರು. ಆ ಕಾರಣಕ್ಕಾಗಿಯೇ ಕಾಶೀನಾಥ ಗವಾಯಿಗಳು ಇತರ ತತ್ವಪದಕಾರರಗಿಂತಲೂ ಭಿನ್ನವಾಗಿ ನಿಲ್ಲುತ್ತಾರೆ. ಬುದ್ಧ-ಬಸವ-ಅಂಬೇಡ್ಕರರ ವಿಚಾರ, ಸಮಕಾಲೀನ ಸಮಾಜ, ಧರ್ಮದ ಅಂಧ ಆಚರಣೆ ಹಾಗೂ ಜಾನಪದ ಗೀತೆ, ಹಿಂದೀ ಚಿತ್ರಗೀತೆಗಳು ಕಾಶೀನಾಥರ ಹಾಡಿಗೆ ಪ್ರೇರಣೆಯಾಗಿವೆ. ಇದುವರೆಗೆ ಕಾಶೀನಾಥ ಗವಾಯಿಗಳ ಎರಡು ಕೃತಿಗಳು ಪ್ರಕಟವಾಗಿವೆ. ಬುದ್ಧ ವಚನಾಮೃತ (೧೯೫೪), ಹಾಗೂ ಬುದ್ಧ-ಬಸವ-ಅಂಬೇಡ್ಕರ ತತ್ವಜ್ಞಾನ (೧೯೬೪).

ಕಾವ್ಯದ ದೃಷ್ಟಿಯಿಂದ ಅಲ್ಲದಿದ್ದರೂ ಕಾಲ ಮತ್ತು ವೈಚಾರಿಕ ದೃಷ್ಟಿಯಿಂದ ಗವಾಯಿಗಳ ಕೃತಿಗಳಿಗೆ ಮಹತ್ವವಿದೆ. ಅವರ ಬುದ್ಧ ವಚನಾಮೃತ ಪ್ರಕಟವಾದಾಗ ಆಗಿನ್ನೂ ಹೊಸಗನ್ನಡದಲ್ಲಿ ಪ್ರಗತಿಶೀಲರ ಕಾಲ. ಆ ಕಾಲಘಟ್ಟದಲ್ಲಿ ಸಾಹಿತ್ಯ ರಚನೆಗೆ ತೊಡಗಿದ್ದ ಬೀದರ ಜಿಲ್ಲೆಯ ಏಕೈಕ ಕವಿ ಕಾಶೀನಾಥ ಗವಾಯಿ. ಪ್ರಾಯಶಃ ಕಾಶೀನಾಥ ಗವಾಯಿಗಳ 'ಬುದ್ಧ ವಚನಾಮೃತ'ವೇ ಬೀದರ ಜಿಲ್ಲೆಯ ಮೊದಲ ಪ್ರಕಟಿತ ಕವನ ಸಂಕಲನವಾಗಿರಬೇಕು. ಆದರೆ ಇದನ್ನು ಮರೆಮಾಚಲಾಗಿದೆ. ಎಲ್ಲಿಯೂ ಈ ವಿಷಯವನ್ನು ಯಾರೂ ಪ್ರಸ್ತಾಪಿಸಿಲ್ಲ; ದಾಖಲಿಸಿಲ್ಲ. ಜನಪ್ರಿಯವಾದ ರಾಗ, ಜನಪರವಾದ ಧೋರಣೆ, ಹಾಗೂ ಜನಸಾಮಾನ್ಯರ ಆಡುಭಾಷೆಯಿಂದಾಗಿ ಗವಾಯಿಗಳ ತತ್ವಪದಗಳು ಜಾನಪದ ಗೀತೆಗಳಂತೆ ಜನಪ್ರಿಯವಾಗಿ ಜನರ ನಾಲಿಗೆಯ ಮೇಲೆ ಉಳಿದುಕೊಂಡಿವೆ. ಅವರ ತತ್ವಪದಗಳಲ್ಲಿ ದಲಿತ ಸಮಾಜ ಹಾಗೂ ಸಂಸ್ಕೃತಿಯ ಚಿತ್ರಣವಿದೆ; ಬುದ್ಧ-ಬಸವ-ಅಂಬೇಡ್ಕರರ ತತ್ವ ವಿಚಾರವಿದೆ; ಎಲ್ಲಕ್ಕಿಂತಲೂ ಮುಖ್ಯವಾಗಿ ವೈಚಾರಿಕ ನೆಲೆ ಇದೆ. ಪುರಾಣ, ಚರಿತ್ರೆ ಹಾಗೂ ರಾಜಕೀಯ ವಿಚಾರವೂ ಇದೆ. ಮೂಢ ನಂಬಿಕೆ, ಹಾಗೂ ಜಾತಿವಾದಕ್ಕೆ ಪ್ರತಿಭಟನೆ, ದೇಶಭಕ್ತಿ, ನೀತಿ ಬೋಧನೆ, ಕ್ರಾಂತಿಕಾರಕ ಮತ್ತು ಪ್ರಗತಿಪರ ನಿಲುವುಗಳಿಂದಾಗಿ ಗವಾಯಿಗಳ ತತ್ವಪದಗಳು ಓದುಗರ / ಕೇಳುಗರ ಮೇಲೆ ಪ್ರಭಾವ ಬೀರುತ್ತವೆ. ೫೦-೬೦ರ ದಶಕಗಳಷ್ಟು ಹಿಂದೆಯೇ ಈ ಭಾಗದ ದಲಿತ ಸಮುದಾಯದ ಮೇಲೆ ಗವಾಯಿಗಳ ಹಾಡುಗಳು ಬೀರಿದ ಪ್ರಭಾವ, ಮೂಡಿಸಿದ ಎಚ್ಚರ ಬಹಳ ಮಹತ್ವದ್ದಾಗಿದೆ.

## ದಲಿತ ಸಮಾಜ ಹಾಗೂ ಸಂಸ್ಕೃತಿ

ದಲಿತ ಸಮಾಜ ಹಾಗೂ ಸಂಸ್ಕೃತಿಯನ್ನು ಚೆನ್ನಾಗಿ ಬಲ್ಲವರಾಗಿದ್ದ ಕಾಶೀನಾಥ ಗವಾಯಿಗಳು ದಲಿತರ ಬದುಕಿನ ರೀತಿ, ನೀತಿ, ನಡೆ, ನುಡಿ ಆಚಾರ ವಿಚಾರಗಳನ್ನು ತಮ್ಮ ಹಾಡುಗಳಲ್ಲಿ ಚಿತ್ರಿಸಿದ್ದಾರೆ. ಹೊಲೆ, ಮಾದಿಗರ ಸ್ವಾಭಿಮಾನರಹಿತ ಹೀನ ಬದುಕು ಹಾಗೂ ಅವರ ಅಜ್ಞಾನ ಕಂಡು ಮರುಗಿದ್ದಾರೆ. ಸ್ವಾತಂತ್ರ್ಯಪೂರ್ವದಲ್ಲಿ ಹಾಗೂ ನಂತರದ ೨-೩ ದಶಕಗಳಲ್ಲಿ ದೇವರು ಹಾಗೂ ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಕಾರ್ಯಾಚರಣೆಯ ವಿವರ ಗವಾಯಿಗಳ ಹಾಡುಗಳಲ್ಲಿ ಯಥೇಚ್ಛವಾಗಿ ಬಂದಿದೆ.

ಲಕ್ಷ್ಮೀ, ಲಕ್ಕವ್ವ, ಎಲ್ಲವ್ವ, ಸಮವ, ಮೈಸವ, ಮಾಪೂರಿ
ಕೋಣ ಕುರಿದು, ರಕ್ತ ಹರಿದು, ವಾಸನೆ ಎಂಥದರಿ
ಹದ್ದು, ಕಾಗಿ, ನಾಯಿಯ ಕುಸ್ತಿ, ಎಲುಬಿನ ಸುತ್ತಾರಿ
ಹೊಲೆ-ಮಾದರು ತೆಲಿ ಪಾಲಕ ಹೊಡೆದಾಡಿ ಪೇಸಿಯ ತಿರುಗಿರಿ

ಕಾರ್ಯಾಚರಣೆಯ ಭೀಭತ್ಸ ದೃಶ್ಯ ಇಲ್ಲಿದೆ. ಬೇರೆ ಬೇರೆ ದೇವರುಗಳ ಹೆಸರಿನಲ್ಲಿ ಕೋಣ-ಕುರಿಗಳನ್ನು ಬಲಿ ಕೊಟ್ಟು ರಕ್ತ ಹರಿಸಲಾಗಿದೆ. ಅಸಹ್ಯ ವಾಸನೆ ಎದ್ದಿದೆ. ಬಲಿಕೊಟ್ಟ ಪ್ರಾಣಿಗಳ ಮಾಂಸಕ್ಕಾಗಿ ಹದ್ದು, ಕಾಗೆ, ನಾಯಿಗಳು ಕಚ್ಚಾಡುತ್ತಿವೆ. ಅವುಗಳೊಂದಿಗೆ ಹೊಲೆ-ಮಾದಿಗರ ಕಚ್ಚಾಟದ ಚಿತ್ರಣವೂ ಇದೆ. ಹದ್ದು-ಕಾಗೆ ನಾಯಿಗಳಂತಹ ಬದುಕು ದಲಿತರದಾಗಿದೆ. ಕಾರ್ಯಾಚರಣೆಯಲ್ಲಿ ಬಲಿಕೊಟ್ಟ ಕೋಣ ಕುರಿಗಳ ತಲೆಯನ್ನು ಸಂಬಂಧಪಟ್ಟ ದೇವರ ಮುಂದೆ ಇಡುವುದು ಒಂದು ಪದ್ಧತಿ. ಹೀಗೆ ಇಟ್ಟ ತಲೆಯನ್ನು ಹಂಚಿಕೊಳ್ಳುವಾಗ ಭಿನ್ನಾಭಿಪ್ರಾಯ ತಲೆದೋರಿ ದಲಿತ-ದಲಿತರಲ್ಲಿಯೇ ಹೊಡೆದಾಟ ನಡೆದು ಕೋರ್ಟು, ಕಛೇರಿ ಹತ್ತಿದ ಉದಾಹರಣೆಗಳು ಇಲ್ಲದಿಲ್ಲ. ಅಂತೆಯೇ 'ಹೊಲೆ ಮಾದಿಗರು ತೆಲಿಪಾಲಕ ಹೊಡೆದಾಡಿ ಪೇಸಿಯ ತಿರುಗಿರಿ' ಎಂಬ ಮಾತು ಬಂದಿದೆ. ಕಾರ್ಯಾಚರಣೆಯ ಯಥಾಸ್ಥಿತಿಯ ಚಿತ್ರಣ ಇಲ್ಲಿದೆ.

ದೇವತೆಗಳ ಮುಂದೆ ನಡೆಯುವ ಇಂತಹ ಕಾರ್ಯಗಳನ್ನು ಊರಿನ ಎಲ್ಲ ಜನರು ಸೇರಿ ಆಚರಣೆ ಮಾಡುತ್ತಾರೆ. ಆದರೆ ಅದರಲ್ಲಿ ಹೆಚ್ಚು ಸಕ್ರಿಯವಾಗುವವರು ದಲಿತರೇ. ಅಲ್ಲಿ ಕೂಗಾಡುವವರು, ಬಾರಿಸುವವರು, ಕುಣಿಯುವವರು, ಬಲಿ ಕೋಣವನ್ನು ಕಡಿಯುವವರು-ಎಲ್ಲರೂ ದಲಿತರು. ಮೇಲ್ಜಾತಿಯವರು ಏನಿದ್ದರೂ ನಿಂತು ನೋಡಿ ಆನಂದಿಸುವ ಮನೋರಂಜನಾ ಪ್ರೇಕ್ಷಕರು.

ಹೊಡಿವ ಕೋಣಿಗಿ ಅಡಿ ಅಡಿ ತಿರುಗಿ ಹಿಡಕೊಂಡು ತಂದೇವರಿ
ಮನೆ ಕೆಲಸ ಬಿಟ್ಟು ಮೂರು ತಿಂಗಳ ದುಡದೇವರಿ
ಹಂದ್ರನ ಅನ್ನ ಕುಂಬಾ ಕಿಚಡಿ ಟೆಂಗಿನ ಸಲುವಾಗಿರಿ

ಇಲ್ಲಿ ಅಲ್ಪ ಆಶೆಗಾಗಿ ದಲಿತರು ಕಾರ್ಯದಲ್ಲಿ ಸಕ್ರಿಯವಾಗುತ್ತಿದ್ದುದನ್ನು ಹೇಳಲಾಗಿದೆ. ಅಲ್ಲದೆ ದಲಿತರಲ್ಲಿ ಪೋತ್ಯಾ, ಭೂತ್ಯಾ, ಭೂತಾಳ್ಯಾ ಇತ್ಯಾದಿ ಅಡ್ಡ ಹೆಸರಿನ ಮನೆತನಗಳು ವಿಶೇಷವಾಗಿ ಕಾರ್ಯಾಚರಣೆಗೆಂದೇ ಇರುತ್ತಿದ್ದವು. ಕಾರ್ಯದಲ್ಲಿ ಅವರು ಬಹಳ ಅವಮಾನಕಾರವಾದ ಕೆಲಸವನ್ನು ನಿರ್ವಹಿಸುತ್ತಿದ್ದರು. ಪೋತ್ಯಾ ತನ್ನ ಬಾಯಿಯಿಂದ

ಜೀವಂತ ಕುರಿ-ಮರಿಯನ್ನು ಹರಿದು ಸುಲಿಯಬೇಕಾಗುತ್ತಿತ್ತು. ಭೂತಾಳ್ಯಾನ ಮೈಯೆಲ್ಲ ಮಾಂಸ ಸುತ್ತಿ ಊರ ಸುತ್ತಲು ತಿರುಗಿಸುತ್ತಿದ್ದರು. 'ಪೋತ್ಯಾ, ಭೂತ್ಯಾರ ಕೂದಲು ಜಡಿಗಳು ಗಾರ ಮೇಳೇಗೇನ ಗತಿರಿ' ಎಂದು ಪೋತ್ಯಾ ಬಿಡುವುದನ್ನು ಕುರಿತು ಗವಾಯಿಗಳು ವ್ಯಂಗ್ಯವಾಡಿದ್ದಾರೆ.

> ಮದುವಿ ಮುಂಜಿ ಸೋದಾನ ಕಾರ್ಯಕ
> ಕಟಕಿಯ ಒಡದೀರಿ
> ತಿಂಗಳ ದುಡಿದು ತಂಗಳ ತಿಂದು
> ಕೊಟ್ಟದಷ್ಟು ತಂದೀರಿ

ಎಂದು ಹೇಳುವ ಕಾಶೀನಾಥ ಗವಾಯಿಗಳು ದಲಿತರ ಹೀನ, ದಾರುಣ ಬದುಕಿನ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ.

> ಅಣ್ಣ ಪೋತ್ಯಾ ತಮ್ಮ ಡಪ್ಪಗಾರ ತಂಗಿ ಜೋಗಣಿರಿ
> ನಿಮ್ಮ ಮನಿ ಹೆಣ್ಣ ಮಕ್ಕಳಿಗಿ ನೀವೇ ನಕರಿ ಆಡಿದಿರಿ
> ಗೌಡ, ಕುಲಕರ್ಣಿ ಗುಡಿಮ್ಯಾಲ ಕುಂತು ನಕ್ಕ ನೋಡತಾರರಿ

ಒಂದೇ ಮನೆಯ ಸದಸ್ಯರು ಪೋತ್ಯಾ, ಡಪ್ಪಗಾರ, ಜೋಗಣಿಯರಾಗಿರುತ್ತಾರೆ. ಸಾರ್ವಜನಿಕವಾಗಿ ಅವರು ದೇವತೆಗಳ ಮುಂದೆ ಕುಣಿಯುತ್ತಾರೆ. ಗೌಡ, ಕುಲಕರ್ಣಿಯಂತಹ ಬಲಿಷ್ಠ ಜನವರ್ಗ ಅವರ ಕುಣಿತದಿಂದ ಮನೋರಂಜನೆಯನ್ನು ಪಡೆಯುತ್ತಾರೆ. ದಲಿತರಿಗೆ ತಮ್ಮ ಶೋಷಣೆಯ ಅರಿವೇ ತಮಗಿರುವುದಿಲ್ಲ.

ದೇವರು ಮತ್ತು ಧರ್ಮದ ಹೆಸರಿನಲ್ಲಿ ಬಡ ಜನರ, ಅದರಲ್ಲೂ ದಲಿತರ ಶೋಷಣೆ ನಿರಂತರವಾಗಿ ನಡೆದಿದೆ. ಅಕ್ಷರಜ್ಞಾನವಿಲ್ಲದ ಮುಗ್ಧ ಹಾಗೂ ಮೂಢ ದಲಿತರು ಕಾಲಾನುಕಾಲದಿಂದಲೂ ಅಜ್ಞಾನದಿಂದ ದೇವರಿಗಾಗಿ ತೀರ್ಥಯಾತ್ರೆಯೆಂದು ಅಲೆದುದುಂಟು; ಹರಕೆ ತೀರಿಸಲು ಹಣ ವ್ಯಯಿಸಿ ಸಾಲದ ಕೂಪಕ್ಕೆ ಬಿದ್ದುದುಂಟು. ದಲಿತರು ದೂರದ ಪಂಡರಾಪುರ, ತುಳಜಾಪುರಕ್ಕೂ ಹೋಗುತ್ತಾರೆ; ತಮ್ಮ ಓಣಿಗಳಲ್ಲಿಯೇ ಇರುವ ಮರಗೆಮ್ಮಾ, ದುರಗಮ್ಮಾ ಮುಂತಾದ ದೇವರಿಗೂ ನಡೆದುಕೊಳ್ಳುತ್ತಾರೆ. ಅವರ ಈ ಅಜ್ಞಾನವನ್ನು ಕಾಶೀನಾಥ ಗವಾಯಿಗಳು ಹೀಗೆ ಹೇಳಿದ್ದಾರೆ;

> ಮರಗವ್ವ, ದುರಗವ್ವ, ಮಾಪವ್ವ, ಎಲ್ಲವ್ವ ಸಮವ್ವ ಪೋಚವ್ವರಿ
> ಒಡವಿ ಒತ್ತಿ ಇಟ್ಟು, ಸಾಲ ತಂದು ದೇವರಿಗೆ ಮಾಡಿರಿ
> ಮೈಲಾರ ಲಿಂಗನ ವಗ್ಗ್ಯಾರಾಗಿ ಕೊಟಂಬಿ ತುಂಬಿರಿ
> ಜಾಣಿ-ಪೋತ್ಯಾ, ಭೂತ್ಯಾ-ಭೂತಾಳೇರಾಗಿ ಕಾರ್ಯ ಮಾಡಿರಿ

ಹಿಂದೂ ದೇವತೆಗಳಿಗಷ್ಟೇ ಅಲ್ಲ, ದಲಿತರು ಮುಸ್ಲಿಂ ದೇವರುಗಳಿಗೂ ನಡೆದು ಕೊಳ್ಳುತ್ತಾರೆ. ಮೋಹರಂ ಹಬ್ಬಗಳಲ್ಲಿ ಮುಸ್ಲಿಂ ದೇವರುಗಳ ಮುಂದೆ ಅಲಾಯಿ ಕುಣಿಯುವವರು ಅಧಿಕ ಸಂಖ್ಯೆಯಲ್ಲಿ ದಲಿತರೇ ಇರುತ್ತಾರೆ. ದಲಿತ ಜನಾಂಗದಲ್ಲಿ ಇಸ್ಮಾಲ, ಮಸ್ತಾನ ಎಂಬಿತ್ಯಾದಿ ಮುಸ್ಲಿಂ ಹೆಸರಿರುವುದನ್ನು ಕಾಣಬಹುದಾಗಿದೆ. ಅದನ್ನು ಗವಾಯಿಗಳು ತಮ್ಮ ಹಾಡುಗಳಲ್ಲಿ ಪ್ರಸ್ತಾಪಿಸಿದ್ದಾರೆ.

ಇಸ್ಮಾಲ, ಮಸ್ತಾನ, ಲಾಲ, ಮೌಲ, ಸೈಬಣ್ಣ ಗೈಬಣ್ಣರೀ
ಹಾಜಿ, ಖಾಜಿ, ಹುಸೇನಿ, ಹಸೇನಿ, ರಾಣಾ ಪೀರಾಣರೀ
ಸರಕಾರ ನಿಮಗೆ ಹೊಲೆ-ಮಾದರೆಂದು ಹ್ಯಾಂಗ ತಿಳಿಬೇಕರಿ
ಮಸ್ತಾನ ತಂದೆ ಮೌಲ ಆದ ಮೇಲೆ ಮುಸಲ್ಮಾನ ಅಲ್ಲೆನರಿ

ಪ್ರಾಯಶಃ ದಲಿತರನ್ನು ಬಿಟ್ಟರೆ, ಇತರ ಅನ್ಯ ಜಾತಿಯವರು ಯಾರೂ ಮುಸ್ಲಿಂ ಹೆಸರುಗಳನ್ನು ಇಟ್ಟುಕೊಂಡಂತಿಲ್ಲ. ಜನಗಣತಿಯಲ್ಲಿ, ಸರಕಾರಿ ದಾಖಲೆಗಳಲ್ಲಿ ದಲಿತರು ಹೀಗೆ ಅನ್ಯ ಧರ್ಮೀಯರ ಹೆಸರು ಬರೆಯಿಸಿಕೊಳ್ಳುವುದರಿಂದ ಅವರ ಅಸ್ತಿತ್ವವನ್ನು ಗುರುತಿಸುವುದು ಹೇಗೆಂಬ ಚಿಂತೆ ಗವಾಯಿಗಳಿಗೆ ಕಾಡಿದಂತಿದೆ. ಅಂತೆಯೇ 'ಸರಕಾರ ನಿಮಗೆ ಹೊಲೆ ಮಾದಿಗರೆಂದು ಹ್ಯಾಂಗ ತಿಳಿಬೇಕರಿ' ಎಂದು ಕೇಳಿದ್ದಾರೆ.

ದೇವತೆಗಳ ಕಾರ್ಯ ಆಚರಣೆಗಳಲ್ಲಿ ದಲಿತರು ಪಾಲುಗೊಳ್ಳುವಿಕೆಯನ್ನು, ಹಾಗೂ ಕಾರ್ಯದ ನೆಪದಲ್ಲಿ ಅವರು ವರ್ತಿಸುವ ರೀತಿಯನ್ನು, ಅಲ್ಲಿ ಅವರು ಅರಿವಿಲ್ಲದಂತೆ ಶೋಷಣೆಗೆ ಗುರಿಯಾಗುತ್ತಿರುವ ಸಂಗತಿಯನ್ನು ಗವಾಯಿಗಳು ತಮ್ಮ ಕವಿತೆಗಳಲ್ಲಿ ವಿವರವಾಗಿ ಚಿತ್ರಿಸಿದ್ದಾರೆ. ಬಹುಶಃ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಇವರಷ್ಟು ವಿವರವಾಗಿ ಮತ್ತು ನಿಖರವಾಗಿ ಬರೆದ ಮತ್ತೊಬ್ಬ ಕವಿಯಿಲ್ಲ.

ದಲಿತರು ಮೇಲ್ಜಾತಿಯವರ ಮನೆಯ ಹೆಂಡಿ-ಕಸ ತೆಗೆಯುವುದು, ಅವರ ಹೊಲಗಳಲ್ಲಿ ಗಂಡಸರು, ಮಕ್ಕಳು ದುಡಿಯುತ್ತಾ ಸ್ವಾಭಿಮಾನ ರಹಿತ ಬದುಕನ್ನು ಬದುಕುತ್ತಿರುವ ದಲಿತರ ಚಿತ್ರಣ ಗವಾಯಿಗಳ ಹಾಡುಗಳಲ್ಲಿ ಕಾಣಬಹುದಾಗಿದೆ. ಬದಲಾವಣೆಗೆ ಒಗ್ಗದ, ಸಂವೇದನೆ ಇಲ್ಲದ ದಲಿತ ಮನಸ್ಸುಗಳನ್ನು ಕಂಡು ಮರುಗಿದ್ದಾರೆ. 'ಬಹಳ ಸಂಕಷ್ಟಾಗಿದೆ ನಮ್ಮ ಸಂಸಾರ'ವೆಂದು ದಲಿತರ ಕಷ್ಟದ ಬದುಕನ್ನು ಕಂಡು ಗವಾಯಿಗಳು ದುಃಖಿಸಿದ್ದಾರೆ. ಹೆಂಡಿ ಹಿಪ್ಪಿ ತೆಗಿಬ್ಯಾಡರಿ, ಅಕ್ಕ ತಂಗೆರೇ, ದನಕರು ಕಾಯಬೇಡಿರಿ ಅಣ್ಣ ತಮ್ಮರೆ.' ಎಂದು ದಲಿತ ಸೋದರ ಸೋದರಿಯರಿಗೆ ಕರೆ ನೀಡಿದ್ದಾರೆ. 'ಅಡವಿಯೊಳಗ ಒಂದು ಎಕ್ಕರ ಭೂಮಿಯಿಲ್ಲ, ಊರೊಳಗ ಮನಿ ನಮಗಿಲ್ಲ' ಎಂಬ ಅವರ ಹಾಡಿನ ಸಾಲು ದಲಿತರ ಅನಾಥ ಸ್ಥಿತಿಯನ್ನು ಹೇಳುತ್ತದೆ.

"ದಲಿತರ ದುರಂತಕ್ಕೆ ಕಾಣರವಾಗಿರುವ ವ್ಯವಸ್ಥೆಯ ಬಗ್ಗೆ ಸಿಟ್ಟು, ಅದನ್ನು ಧ್ವಂಸ ಮಾಡಿಬಿಡಬೇಕೆಂಬ ಅದಮ್ಯ ಉತ್ಸಾಹ, ತನ್ನವರ ಅಜ್ಞಾನ ಮತ್ತು ಹೆಡ್ಡತನಕ್ಕಾಗಿ ನೋವು, ಬೇಸರ ದಲಿತರನ್ನು ಸಂಘರ್ಷಕ್ಕೆ ಪ್ರಚೋದಿಸುವ ಬಯಕೆ, ಕ್ರಾಂತಿಯ ಬಗ್ಗೆ ಅಚಲವಾದ ನಂಬಿಕೆ ಇವೇ ಮುಂತಾದವು ಇವರ ಕಾವ್ಯದ ಪ್ರಧಾನ ಪ್ರೇರಣೆ ಮತ್ತು ವಸ್ತು" (ಬಿಳುಮಲೆ-೧೯೯೨-ಪುಟ-೪೪) ಎಂದು ದಲಿತ ಕವಿ ಸಿದ್ಧಲಿಂಗಯ್ಯನವರ ಕಾವ್ಯದ ಬಗ್ಗೆ ವ್ಯಕ್ತವಾದ ಅಭಿಪ್ರಾಯ, ಕಾಶೀನಾಥ ಗವಾಯಿಗಳ ತತ್ವಪದಗಳಿಗೂ ಅನ್ವಯವಾಗುತ್ತದೆ.

## ಬುದ್ಧ-ಅಂಬೇಡ್ಕರ

ಬುದ್ಧ-ಅಂಬೇಡ್ಕರರನ್ನು ಕಾಶೀನಾಥ ಗವಾಯಿಗಳು ಆದರ್ಶ ವ್ಯಕ್ತಿಗಳಾಗಿ ಕಂಡಿದ್ದಾರೆ.

ಅವರ ತತ್ವ ಸಿದ್ಧಾಂತಗಳನ್ನು ಮೆಚ್ಚಿಕೊಂಡು ಹಲವಾರು ಹಾಡುಗಳನ್ನು ರಚಿಸಿದ್ದಾರೆ. ಗವಾಯಿಗಳು ರಚಿಸಿರುವ ಹಾಡುಗಳಲ್ಲಿ ಬುದ್ಧ-ಅಂಬೇಡ್ಕರ ವೈಯಕ್ತಿಕ ಜೀವನದ ವಿವರ ಹಾಗೂ ಅವರ ಸಾಧನೆ, ಬೋಧನೆಗಳನ್ನು ಗವಾಯಿಗಳು ತಮ್ಮ ಹಾಡುಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಜನಸಾಮಾನ್ಯರಿಗೆ ಬುದ್ಧ ಹಾಗೂ ಅಂಬೇಡ್ಕರರ ಹೆಸರು ಮತ್ತು ವಿಚಾರಗಳು ಅಷ್ಟಾಗಿ ಪರಿಚಯವಿಲ್ಲದ ೫೦-೬೦ರ ದಶಕಗಳಲ್ಲಿ ಅವರ ಜೀವನ ಮತ್ತು ಸಂದೇಶಗಳನ್ನು ದಲಿತರ ಮನೆ ಮನೆಗೆ ಮುಟ್ಟಿಸಿದ ಮೊದಲ ಕವಿ ಎಂಬ ಗೌರವಕ್ಕೆ ಗವಾಯಿಗಳು ಪಾತ್ರರಾಗಿದ್ದಾರೆ.

> ಹದಿನಾಲ್ಕು ಏಪ್ರಿಲಕಾ ಹುಟ್ಟಿ ಬಂದಿ ಲೋಕಾ
> ಇಡೀ ಬಡಜನಕ ನೀ ಆದಿ ದಾಯಕ
> ನಿಮ್ಮ ತಂದೆ ರಾಮಜಿ ಸರಕಾರಿ ಸೈನಿಕ
> ಬಡತನ ಬಹಳ ಇತ್ತೋ ದುಃಖ
> ತಾಯಿ ಭೀಮಾರತಿ...

ಅಂಬೇಡ್ಕರರ ವೈಯಕ್ತಿಕ ಬದುಕಿನ ವಿವರಗಳನ್ನು ತಿಳಿಸುವ ಈ ಪದ್ಯದಲ್ಲಿ, ಅಂಬೇಡ್ಕರ ಓದಿದ ಕಾಲೇಜು, ಬ್ಯಾರಿಸ್ಟರಾದದ್ದು, ಹಿಂದೂಕೋಡ್ ಬಿಲ್ ಬರೆದುದರ ಪ್ರಸ್ತಾಪ ಬರುತ್ತದೆ.

ಅಂಬೇಡ್ಕರರ ಬಾಲ್ಯಕಾಲದ ಹಲವು ಘಟನೆಗಳನ್ನು ಅವರು ಚಿತ್ರಿಸಿದ್ದಾರೆ. ಅಸ್ಪೃಶ್ಯನೆಂಬ ಕಾರಣಕ್ಕಾಗಿ ಬಾಲಕ ಅಂಬೇಡ್ಕರರಿಗೆ ಕೂದಲು ಕಟಿಂಗ್ ಮಾಡಲು ನಿರಾಕರಿಸಿದ ಘಟನೆಯನ್ನು ಗವಾಯಿಗಳು ತಮ್ಮದೇ ಶೈಲಿಯಲ್ಲಿ ಹೇಳಿದ್ದಾರೆ.

> ಕತ್ತೆ, ಕುದುರೆ ಎತ್ತಿನ ಬಾಲ ಕೂದಲ ಕತ್ತರಿಸುವವರು
> ಬಾಲ್ಯದಲ್ಲಿ ಬಾಬಾ ಅಂಬೇಡ್ಕರಗ ಜಾತಿ ಗೋತ್ರ ಕೇಳಿದರೊ
> ಕಟಿಂಗ್ ಮಾಡಿಲ್ಲ, ಹೊರ ಹಾಕಿದಾಗ ಬಂದು ನೊಂದಿದರೊ
> ಮೀರಾ, ತುಳಸಿಬಾಯಿ ಸೋದರತ್ತೇರು ಬಾಬಾನ ಕಟಿಂಗ್ ಮಾಡಿದರು

ಅಲ್ಲದೆ ಬಾಲ್ಯದಲ್ಲಿ ಬಾಬಾ ಸಾಹೇಬರು ಸಾರ್ವಜನಿಕ ಸ್ಥಳದಲ್ಲಿಯ ನೀರು ಕುಡಿಯಲು ಹೋಗಿ ಅವಮಾನಕ್ಕೊಳಗಾಗಿ ನೊಂದದ್ದು, ಅಂಬೇಡ್ಕರರೆಂಬ ಗುರುಗಳು ಅವರಿಗೆ ಆ ಹೆಸರನಿಟ್ಟದ್ದು, ವಿದೇಶಿ ವಿದ್ಯಾಭ್ಯಾಸ ಮುಗಿಸಿ ಭಾರತಕ್ಕೆ ಬಂದ ಮೇಲೆ ಬಡೋದಾ ಮಹಾರಾಜರ ಸಂಸ್ಥಾನದಲ್ಲಿ ಅಧಿಕಾರಿಯಾಗಿ ಜಾತಿ ಅವಮಾನಕ್ಕೆ ಗುರಿಯಾದದ್ದು, ಈ ಎಲ್ಲ ವಿವರಗಳು ಗವಾಯಿಗಳ ಹಾಡುಗಳಲ್ಲಿ ಸಿಗುತ್ತವೆ.

ಅಂಬೇಡ್ಕರರು ಕೈಗೊಂಡ ಹೋರಾಟಗಳನ್ನು ಕಾಶೀನಾಥ ಗವಾಯಿಗಳು ತಮ್ಮ ಹಾಡುಗಳಲ್ಲಿ ದಾಖಲಿಸಿದ್ದಾರೆ.

> ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರವೆಂಬ ಕ್ಷುದ್ರವ ಕಳೆದಿ
> ಸರ್ವರು ಸರಿಸಮನಂದಿ, ಹಿಂದುಕೋಡ್ ಬಿಲ್ ತಂದಿ....
> ಶೂದ್ರ ಇದ್ದ ಮಹಿಳೆಯರಿಗೆ ಪ್ರತಿಯೊಂದರಲ್ಲಿ ಸ್ಥಾನವ ಮಾಡಿದಿ
> ಮಹಾಡ ಸತ್ಯಾಗ್ರಹ ಮುಗಿಸಿ, ಚೌಡರ ಕೆರೆ ನೀರ ಕುಡಿಸಿದಿ

ನಾಸಿಕ ಸತ್ಯಾಗ್ರಹ ಮಾಡಿ, ನಾ ಎಂಬುವರ ನಾಶವ ಮಾಡಿದಿ
ಸತ್ಯಾಗ್ರಹದೋಳು ಜಯಿಸಿ, ಸತ್ತ ಜನಕ ಸಂಜೀವ ತಂದಿ
ಕಾಳ ರಾಮ ಮಂದಿರ ತೆರೆದಿ, ಗುಡಿ ಗೋಪುರ ಭೇದ್ಯಾಕಂದಿ

ಹೀಗೆ ಅಂಬೇಡ್ಕರರು ಕೈಗೊಂಡ ವಿವಿಧ ಹೋರಾಟಗಳ ಪಟ್ಟಿ ನೀಡಿದಲ್ಲದೆ, ಸ್ತ್ರೀಯರಿಗೆ ಮಾಡಿಕೊಟ್ಟ ಸವಲತ್ತುಗಳನ್ನು ತಮ್ಮ ಹಾಡಿನಲ್ಲಿ ತಿಳಿಸಿ 'ಇಂದಿರಾ ಗಾಂಧಿ ರಾಜ್ಯಾಳಿದು ನಿನ್ನ ಪುಣ್ಯದಿ' ಎಂದಿದ್ದಾರೆ.

ಗವಾಯಿಗಳು ಬುದ್ಧ-ಅಂಬೇಡ್ಕರರನ್ನು ಭಕ್ತಿಭಾವದಿಂದ ಕಂಡು ಕೆಲವು ಸ್ತುತಿಗೀತೆಗಳನ್ನು ಬರೆದಿದ್ದಾರೆ. ಗವಾಯಿಗಳು ಮೊಟ್ಟ ಮೊದಲು ಬರೆದುದು ಎಂದು ಹೇಳಲಾದ ಕವಿತೆಯಲ್ಲಿಯೇ ಬುದ್ಧ-ಅಂಬೇಡ್ಕರರ ಸ್ತುತಿ ಇರುವುದನ್ನು ಕಾಣುತ್ತೇವೆ.[೩]

ಭೀಮದೇವಿ ಪುತ್ರ, ಪರಮ ಪವಿತ್ರಾ
ಮಾಡುವೆ ಸ್ತೋತ್ರಾ, ತೆರಿಯೋ ಜ್ಞಾನ ನೇತ್ರಾ
ಹದಿನಾಲ್ಕು ವಿದ್ಯಾಕ, ನೀ ಆದಿ ದಾಯಕ
ಆದಿ ಬೌದ್ಧ ಧರ್ಮಕ
ಪುನಃ ತಂದಿ ಹಿಂದೂಸ್ಥಾನಕ
ಜಯ ಭೀಮ ರಾಜ್ಯ ಮಾಡುವೆ ಪೂಜಾ

ಪ್ರಾರ್ಥನೆ ರೂಪದಲ್ಲಿರುವ ಈ ಪದ್ಯದಲ್ಲಿ ಅಂಬೇಡ್ಕರರು ಪ್ರಾಚೀನ ಬೌದ್ಧಧರ್ಮವನ್ನು ಮತ್ತೆ ಪುನರುಜ್ಜೀವನಗೊಳಿಸಲು ಮಾಡಿದ ಪ್ರಯತ್ನವನ್ನು ಹೇಳಲಾಗಿದೆ.

ಗವಾಯಿಗಳ ಇನ್ನೊಂದು ಪ್ರಾರ್ಥನೆ ಗೀತೆ ಬಹಳ ಜನಪ್ರಿಯವಾದುದು; ಜನಪರಿಚಿತವಾದುದು. ವಿದ್ಯಾವಂತ ದಲಿತರೆಲ್ಲರಿಗೂ ಬಾಯಿಪಾಠವಿರುವಂಥದ್ದು. ಅನೇಕ ವರ್ಷಗಳ ಹಿಂದೆ ಗವಾಯಿಗಳು ಈ ಹಾಡನ್ನು ರಚಿಸಿ, ಹಾಸ್ಟೆಲ್‌ಗಳಿಗೆ ಅಲೆದಾಡಿ, ಈ ಹಾಡನ್ನು ವಿದ್ಯಾರ್ಥಿಗಳಿಗೆ ಕಲಿಸಿಕೊಟ್ಟಿದ್ದಾರೆ. ಇಂದಿಗೂ ಹಾಸ್ಟೆಲ್‌ಗಳಲ್ಲಿ ಊಟಕ್ಕಿಂತ ಮುಂಚೆ ವಿದ್ಯಾರ್ಥಿಗಳು ಸಮೂಹಗಾನದಲ್ಲಿ ಈ ಹಾಡನ್ನು ಹೇಳಿಯೇ ಊಟ ಮಾಡುತ್ತಾರೆ. ಆ ಪ್ರಾರ್ಥನೆ ಗೀತೆಯ ಕೆಲವು ಸಾಲುಗಳು;

ಪ್ರಾರ್ಥನೆ ಮಾಡುವೆ ಪಾವನ ಮಾಡೋ
ಬುದ್ಧಾಗಿ ಭಾರತವಾ, ಜಯ, ಜಯ ಭೀಮ ನಮೋ ದೇವಾ
ಬಡವರಿಗೆ ಕರುಣದಿ ಕಾಪಾಡೋ
ಸದಾಕಾಲ ನಮ್ಮ ಸಂಕಟ ನೋಡೋ
ಮತ್ತೆ ಹುಟ್ಟಿ ಬಂದು ಸಹಾಯವ ನೀಡೋ
ಹೈರಾಣ ವನವಾಸ ಕಳೆ ನಮ್ಮ ಕೇಡೋ
ನೀ ನಿಜದಾರ ಅಂಬೇಡ್ಕರ ನಿನ್ನ ಹೊರತ್ಯಾರಯ್ಯಾ
ಜಯ ಜಯ ಭೀಮ ನಮೋದೇವಾ
ಅಂಬೇಡಕರನೇ ಶಂಭೋ ಹರನೇ
ಅಂಬುಜಾಕ್ಕೆ ಭಾನು ನೀನೇ

---

೩. ಸಂದರ್ಶನದಲ್ಲಿ ಗವಾಯಿಗಳ ಗೆಳೆಯ ಮಾಣಿಕರಾವ್ ಜ್ಯೋತಿ ಹೇಳಿದ್ದು.

ಉದಯವಾಗಿಹ ರವಿ ಚಂದ್ರಮನೇ
ಇತರ ಕತ್ತಲೆ ಹರಿದವನೇ
ಕಡೆಗಿದ್ದ ಜನರಿಗೆ ಕೊಡೆ ಹಚ್ಚಿದವನೆ ಮೃತ್ಯುಗಳ ಸಂಜೀವಾ
ಜಯ ಜಯ ಭೀಮ ನಮೋ ದೇವಾ

ಇಲ್ಲಿ ಕವಿ ಅಂಬೇಡ್ಕರರನ್ನು ಭಾರತ ಜನತೆಯ ಕತ್ತಲನ್ನು ಕಳೆಯಲು ಬಂದ ರವಿ, ಚಂದ್ರ ಎಂದು ಕೊಂಡಾಡಿದ್ದಾರೆ. ಕವಿಗೆ ಹರ, ಗುರು, ಎಲ್ಲ ಅಂಬೇಡ್ಕರರೇ ಆಗಿದ್ದಾರೆ.

ಅಂಬೇಡ್ಕರರನ್ನು ಕುರಿತ ವಿಶಿಷ್ಟವಾದ ಜೋಗುಳ ಪದಗಳನ್ನು ಸಹ ಗವಾಯಿಗಳು ರಚಿಸಿದ್ದಾರೆ. 'ಜೋ ಜೋ ಎಂದು ಜೋಗುಳ ಪಾಡಿ ನಮ್ಮ ಬುದ್ಧ ಭೀಮ ದೇವರ ಪದ್ಯವು ಹಾಡಿ' ಎಂದು ಆರಂಭವಾಗುವ ಒಂದು ಜೋಗುಳ ಪದ್ಯ ಅಂಬೇಡ್ಕರರ ಜನನದ ಸಂದರ್ಭವನ್ನು ಹೇಳುತ್ತದೆ.

ಅಟ್ರಾಸೆ ಬ್ಯಾಣೌ ಚೌದಾ ಏಪ್ರೀಲಾ
ಎತ್ತಿ ಜನ್ಮ ಬಾಬಾ ಭೂಮಿಯ ಮ್ಯಾಲಾ
ಭಾರತ ಬಡ ಬಾಲೇರ ತೂಗಿರಿ ತೊಟ್ಟಿಲಾ
ಭಾರತ ಕತ್ತಲು ಹರಿದು ಬಿದ್ದೀತು ಬಿಸಲಾ, ಜೋ... ಜೋ...

ಈ ಹಾಡು ಲಯ ಹಾಗೂ ಪ್ರಾಸದ ದೃಷ್ಟಿಯಿಂದಲೂ ಗಮನ ಸೆಳೆಯುತ್ತದೆ.

ಇನ್ನೊಂದು ಹಾಡಿನಲ್ಲಿ ಕನಸಿನಲ್ಲಿ ಕಂಡ ಅಂಬೇಡ್ಕರರ ಚಿತ್ರಣ, ಅವರೊಂದಿಗೆ ಕನಸಿನಲ್ಲಿ ನಡೆದ ಮಾತುಕತೆಯ ಸನ್ನಿವೇಶ, ಗವಾಯಿಗಳು ಬಹಳ ಸೊಗಸಾಗಿ ಚಿತ್ರಿಸಿದ್ದಾರೆ. ಕನಸಿನಲ್ಲಿ ಕಂಡ ಬಾಬಾ ಸಾಹೇಬರ ಭೌತಿಕ ವರ್ಣನೆಯೊಂದಿಗೆ ಆರಂಭವಾಗುವ,

ಬೂಟು ಪ್ಯಾಂಟು ಶೂಟ ಕೋಟು ಹಾಕಿ ನೀಲದಾ
ಎರಡು ಪೆನ್ನು ಚೆಸ್ಮ ಟೈ ಕಟ್ಟಿ ಜರದಾ
ನೀಲಾ ಮೋಟಾರದೊಳು ಬಂದಿಳಿದ
ನೀಲಿ ಕೊಡೆಯನ್ನು ಬಡವರ ಮೇಲೆ ಹಿಡಿದ

ಹೀಗೆ ಬಂದ ಅಂಬೇಡ್ಕರರು ಬಡವರ ಗುಡಿಸಲಿನಲ್ಲಿ ಹರಕು ಕೌದಿಯ ಮೇಲೆ ಕುಳಿತು ಚಿಂತಾಕ್ರಾಂತರಾದ ಚಿತ್ರಣ ಮುಂದಿನ ಸಾಲುಗಳಲ್ಲಿದೆ.

ತಾನೇ ಬ್ಯಾಪಿ ಚೀಲ ಕೋರಿ ಹಾಸಿಕೊಂಡಾ
ಕಡಕ ಕೌದಿ ಮೇಲೆ ಬಂದು ಕುಳಿತಿದ
ಹೆಡಕ ಎತ್ತಿ ಹರಕ ಕೊಂಪಿ ನೋಡಿದ
ತನ್ನ ಕಪಾಳಕ್ಕೆ ಕೈ ಹಚ್ಚಿಕೊಂಡಿದ
ಮುಖ ಸಣ್ಣ ಮಾಡಿ ಖಿನ್ನಾದ

ಎಂದು ಹೇಳಿ,

ಓದುವ ಮಕ್ಕಳ ಎಣಿಸಿಕೊಂಡ
......................................
ಒಡಕ ಅಡಕೀಲ ಗಡಗಿ ಹಣಿಕೆ ನೋಡಿದ

ಹರಕ ಬಟ್ಟೆ ಕಂಡು ಹಳ ಹಳಿಸಿದ
ನೀವು ನನ್ನ ಕರುಳೆಂದು ಕೊರಳಿಗಿ ಹಾಕಿಕೊಂಡು
ಕಳಕಳಿಯಿಂದ ಕಣ್ಣೀರು ಸುರಿಸಿದಾ

ಎನ್ನುತ್ತಾರೆ. ಹೀಗೆ ಕನಸಿನಲ್ಲಿ ಕಂಡ ಅಂಬೇಡ್ಕರರ ಚಿತ್ರಣವನ್ನು ಹಾಗೂ ಅವರ ಕಾಳಜಿಯನ್ನು ಗವಾಯಿಗಳು ಬಹಳ ಸುಂದರವಾಗಿ ಕಟ್ಟಿಕೊಟ್ಟಿದ್ದಾರೆ. ತಮ್ಮ ಹಾಡುಗಳಲ್ಲಿ ಅಂಬೇಡ್ಕರರನ್ನು ದಲಿತರ ಪಿತಾ, ಭಾರತ ರತ್ನ, ಆತ್ಮದ ರಾಮ, ಭಾರತ ಜ್ಯೋತಿ, ಜ್ಞಾನ ರತ್ನ, ಮುಂತಾದ ವಿಶೇಷಣೆಗಳಿಂದ ಕರೆದು, ಅವರ ವ್ಯಕ್ತಿತ್ವವನ್ನು ವಿಂಧ್ಯ ಹಿಮಾಚಲಕ್ಕಿಂತಲೂ ಶ್ರೇಷ್ಠವೆಂದು ಕೊಂಡಾಡಿದ್ದಾರೆ.

ಬುದ್ಧ ಹಾಗೂ ಬುದ್ಧನ ವಿಚಾರಗಳಿಗೆ ಸಂಬಂಧಿಸಿದಂತೆಯೂ ಹಲವಾರು ಗೀತೆಗಳನ್ನು ಕಾಶೀನಾಥ ಗವಾಯಿಗಳು ರಚಿಸಿದ್ದಾರೆ. ಅವುಗಳಲ್ಲಿ ಬುದ್ಧನ ಶ್ರೇಷ್ಠ ತತ್ವಗಳನ್ನು ಎತ್ತಿ ಹೇಳಿದ್ದಾರೆ. ಬೌದ್ಧ ಧರ್ಮವನ್ನು ಸ್ವೀಕರಿಸಲು ದಲಿತರಿಗೆ ಕರೆಕೊಡುತ್ತಾರೆ. ಬುದ್ಧನ ಬದುಕಿಗೆ ಸಂಬಂಧಿಸಿದ ಕಪಿಲವಸ್ತು, ಬುದ್ಧಗಯಾ, ಸಾರನಾಥ, ರಾಂಚಿ ಮುಂತಾದ ಸ್ಥಳಗಳ ಉಲ್ಲೇಖವೂ ಅವರ ಹಾಡುಗಳಲ್ಲಿ ಬರುತ್ತದೆ. 'ಹೋಗಿರಿ ಹೋಗಿರಿ ಹೋಗಿರಿ ನಾಗಪೂರಕ್ಕೆ' ಎಂದು ಹಾಡಿ, ದೀಕ್ಷಾ ಭೂಮಿ ನಾಗಪೂರಕ್ಕೆ ಹೋಗಲು ತಿಳಿಸಿದ್ದಾರೆ.

ಸ್ವಾಮಿ ಸಿದ್ಧಾರ್ಥ ರಾಜೇಂದ್ರ ರಮಣ
ಬೋಧಿ ವೃಕ್ಷದಲ್ಲಿ ಆಗಿ ಜ್ಞಾನ
ಸತಿ ಪುತ್ರ ಬಿಟ್ಟ ಸಂಪನ್ನ, ಯಶೋಧರೆ ರಾಹುಲ ರತ್ನ

ಎಂದು ಬೋಧಿವೃಕ್ಷದ ಕೆಳಗೆ ಬುದ್ಧನಿಗೆ ಜ್ಞಾನ ಪ್ರಾಪ್ತವಾದುದನ್ನು ಹೇಳಿದ್ದಾರೆ. 'ಹಿಂದೂ ಧರ್ಮದೋಳು ಉಳಿದು, ಹಿಂದೆ ಬಿದ್ದೀರಿ ಬೌದ್ಧ ಧರ್ಮ ಸುಧಾರಣರಾಗಿ ವಿದ್ಯಾ ಕಲಿಯರಿ' ಎಂದು ಹೇಳಿ, ಹಿಂದೂ ಧರ್ಮದಲ್ಲಿನ ಮೌಢ್ಯ, ಶೋಷಣೆಯನ್ನು ವಿವರಿಸಿದ್ದಾರೆ. ಹಾಗೂ ಬೌದ್ಧ ಧರ್ಮದ ಸತ್ಯ, ಅಹಿಂಸೆ, ಮುಂತಾದ ಮೌಲ್ಯಗಳನ್ನು ಹಾಡಿನ ಮೂಲಕ ತಿಳಿ ಹೇಳಿ, 'ಬಾಬನ ತತ್ವಕ್ಕೆ ಒಪ್ಪಲಿಕ್ಕೆ ಬೇಕೋ ಒಂದಿನ ಭಾರತ ಬೌದ್ಧ ಆಗಲಿಕ್ಕೆ ಬೇಕೋ' ಎಂದು ಸಾರಿದ್ದಾರೆ. 'ಅಂಥ ಹಿಂದೂ ಧರ್ಮವ ಬಿಟ್ಟು ಬೌದ್ಧ ಧರ್ಮದೋಳು ನೀವು ಬರ್ತೀರಾ ಅಲ್ಲೇ ಇರುತ್ತೀರಾ?' ಎಂದು ಪ್ರಶ್ನಿಸಿ, ಅಜ್ಞಾನ, ಅಂಧಕಾರದಿಂದ ಕೂಡಿದ ಹಿಂದೂ ಧರ್ಮವನ್ನು ತ್ಯಜಿಸಿ, ಬೌದ್ಧ ಧರ್ಮವನ್ನು ಸ್ವೀಕರಿಸುವ ಅನಿವಾರ್ಯತೆಯನ್ನು ದಲಿತರಿಗೆ ಒತ್ತಿ ಹೇಳಿದ್ದಾರೆ.

ಕಾಶೀನಾಥ ಗವಾಯಿಗಳು ಬುದ್ಧ-ಅಂಬೇಡ್ಕರರನ್ನು ಮೆಚ್ಚಿಕೊಂಡಂತೆಯೇ ಬಸವಣ್ಣನವರನ್ನು ಮೆಚ್ಚಿಕೊಂಡಿದ್ದರು. ಬಸವಣ್ಣನವರ ಸಮಾನತೆ ಹಾಗೂ ನೈತಿಕ ಮೌಲ್ಯಗಳು ಅವರಿಗೆ ಬಹಳ ಹಿಡಿಸಿದವು.

ಬಾಗೇವಾಡಿಯಲ್ಲಿ ಬಸವ ಜನಿಸಿದ....
ಜಾತಿ ಗೋತ್ರ ಮುರಿದ, ನೀತಿ ಸನ್ಮಾರ್ಗ ತೋರಿದ
ಮೇಲು-ಕೀಳು ಕಳೆದ ಒಂದೇ ಮಾಡಿದ

ಎಂದು ಹೇಳಿ, ಬಸವಣ್ಣನವರ ಕಲ್ಯಾಣದಲ್ಲಿ ಕೈಗೊಂಡ ಕಾರ್ಯವನ್ನು ವಿವರಿಸಿದ್ದಾರೆ. ಗವಾಯಿಗಳು ಬಸವಣ್ಣನವರನ್ನು ಕುರಿತು ಹಾಡಿದ ದೀರ್ಘವಾದ ಆಶುಗೀತೆಗಳು ಇನ್ನೂ ದೊರೆಯಬೇಕಾಗಿದೆ.

**ವೈಚಾರಿಕತೆ**

ಪ್ರಖರವಾದ ವೈಚಾರಿಕ ಚಿಂತನೆಗಳಿಂದಾಗಿ ಕಾಶೀನಾಥ ಗವಾಯಿಗಳ ಕವಿತೆಗಳು ವಿಶೇಷ ಗಮನ ಸೆಳೆಯುತ್ತವೆ. ಅವರ ಕವಿತೆಗಳಿಗೆ ತೂಕ ಬಂದದ್ದು ಅವು ತಾಳುವ ವೈಚಾರಿಕ ನಿಲುವಿನಿಂದಾಗಿ. ಧರ್ಮ, ದೇವರು ಸಮಾಜ, ಹಾಗೂ ಪರಂಪರೆಯ ಮೌಲ್ಯಗಳ ಬಗ್ಗೆ ಗವಾಯಿಗಳು ತಮ್ಮ ಕವಿತೆಗಳಲ್ಲಿ ತರ್ಕಬದ್ಧ ವಿಚಾರವನ್ನು ಮಂಡಿಸಿದ್ದಾರೆ. ಹಲವಾರು ಸಿದ್ಧ ಮೌಲ್ಯಗಳನ್ನು ಪ್ರಶ್ನಿಸಿ, ಓದುಗರನ್ನು ಪ್ರಜ್ಞಾವಂತರನ್ನಾಗಿ ಮಾಡುವಲ್ಲಿ ಕವಿತೆಗಳು ಯಶಸ್ವಿಯಾಗಿವೆ. ಇವರ ಕವಿತೆಗಳ ಬಹುಮುಖ್ಯ ಅಂಶವೆಂದರೆ ಅವು ತಾಳುವ ಶ್ರೇಷ್ಠವಾದ ವೈಚಾರಿಕ ನಿಲುವು.

ಕಾಶೀನಾಥ ಗವಾಯಿಗಳು ನಾಸ್ತಿಕವಾದಿಗಳಾಗಿದ್ದರು. ದೈವ ಮತ್ತು ದೇವರನ್ನು ನಂಬುತ್ತಿರಲಿಲ್ಲ. ಹೀಗಾಗಿ ದೇವರು ಮತ್ತು ದೇವರಿಗೆ ಸಂಬಂಧಿಸಿದ ಕಥೆ, ಆಚರಣೆಗಳ ಬಗ್ಗೆ ತಮ್ಮ ಹಾಡುಗಳಲ್ಲಿ ಪ್ರಶ್ನಿಸಿದ್ದಾರೆ. 'ಎಲ್ಲರ ಹಣೆಬರಹ ಬರದಾನಂತೀರಿ ಬ್ರಹ್ಮಾ ಅದೇ ಬ್ರಹ್ಮಾನ ಹಣೆಬರಹ ಯಾರು ಬರದಾರ ಹೇಳೋ ತಮ್ಮಾ' ಎಂದು ಕೇಳಿ, ಸಂವಿಧಾನ ಬರೆಯುವುದರ ಮೂಲಕ ಇಡೀ ಭಾರತ ಜನರ ಹಣೆಬರಹ ಬರೆದವರು ಅಂಬೇಡ್ಕರರು ಎಂದು ಹೇಳಿದ್ದಾರೆ.

> ರುದ್ರಾವತಾರ ದೇವರಂತೀರಿ ಕೈಯಲ್ಲಿ ಹಿಡಿದ ತ್ರಿಶೂಲ
> ಎಷ್ಟೋ ಮಾನವ, ಪ್ರಾಣಿಗಳಿಗೆ ಕೊಲೆ ಮಾಡಿದನಲ್ಲಾ
> ಜೀವ ಹಿಂಸೆ ಮಾಡಿದವರು ದೇವರಾಗೊದಿಲ್ಲ
>
> ..................................................
>
> ರಘುಪತಿ ರಾಮನ ಕೈಯಲ್ಲಿ ಧನುಶ ಬಾಣ
> ಎಷ್ಟೋ ಜೀವ ಜಂತುಗಳಿಗೆ ಕೊಂದು ಹಾಕಿದ ಪ್ರಾಣ
> ಶಂಬೂಕ ಮಹರ್ಷಿಗೆ ಸಂಹರಿಸಿದನಾ
> ಹಿಂಸೆ ರಾಮಚಂದ್ರ....
>
> ..................................................
>
> ಕೃಷ್ಣ ಸುದರ್ಶನ ಚಕ್ರದಿ ಎಷ್ಟೋ ಹೊಡದಿ ಶಿರ
> ರೂಪವತಿ ನಾರೇರಿಗಿಟ್ಟಾ ಸಹಸ್ರಾರು ಗೋಪೇರ
> ಗೌಳಗಿತ್ತೇರ ಸೀರಿ ಕದ್ದು ಮಾಡಿದ ಗೋಚೇರಾ
> ಹರಿಹರಬ್ರಹ್ಮರು ಅಲ್ಲೋ ದೇವರಾ

ಇಲ್ಲಿ ಹೆಸರಿಸಿದ ದೇವರುಗಳು ಜನಸಾಮಾನ್ಯರಿಗಿಂತಲೂ ಕನಿಷ್ಠರಾಗಿ ವರ್ತಿಸಿದ್ದಾರೆ. ಕೊಲೆ ಮಾಡಿದ್ದಾರೆ. ಹಿಂಸೆಯನ್ನು ಪ್ರತಿಪಾದಿಸುವಂತೆ ಅನೇಕ ದೇವರುಗಳ ಕೈಯಲ್ಲಿ ಮಾರಕಾಸ್ತ್ರಗಳಿವೆ. ಸ್ತ್ರೀಲೋಲರಾಗಿ ಒಬ್ಬರು ಹೆಂಡತಿಯನ್ನು ಮತ್ತೊಬ್ಬ ಅಪಹರಿಸಿದ

ದೇವರೂ ಇದ್ದಾರೆ. ಈ ಎಲ್ಲ ದೇವರುಗಳು ಅರಿಷಡ್ ವರ್ಗಗಳಿಂದ ಕೂಡಿದ ತೀರ ಸಾಮಾನ್ಯ ಮಾನವರಂತೆ ವರ್ತಿಸಿರುವುದು ಗವಾಯಿಗಳಿಗೆ ಆಶ್ಚರ್ಯವಾಗಿ ಕಂಡಿದೆ. ಮನುಷ್ಯರಿಗೂ ದೇವರಿಗೂ ಸ್ವಲ್ಪವೂ ವ್ಯತ್ಯಾಸ ಬೇಡವೆ? ದೇವರುಗಳು ಕೊಲೆ ಮಾಡಬೇಕೆ? ಈ ಪ್ರಶ್ನೆಗಳು ಗವಾಯಿಗಳನ್ನು ಕಾಡಿವೆ. ಅಂತೆಯೇ 'ಜೀವ ಹಿಂಸೆ ಮಾಡುವವರು ದೇವರಾಗುವುದಿಲ್ಲ' ಎಂಬ ನಿಲುವು ತಾಳುತ್ತಾರೆ. ಇದು ಮೆಚ್ಚಲೇಬೇಕಾದ ಜೀವಪರ ನಿಲುವೂ ಕೂಡ ಆಗಿದೆ.

ಜಾತಿ ಭೇದವನ್ನು ವಿರೋಧಿಸಿ, ಸಮಾನತೆ, ಸೋದರತ್ವವನ್ನು ಪ್ರತಿಪಾದಿಸುವ ಕಾಶೀನಾಥ ಗವಾಯಿಗಳ ಕವಿತೆಗಳಿಗೆ ಗಟ್ಟಿಯಾದ ವೈಚಾರಿಕತೆ ಹಾಗೂ ವೈಜ್ಞಾನಿಕ ತಳಹದಿ ಇದೆ. 'ಮುಟಚಟನೊಳಗಾ ಹುಟ್ಟಿತೋ ಈ ಜಗಾ ಮುಟ್ಟಿ ಎಂಬುವರು ಹುಟ್ಟೀರಿ ಹ್ಯಾಂಗಾ' ಎಂದು ಜಾತಿವಾದಿಗಳಿಗೆ ಸವಾಲು ಹಾಕಿದ್ದಾರೆ. ಹುಟ್ಟು ಸಾವಿನ ಪ್ರಕ್ರಿಯೆಗಳು ಲೋಕದ ಜನರಿಗೆಲ್ಲ ಒಂದೇ ರೀತಿಯಾಗಿರುವಾಗ, ಕುಲ-ಗೋತ್ರ, ಮೇಲು-ಕೀಳು, ಎಂಬ ಭಾವ ಏಕೆ? ಎಂದು ಕೇಳಿದ್ದಾರೆ.

> ಮುಟ್ಟಾದ ಮೂರು ದಿನಕ, ಪಿಂಡ ಮೂಡಿ ಪಾಕ
> ಹೊಲೆಯ ಮಾರ್ಗದಿಂದಲೇ ಹುಟ್ಟಿತ್ತು ಲೋಕ

ಎಂಬ ಗವಾಯಿಗಳ ಈ ಕವಿತೆ 'ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ' ಎಂಬ ಬಸವಣ್ಣನವರ ವಚನವನ್ನು ನೆನಪಿಸುತ್ತದೆ, ಅಲ್ಲದೆ ಜಾತಿವಾದಿಗಳಿಗೆ ಆತ್ಮವಿಮರ್ಶೆ ಮಾಡಿಕೊಳ್ಳುವಂತೆ ಮಾಡುತ್ತದೆ. 'ಮುಟ್ಟಿ ತಟ್ಟಿ ಹೊಲೆಯಾ ಅಂದವ ಕತ್ತೆ ಜನ್ಮವಾ' ಎಂಬ ಅವರ ಕವಿತೆಯ ಸಾಲು ಜಾತಿವಾದಿಗಳಿಗೆ ಚಾಟಿ ಏಟಿನಂತಿದೆ.

ಮಾನವ ಕುಲವೊಂದೇ ಎಂದು ಹಾಡಿರುವ ಗವಾಯಿಗಳು ಆಯಾ ಜಾತಿಗಳ ಬಾಹ್ಯ ಆಚರಣೆಗಳನ್ನು ತಮ್ಮ ಹಾಡುಗಳಲ್ಲಿ ಪ್ರಸ್ತಾಪಿಸಿ ವ್ಯಂಗ್ಯವಾಡಿದ್ದಾರೆ. ಜನಿವಾರ ಹಾಕಿದವನು ಬ್ರಾಹ್ಮಣ, ಲಿಂಗ ಕಟ್ಟಿಕೊಂಡವನು ಲಿಂಗಾಯತ, ಸುಂತಿ ಮಾಡಿಸಿ ಕೊಂಡವನನ್ನು ಮುಸಲ್ಮಾನ ಎಂದು ಕರೆಯುವರು. ಆದರೆ ಅದು ಯಾವುದು ಇಲ್ಲದಾಗ ಏನೆಂದು ಕರೆಯಬೇಕು. ತಾಯಿಯ ಹೊಟ್ಟೆಯಿಂದ ಹುಟ್ಟಿ ಬರುವಾಗ ಇವೆಲ್ಲ ಎಲ್ಲಿದ್ದವು ಎಂದು ಪ್ರಶ್ನಿಸಿ, ಲಿಂಗ ಜನಿವಾರ ಕಟ್ಟಿಕೊಂಡ ಮಾತ್ರಕ್ಕೆ 'ಯಾರೂ ಶ್ರೇಷ್ಠರಾಗುವುದಿಲ್ಲ ವೆಂದಿದ್ದಾರೆ.

ದೇವರುಗಳ ಬಗ್ಗೆ ನಮ್ಮ ಜನರು ಕಟ್ಟಿದ ಕಥೆ, ಮಾಡಿದ ಕಲ್ಪನೆಗೆ ಮಿತಿಯೇ ಇಲ್ಲ. ಅಂತೆಯೇ ನಮ್ಮಲ್ಲಿ ಒಂದೆರಡು ದೇವರಿಲ್ಲ; ಸಾವಿರ ಅಥವಾ ಲಕ್ಷವೂ ಅಲ್ಲ; ಅವುಗಳ ಸಂಖ್ಯೆ ಕೋಟಿಗಟ್ಟಲೆ. ಅಂತೆಯೇ ಛತ್ತೀಸ್ ಕೋಟಿ (೩೬) ಎಂದು ರೌಂಡ ಫೀಗರ್ ಅಂಕಿ ಅಂಶ ದೇವರ ಬಗ್ಗೆ ಇಟ್ಟುಕೊಂಡಿದ್ದಾರೆ. ಬಹಳ ಆಶ್ಚರ್ಯದ ಸಂಗತಿಯೆಂದರೆ, ಸ್ವಾತಂತ್ರ್ಯ ಪೂರ್ವದ ನಮ್ಮ ದೇಶದ ಜನಸಂಖ್ಯೆಯೂ ಸಹ ನಮ್ಮ ದೇವತೆಗಳ ಸಂಖ್ಯೆಯಷ್ಟಿರಲಿಲ್ಲ. ಇಷ್ಟೊಂದು ದೇವತೆಗಳಿದ್ದರೂ ಯಾವ ದೇವರಾದರೂ ಬಡವರ, ದಲಿತರ ಕಷ್ಟ ದೂರ ಮಾಡಲು ಎಂದಾದರೂ ಪ್ರಯತ್ನಿಸಿವೆಯೆ? ಒಂದು ಹಾಡಿನಲ್ಲಿ ಕಾಶೀನಾಥ ಗವಾಯಿಗಳು ಈ ಪ್ರಶ್ನೆಯನ್ನು ಎತ್ತಿದ್ದಾರೆ,

ಹಿಂದೆ ಮೂವತ್ತಾರು ಕೋಟಿ ದೇವ ದೇವತರೋ
ನಿಮಗೆ ಉದ್ಧಾರ ಮಾಡ್ಯಾನ ಯಾವ ದೇವರೋ
ನೀವೇ ಮಚಕೂರಿ, ವಾಲೀಕಾರ ಅಗಸರೋ
ತಳವಾರ, ಹೊಲೆಯಾ ಮಾದಿಗರೋ
ಹಲಗ್ಯಾ ಸಿಂಗ್ಯಾ ದಾಜ್ಯಾರೊ, ಎಲ್ಲಕ ಮುಂದ ಬೇಕವರೋ
ಎಲ್ಲರು ಊಟ ಮಾಡಿದ ಮೇಲೆ ತಂಗಳ
ಎಂಜಲ ತಿಂಬುವರೋ

ಹೀಗೆ ಹೇಳುವ ಮೂಲಕ ದಲಿತರು ತಮ್ಮ ಉದ್ಧಾರವನ್ನು ತಾವೇ ಮಾಡಿಕೊಳ್ಳಬೇಕು; ದೇವರು ಮಾಡುವುದಿಲ್ಲವೆಂಬ ಸತ್ಯವನ್ನು ಗವಾಯಿಗಳು ಹೇಳಿದ್ದಾರೆ. ದೇವರ ಬಗೆಗಿರುವ ಅಜ್ಞಾನ, ಮೂಢ ನಂಬಿಕೆಗಳನ್ನು ಹೋಗಲಾಡಿಸಲು ಪ್ರಯತ್ನಿಸಿದ್ದಾರೆ.

ಕಾಶೀನಾಥ ಗವಾಯಿಗಳು ಕವಿತೆ ಬರೆಯುವಾಗಿನ ಆ ದಿನಗಳಲ್ಲಿ ಇನ್ನೂ ಜಾತಿ ಆಚರಣೆ ಕಠಿಣವಾಗಿತ್ತು. ಅಂತೆಯೇ ಅವರು ಅದನ್ನು ಅಷ್ಟೇ ಉಗ್ರವಾಗಿ ಖಂಡಿಸಿದ್ದಾರೆ. ಅವರ 'ಕಟ್ಟಿಹಾಕು ಕೆಟ್ಟಗುಣದ ನಾಯಿ' ಎಂದು ಆರಂಭವಾಗುವ ಒಂದು ತತ್ವಪದದಲ್ಲಿ ಮನುಷ್ಯನ ಗುಣಸ್ವಭಾವವನ್ನು ನಾಯಿಗೆ ಆರೋಪಿಸಿ ಹೇಳಿದ್ದಾರೆ.

ಕಟ್ಟಿ ಹಾಕೊ ಕೆಟ್ಟಗುಣದ ನಾಯಿ
ಕುಲಗೋತ್ರದ ಬಾಯಿ
....................................
ಬುದ್ಧಿ ತಿಳಿಯವಲ್ಲದು ಬುದ್ಧಿಗೇಡಿ ನಾಯಿ
ಜಾತಿ ಮಾಡುವದು ಕೋತಿಮಾರಿ ನಾಯಿ
ಮುಟ್ಟಿ ತಟ್ಟಿ ಎನ್ನುವುದು ಹುಚ್ಚೆದ್ದ ನಾಯಿ
ಭೇದ ಭಾವ ಮಾಡುವದು ಹಂಡಬಂಡ ನಾಯಿ
ಪಂಚಶೀಲ ಗವಾಯಿ ಚಂಚಲ ನಾಯಿ
ಕವಿ ಮಾಡಿ ಹಾಡಿದ್ದು ಖಳಗೇಡಿ ನಾಯಿ

ದೇವಾಲಯಗಳಲ್ಲಿಯ ಅಸ್ಪೃಶ್ಯತೆಯ ಆಚರಣೆಯ ಪ್ರಸ್ತಾಪ ಹಾಗೂ ಆ ಕುರಿತಾದ ತರ್ಕಬದ್ಧವಾದ ವಿಚಾರ ಮಂಡನೆ, ಗವಾಯಿಗಳ ಹಾಡುಗಳಲ್ಲಿದೆ; ಮೊನಚಾದ ವ್ಯಂಗ್ಯವೂ ಇದೆ. ಹಂದಿ ನಾಯಿಗಳನ್ನು ದೇವಾಲಯದೊಳಗೆ ಬಿಟ್ಟುಕೊಳ್ಳುವ, ಆದರೆ ದಲಿತರಿಗೆ ನಿರಾಕರಿಸುವ ಮೇಲ್ಜಾತಿಯವರ ವರ್ತನೆಯನ್ನು ಕಾಶೀನಾಥ ಗವಾಯಿಗಳು ತಮ್ಮ ಹಾಡುಗಳಲ್ಲಿ ವಿಡಂಬಿಸಿದ್ದಾರೆ.

ಬೆಕ್ಕು ನಾಯಿ ಬಕ್ಕಳ ಸಲುವಿರಿ
ಯಾವ ಕುಲದಾನು ತಂದೀರಿ, ಮಲಮೂತ್ರ ಅವು ತಿಂದವರಿ
ದೋಹರ ನಾಯಿ ದೇವರ ತಲಿಮ್ಯಾಲ ಕಾಲೆತ್ತಿ ಮೂತ್ರಮಾಡಿತ್ತರಿ
.....................................................
ಮುಟ್ಟಿ ಎಂಬುವರ ಅಡಗಿ ಮನಿಯಾಗರೀ
ಕಟಕರ ನಾಯಿ ಹೊಕ್ಕಿತರಿ, ಬೆಕ್ಕು ಮೋತಿ ಹಾಕಿತರಿ
.....................................................
ಮಂದಿಗೆ ಬೇರ ಮಾಡಿರಿ ಹಂದಿ ನಾಯಿಗಿ ನಂಬರಿ

ಹಾಗೇ ನೋಡಿದರೆ, ನಮ್ಮಲ್ಲಿ ಎಲ್ಲ ಪ್ರಾಣಿಗಳು ಒಂದಲ್ಲ ಒಂದು ದೇವರೇ ಆಗಿವೆ. ಹಾಗೂ ಆ ಕಾರಣಕ್ಕಾಗಿಯೇ ಅವುಗಳನ್ನು ಭಕ್ತಿ ಗೌರವದಿಂದ ಕಾಣಲಾಗುತ್ತದೆ. ಉದಾಹರಣೆಗೆ ಹಸು ಗೋಮಾತೆಯೆಂದು ನಂಬಿ ಪೂಜಿಸುತ್ತಾರೆ. ನಾಯಿ ಮಲ್ಲಣ್ಣದೇವರು, ಹಂದಿ ವರಹ ದೇವರು, ಕೋಡಂಗಿ ಹನುಮಾನ ದೇವರು, ಎತ್ತು ವೃಷಭ ಅಥವಾ ಬಸವ. ಅಷ್ಟೇ ಏಕೆ ವಿಷಜಂತು ನಾಗರ ಕೂಡ ಇಲ್ಲಿ ದೇವರ ಸ್ಥಾನ ಪಡೆದಿದೆ. ಆದರೆ ಅಸ್ಪೃಶ್ಯರನ್ನು ಕೀಳಾಗಿ ನೋಡಲಾಗುತ್ತದೆ. ಇದು ಒಂದು ದೊಡ್ಡ ವಿಪರ್ಯಾಸ. ನಮ್ಮ ಸಮಾಜದ ಅವಿವೇಕಿತನ. ಅಂತೆಯೇ ಕಾಶೀನಾಥ ಗವಾಯಿಗಳು 'ಮಂದಿಗಿ ದೂರ ಮಾಡಿರಿ ಹಂದಿ ನಾಯಿಗಿ ನಂಬಿರಿ' ಎಂದು ಕುಟುಕಿದ್ದಾರೆ.

ಜೀವವಿರುವ ಪ್ರಾಣಿ ಪಕ್ಷಿಗಳಷ್ಟೇ ಅಲ್ಲ ಜಡವಸ್ತುಗಳಾದ ಕಲ್ಲು ಕಟ್ಟಿಗೆಯೂ ದೇವರೆಂಬ ನಂಬಿಕೆ ಹಿಂದೂ ಧರ್ಮದಲ್ಲಿದೆ.

ಹಿಂದೂ ತತ್ವ ವೇದಗಳು ವಿಚಾರಮಾಡಿರಿ
ಕಟಗಿ, ಕಲ್ಲು, ಮಣ್ಣು, ಕಬ್ಬಿಣ, ಗೊಂಬಿ ದೇವರರಿ
ಲಿಂಗ ವಿಭೂತಿ, ಗಂಧ, ಜನಿವಾರ, ದಾರ ಹಾಕಿರಿ
ಮಠ ಮಂದಿರ ಮಸಿದಿಯೊಳಗ ಮುಟ್ಟ ತಟ್ಟರಿ

ಎಂದು ಹಾಡಿದ್ದಾರೆ. ಲಿಂಗ, ವಿಭೂತಿ, ಗಂಧ, ಜನಿವಾರ ಮುಂತಾದ ಧರ್ಮದ ಬಾಹ್ಯ ಲಾಂಛನಗಳನ್ನು ಧರಿಸಿ, ಅಂತರಂಗದಲ್ಲಿ 'ಮುಟ್ಟ ತಟ್ಟ' ಎಂಬ ಅಧರ್ಮದ ವಿಚಾರ, ಕೊಳಕು ಗುಣ ಹೋಗಿಲ್ಲವೆಂಬ ಸತ್ಯವನ್ನು ಅರುಹಿ ಗವಾಯಿಗಳು ಅದನ್ನು ಖಂಡಿಸಿದ್ದಾರೆ. 'ಕಲ್ಲು ದೇವರ ಹೆಸರ ಮ್ಯಾಲ ಕೆಲಸ ತಗಿತಾರ' ಎಂದು ಹೇಳಿ, ದೇವರ ವ್ಯಾಪಾರೀಕರಣವನ್ನು ಬಯಲಿಗೆಳೆದಿದ್ದಾರೆ; ದೇವರ ಹೆಸರ ಮೇಲೆ ಹೊಟ್ಟೆ ಹೊರೆಯುವವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಕೇವಲ ಕೆಳಜಾತಿಯ ಹೆಣ್ಣುಮಕ್ಕಳನ್ನೇಕೆ ದೇವರ ಹೆಸರಲ್ಲಿ ಜಾಣಿ, ಜೋಗಣಿ, ದೇವದಾಸಿ, ಬಸವಿ ಬಿಡಲಾಗುತ್ತದೆ? ಮೇಲ್ಜಾತಿಯವರಿಗೆ ದೇವರ ಮೇಲೆ ಭಕ್ತಿಯಿಲ್ಲವೆ? ಇದ್ದರೆ ಅವರೇಕೆ ತಮ್ಮ ಹೆಣ್ಣುಮಕ್ಕಳನ್ನು ಬಸವಿ ಬಿಡುವುದಿಲ್ಲ? ಜೋಗಣಿಯಾಗಿ ದೇವರ ಮುಂದೆ ಕುಣಿಯುವುದಿಲ್ಲ? ಇದೆಲ್ಲ ಕೆಳಜಾತಿಯ ಹೆಣ್ಣುಗಳ ಶೋಷಣೆಗೆ ಪಟ್ಟಭದ್ರರು, ಬಲಿಷ್ಠಜಾತಿಯವರು, ದೇವರು ಮತ್ತು ಧರ್ಮದ ಹೆಸರಿನಲ್ಲಿ ಹುಟ್ಟು ಹಾಕಿದ ಅನಿಷ್ಟ ಪದ್ಧತಿಯಲ್ಲದೆ ಮತ್ತೇನು? ಅಂತಯೇ ಗವಾಯಿಗಳು ಪ್ರಶ್ನಿಸುತ್ತಾರೆ, 'ಉಚ್ಚಕುಲದಲಿ ಜಾಣಿ ಜೋಗಣಿ ಯಾಕ ಬಿಟ್ಟಿಲ್ಲರಿ' ಎಂದು. ಮೈಮೇಲೆ ದೇವರು ಬರುವುದನ್ನೂ ಸಹ ಅವರು ಖಂಡಿಸಿದ್ದಾರೆ.

ಹಳ್ಳಿ ಜನರ ಮಳ್ಳತನವನ್ನು (ಅಜ್ಞಾನವನ್ನು) ಕುರಿತು ಅವರು ಹೀಗೆ ಹಾಡಿದ್ದಾರೆ.

ಹಳ್ಳಿ ಜನರ ಮಳ್ಳ ವಿಚಾರ
ಇನ್ನು ಬಿಟ್ಟಿಲ್ಲಪ್ಪ ಕಳ್ಳಾಟ ಚೋರ
ಹಳ್ಳಿ ಹೋಟಲ ಕಪ್ಪು ಬಸಿ ಬ್ಯಾರ

ಕುಲ ಕೇಳುತಾರ ನೀವು ಯಾತರವರ
ತಾಯಿ ಹಾರೂರಕಿ ತಂದೆ ಜೈಭೀಮ ದೇವರ
ಯಾವುದ ಹೇಳಬೇಕ್ರಿ ಭೂಮಿ ಬೀಜ ಬ್ಯಾರ

ಹಳ್ಳಿಯ ಹೋಟಲುಗಳಲ್ಲಿ ಕಪ್ಪು ಬಸಿ ಕೆಳಜಾತಿಯವರಿಗಾಗಿ ಪ್ರತ್ಯೇಕವಾಗಿ ಇಡುವುದು, 'ನೀವು ಯಾತರವರು' ಎಂದು ಕುಲ ಕೇಳುವ ಕುಲಗೇಡಿಗಳಿಗೆ ಗವಾಯಿಗಳು ಅಂಬೇಡ್ಕರರು ಬ್ರಾಹ್ಮಣರ ಹೆಣ್ಣನ್ನು ಮದುವೆಯಾದ ಉದಾಹರಣೆ ಹೇಳಿ ಅವರ ಬಾಯಿ ಮುಚ್ಚಿಸಿದ್ದಾರೆ. ಅಲ್ಲದೆ ಅವರ ಮಳ್ಳತನಕ್ಕೆ ಮರುಗಿದ್ದಾರೆ. ಹಾಗೂ 'ಒಂದೇ ಮಾತಾ ಒಂದೇ ರಕ್ತ ಒಂದೇ ಭಾರತ ಜನತಾ' ಎಂಬ ಸಮಾನತೆಯ ಉದಾತ್ತ ತತ್ವವನ್ನು ಸಾರಿದ್ದಾರೆ.

ಜಾತಿ-ಭೇದವನ್ನು ಅಲ್ಲಗಳೆದ ಬಸವಣ್ಣನವರ ವಿಚಾರಗಳನ್ನು ತಮ್ಮ ಹಾಡುಗಳಲ್ಲಿ ಪ್ರಸ್ತಾಪಿಸಿ ಆ ಮೂಲಕವೂ ಸಂಪ್ರದಾಯವಾದಿಗಳಲ್ಲಿ ತಿಳುವಳಿಕೆ ಮೂಡಿಸುವ ಪ್ರಯತ್ನವನ್ನು ಕಾಶೀನಾಥ ಗವಾಯಿಗಳು ಮಾಡಿದ್ದಾರೆ.

ಬಸವಣಪ್ಪ ಬಹಳ ಭಕ್ತ ಹುಟ್ಟಿ ಬಂದ ಬ್ರಾಹ್ಮಣ ಮತ
ವೀರಶೈವ ಧರ್ಮವನೆತ್ತಿ ಅನಸಿದ ಭಗವಂತ
ಮಾಡಿದ ಕುಲಕೊಂದು ಶರಣ ಕುಲವು ಎಲ್ಲಿ ಉಳಿತಣ್ಣ
ಬಾಬಾ ಬಂದು ಮಾಡಿ ಒಂದು ಬರೆದ ಸಂವಿಧಾನ

ಅಲ್ಲದೆ 'ಬರೀ ಲಿಂಗ ಜನಿವಾರ ಹಾಕಿ ಭಂಗಿ ಸಿಂದಿ ಕುಡಿಯುವರಾ' 'ಹುಂಜ, ಕುರಿ, ತತ್ತಿ ತಿಂದು ಗಾಂಧಿ ಟೋಪಿ ಇಡುಹುವರಾ' ಎಂದು ಶ್ರೇಷ್ಠ ಜಾತಿಯವರ ಕನಿಷ್ಠ ನಡತೆಯ ಬಗ್ಗೆ ವ್ಯಂಗ್ಯವಾಡಿದ್ದಾರೆ. ಡೋಂಗಿತನವನ್ನು ಬಿಟ್ಟುಬಿಡಲು ಕರೆ ನೀಡಿದ್ದಾರೆ.

ಹೆಣ್ಣು ಗಂಡು ಎರಡೇ ಕುಲ ಮಾನವ ಧರ್ಮಕೊ
ದೇವರೊಬ್ಬನೇ ಎಲ್ಲರಿಗೂ ಉತ್ಪನ್ನ ರಕ್ಷಣಕೊ
ಸರ್ವರಿಗೂ ಸ್ವಾತಂತ್ರ್ಯ ಒಂದಾಗಿ ಜನಲೋಕ

ಎಂಬ ಧೋರಣೆ ಗವಾಯಿಗಳದು. ಮಾನವ ಧರ್ಮ ಎಲ್ಲಕ್ಕಿಂತಲೂ ಶ್ರೇಷ್ಠಧರ್ಮ, ಅಲ್ಲಿರುವುದು ಎರಡೇ ಕುಲ. ಒಂದು ಗಂಡು; ಇನ್ನೊಂದು ಹೆಣ್ಣು. ಹಾಗೇ ನೋಡಿದರೆ ಶರಣರ ವಿಚಾರದ ಪ್ರಕಾರ ಮಾನವ ಜಾತಿ ಒಂದೇ. ಹೆಣ್ಣು-ಗಂಡು ಎಂಬುದು ಎರಡು ಲಿಂಗಗಳು ಅಷ್ಟೇ. ಕಾಶೀನಾಥ ಗವಾಯಿಗಳು ತಮ್ಮ ಹಾಡುಗಳಲ್ಲಿ ಲಿಂಗ, ಜಾತಿ ಹಾಗೂ ಧಾರ್ಮಿಕ ಅಸಮಾನತೆಯನ್ನು ವಿರೋಧಿಸಿ, ಖಂಡಿಸಿದ್ದಾರೆ. ವ್ಯವಸ್ಥೆಯ ಅಸಮಾನತೆಗೆ ಕಾರಣವಾದ ಧರ್ಮಗ್ರಂಥಗಳನ್ನು ಟೀಕಿಸಿದ್ದಾರೆ. ಗವಾಯಿಗಳು ತಮ್ಮ ಕವಿತೆಗಳಲ್ಲಿ ತಾಳುವ ವೈಚಾರಿಕ ನಿಲುವು ಬುದ್ಧ-ಬಸವ-ಅಂಬೇಡ್ಕರರ ವಿಚಾರಗಳಿಂದ ಪ್ರೇರಿತವಾಗಿವೆ.

## ಪುರಾಣ ಮತ್ತು ಚರಿತ್ರೆ

ಪುರಾಣ ಮತ್ತು ಚರಿತ್ರೆಗೆ ಸಂಬಂಧಿಸಿದ ಹಲವಾರು ಸಂಗತಿಗಳು ಕಾಶೀನಾಥ ಗವಾಯಿಗಳ ಕವಿತೆಗಳಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಮುಖ್ಯವಾಗಿ ರಾಮಾಯಣ, ಮಹಾಭಾರತಗಳಲ್ಲಿ ಬರುವ ಜೀವವಿರೋಧಿ ನಿಲುವುಗಳು ಮತ್ತು ಅಲ್ಲಿನ ನಾಯಕರು ಶೂದ್ರರೊಂದಿಗೆ

ನಡೆದುಕೊಂಡ ರೀತಿಯನ್ನು ವಿಮರ್ಶೆಗೆ ಒಳಪಡಿಸಿದ್ದಾರೆ. ಅಲ್ಲದೆ ಪ್ರಾಚೀನ ಚರಿತ್ರೆಯಲ್ಲಿ ಬರುವ ಅಶೋಕ, ಅಂಗುಲಿಮಾಲಾ, ಬುದ್ಧನ ಕುರಿತಾದ ಕೆಲವು ವಿಷಯಗಳು ಹಾಗೂ ಗಾಂಧೀಜಿ ಅಂಬೇಡ್ಕರರಿಗೆ ಸಂಬಂಧಪಟ್ಟ ಚಾರಿತ್ರಿಕ ಘಟನೆಗಳು ಗವಾಯಿಗಳ ಹಾಡುಗಳಿಗೆ ವಿಷಯ ವಸ್ತುಗಳಾಗಿವೆ.

ಚಾತುರ್ವರ್ಣ ವ್ಯವಸ್ಥೆಯ ಶ್ರೇಣೀಕೃತ ಸಮಾಜದಲ್ಲಿ ಎಲ್ಲರಿಗಿಂತಲೂ ಕೆಳಗಿರುವವರೇ ಶೂದ್ರರು. ಶೂದ್ರರಾದ ವಾಲ್ಮೀಕಿ, ವ್ಯಾಸರಿಂದಲೇ ಈ ದೇಶದ ಮಹಾ ಕಾವ್ಯಗಳು ರಚನೆಯಾದವು. ಆದರೂ ಶೂದ್ರರಿಗೆ ಸಮಾಜದಲ್ಲಿ ಮಾನ ಗೌರವಗಳು ಸಿಕ್ಕಿಲ್ಲ. 'ವಾಲ್ಮೀಕಿ ಋಷಿ ರಾಮಾಯಣ ಗ್ರಂಥ ಬರೆದರೂ ಸಿಕ್ಕಿಲ್ಲ ಮಾನ' 'ಹಿಂದೂದೊಳಗ ವರ್ಣ ಜಾತಿ ಬಿಟ್ಟಿಲ್ಲಣ್ಣ' ಎಂದ ಗವಾಯಿಗಳು ಕವಿತೆಯೊಂದರಲ್ಲಿ ಹೇಳಿದ್ದಾರೆ. ರಾಮಾಯಣದಲ್ಲಿ ಶೂದ್ರನಾದ ಶಂಬುಕ ಋಷಿಗಾದ ಅನ್ಯಾಯವನ್ನು ಗವಾಯಿಗಳು ತಮ್ಮ ಹಾಡಿನಲ್ಲಿ ಎತ್ತಿ ತೋರಿಸಿದ್ದಾರೆ.

ರಾಮಚಂದ್ರ ಬಂದಾ ಆಯೋಧ್ಯ ರಾಜ್ಯವಾಳಿದಾ
ಬ್ರಾಹ್ಮಣ, ಕ್ಷತ್ರಿ, ವೈಶ್ಯ, ಶೂದ್ರ ಇತ್ತೊ ಭೇದಾ
ಶೂದ್ರ ಶಂಬುಕ ಮುನಿ ಆಗ ತಪ ಕುಂತಿದಾ
..................................................
ಬ್ರಾಹ್ಮಣರು ರಾಮನ ಮುಂದ ಗೋಳು ಹೇಳುತಾ ಬಂದಾ
ಶೂದ್ರ ತಪ ಕುಂತದಕ್ಕಾಗಿ ನಮ್ಮ ಶಿಶುಗಳು ಮಡಿದಾ
ರಾಮ ಬಾಣಿಲೆ ಹೊಡೆದ ಶಂಬುಕನ ಶಿರ ಕಡಿದಾ

ಹೀಗೆ ಶಂಬುಕನ ಸಾವಿನ ಸನ್ನಿವೇಶ ಹಾಗೂ ಅದಕ್ಕೆ ಕಾರಣವಾದ ಘಟನೆಯನ್ನು ಗವಾಯಿಗಳು ವಿವರಿಸಿದ್ದಾರೆ. ಅಲ್ಲದೆ ರಾವಣನ ಬಗ್ಗೆ ಸಹಾನುಭೂತಿಯನ್ನು ತಮ್ಮ ಹಾಡುಗಳಲ್ಲಿ ವ್ಯಕ್ತಪಡಿಸಿದ್ದಾರೆ. ತ್ರೇತಾಯುಗದ ರಾವಣ ಒಬ್ಬ ಬೌದ್ಧಧರ್ಮಾನು ಯಾಯಿಯಾಗಿದ್ದ. ಅವನನ್ನು ಕೊಲ್ಲುವುದರ ಮೂಲಕ ರಾಮ ಬೌದ್ಧ ಧರ್ಮದ ದೀಪವನ್ನು ಆರಿಸಿದನು ಎಂದು ಹೇಳಿದ್ದಾರೆ. 'ತ್ರೇತಾಯುಗದೋಳೊ ಲಂಕಾಪತಿ ರಾವಣ ಬುದ್ಧ, ವಿಭೀಷಣನಿಂದ ರಾಮ ದಶಕಂಟನ ಹೊಡೆದಾ ಬೌದ್ಧಧರ್ಮದ ದೀಪ ರಾಮ ಕಳೆದ' ಎಂಬ ಅವರ ಕವಿತೆಯ ಸಾಲುಗಳಲ್ಲಿ ರಾಮನ ಬಗ್ಗೆ ತಿರಸ್ಕಾರ ಭಾವ, ಹಾಗೂ ರಾವಣನ ಬಗ್ಗೆ ಸಹಾನುಭೂತಿಯನ್ನು ಕಾಣಬಹುದಾಗಿದೆ.

ಮಹಾಭಾರತದಲ್ಲಿ ಶೂದ್ರನಾದ ಏಕಲವ್ಯನ ಬೆರಳನ್ನು ಗುರುದಕ್ಷಿಣೆಯಾಗಿ ತೆಗೆದು ಕೊಂಡದ್ದು ಅತ್ಯಂತ ಅಮಾನವೀಯವಾದುದಲ್ಲವೆ? ಗುರು ದ್ರೋಣರು ಬಗೆದ ಶಿಷ್ಯದ್ರೋಹ ವನ್ನು ಗವಾಯಿಗಳಲ್ಲಿ ಹಾಡಾದುದು ಹೀಗೆ;

ಶೂದ್ರ ಏಕಲವ್ಯನಿದ್ದ
ಬಾಣಲ್ಲಿ ಬಾಹದ್ದೂರನಾದ
ದ್ರೋಣಾಚಾರ್ಯ ಗುರುವಿನಲ್ಲಿ ಬಂತೋ ಭೇದಾ
ಗುರುಕಾಣಿಕೆ ಬೇಡಿ ಹೆಬ್ಬೆರಳು ಕಡಿದಾ

ದ್ರೋಣಾಚಾರ್ಯರ ಮೋಸದಿಂದ ಶೂದ್ರರ ಧನುರ್ವಿದ್ಯೆಯನ್ನು ಕಸಿದುಕೊಂಡರೆಂದು ಗವಾಯಿಗಳು ಈ ಹಾಡಿನಲ್ಲಿ ಹೇಳಿದ್ದಾರೆ. 'ಅಂತೀರಿ ಕೃಷ್ಣ ದೇವರಂತ ಕೌಂಸ ಮಾವನ ಕೊಂದ ಸಹಸ್ರ ಗೋಪಿಯರಿಗೆ ಒತ್ತಾಯ ಪಡಿಸಿದ' ಎಂದು ಹೇಳಿ, ಕೃಷ್ಣನನ್ನು ದೇವರೆನ್ನುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಕೃಷ್ಣ ಹಲವು ಕೊಲೆಗಳಿಗೆ ಕಾರಣನಾದವನು ಹಾಗೂ ಸ್ತ್ರೀಲೋಲ ಎಂಬ ವಿಚಾರ ಅವರ ಹಾಡುಗಳಲ್ಲಿ ಬಂದಿದೆ.

ಪುರಾಣಗಳಲ್ಲಿ ಬರುವ ದೇವರುಗಳ ವಿಷಯವೂ ಅವರ ಹಾಡುಗಳಲ್ಲಿ ಬರುತ್ತದೆ. ಬ್ರಹ್ಮ, ವಿಷ್ಣು, ರುದ್ರರನ್ನು ಕುರಿತು ಬಹಳ ತರ್ಕಬದ್ಧವಾದ ವಿಚಾರಗಳನ್ನು ಗವಾಯಿಗಳು ಮಂಡಿಸಿದ್ದಾರೆ. ಈ ತ್ರಿಮೂರ್ತಿಗಳು ದೇವರಾದರೂ ಮಾನವರಂತೆ ಹೆಂಡತಿ, ಮಕ್ಕಳನ್ನು ಪಡೆದಿದ್ದಾರೆ; ಸಂಸಾರವನ್ನು ನಡೆಸಿದ್ದಾರೆ.

ಬ್ರಹ್ಮ ವಿಷ್ಣು ರುದ್ರರ ಸತಿ, ಸರಸ್ವತಿ ಲಕ್ಷ್ಮಿ ಪಾರ್ವತಿ
ಪ್ರಪಂಚ ಮಾಡ್ಯಾರೋ ನಮ್ಮ ನಿಮ್ಮಂತೆ
ಮಕ್ಕಳು ವೀರಭದ್ರ, ಶಣ್ಮುಕ, ಗಣಪತಿ
ಇವರಿಗೆ ದೇವರೆಂದು ತಿಳಿಯಾಂವ ಮಳ್ಳಕೋತಿ
ಸುಳ್ಳೇ ಬರೆದು ಇಟ್ಟಾರೂ ಇಲ್ಲದೊಂದು ಕತಿ

ಪುರಾಣದ ಈ ವಿಚಾರಗಳನ್ನು ಹೇಳಿ ಕಾಶೀನಾಥ ಗವಾಯಿಗಳು, ದೇವರ ಬಗ್ಗೆ ಬರೆದ ಪುರಾಣಗಳು ಸುಳ್ಳಿನ ಕಥೆಗಳು ಎಂದಿದ್ದಾರೆ. 'ಕೈಲಾಸ ಸ್ವರ್ಗವೆಂಬುವುದು ಸುಳ್ಳಣ್ಣ ಚಂದ್ರಲೋಕಕ್ಕೆ ಹೋಗಿ ಬಂದರೋ ಅಮೇರಿಕಾ ಜನ' ಎಂದು ಹೇಳಿ, ಸ್ವರ್ಗದ ಕಲ್ಪನೆಗೂ ವಿರೋಧ ವ್ಯಕ್ತಪಡಿಸಿದ್ದಾರೆ. ವೇದ, ಶಾಸ್ತ್ರ, ಹದಿನೆಂಟು ಪುರಾಣಗಳ ಬಗ್ಗೆಯೂ ಗವಾಯಿಗಳಲ್ಲಿ ಇದೇ ಅಭಿಪ್ರಾಯವಿದೆ. ರಾಮಾಯಣ, ಮಹಾಭಾರತಗಳಲ್ಲಿ ಬರುವ ರಾಮ, ಕೃಷ್ಣ, ಶಂಬೂಕ, ಏಕಲವ್ಯರ ಬಗ್ಗೆ ಅಂಬೇಡ್ಕರರು ವ್ಯಕ್ತಪಡಿಸಿದ ವಿಚಾರಗಳ ನೇರ ಪ್ರಭಾವ ಗವಾಯಿಗಳ ಮೇಲಾಗಿದೆ. ಅವರುಗಳ ಬಗ್ಗೆ ಗವಾಯಿಗಳು ತಳೆದಿರುವ ನಿಲುವು ಕೂಡ ಅಂಬೇಡ್ಕರರ ನಿಲುವಿನಿಂದಲೇ ಪ್ರೇರಿತವಾಗಿದೆ.

ಪುರಾಣದಲ್ಲಿ ಬರುವ 'ಸತಿ ಅನುಸುಯಾ'ಳ ಕಥೆಯನ್ನು ಕಾಶೀನಾಥ ಗವಾಯಿಗಳು ತಮ್ಮ ಹಾಡಿನಲ್ಲಿ ನಿರೂಪಿಸಿದ್ದಾರೆ. 'ಸತಿಯರಿಗೆ ಪತಿನೇ ಪ್ರಭುದೇವ' ಎಂದು ಆರಂಭವಾಗುವ ಅನುಸೂಯಾಳ ಹಾಡಿನಲ್ಲಿ, ಅನುಸೂಯಾಳ ಪತಿ ಸೇವೆಯ ಆದರ್ಶವನ್ನು ಎತ್ತಿ ಹೇಳಿದ್ದಾರೆ. ಭೂಲೋಕದ ಗರತಿಯಾದ ಅನುಸೂಯಾಳನ್ನು ಪರೀಕ್ಷಿಸಲು ಸರಸ್ವತಿ, ಲಕ್ಷ್ಮಿ ಪಾರ್ವತಿಯರು ತಮ್ಮ ಪತಿಯರಾದ ಬ್ರಹ್ಮ, ವಿಷ್ಣು, ರುದ್ರರನ್ನು ಕಳಿಸಿಕೊಡುವುದು; ಅವರು ಅನುಸೂಯಾಳ ಮಹಿಮೆಯಿಂದ ಚಿಕ್ಕ ಮಕ್ಕಳಾಗಿ ಪರಿವರ್ತನೆಗೊಳ್ಳುವುದರ ಸನ್ನಿವೇಶ ಈ ಹಾಡಿನಲ್ಲಿದೆ. ನಾರದರಿಂದ ಅನುಸೂಯಾಳ ಕೀರ್ತಿಯನ್ನು ಕೇಳಿದ, ಲಕ್ಷ್ಮಿ ಪಾರ್ವತಿ, ಸರಸ್ವತಿಯರು ಅದನ್ನು ಸಹಿಸಲಾರದೆ 'ಮಾಡ್ರಕಿನ ಫಜಿತಿ' ಎಂದು ತಮ್ಮ ಪತಿಯರಾದ ತ್ರಿಮೂರ್ತಿಗಳನ್ನು ಭೂಲೋಕಕ್ಕೆ ಕಳಿಸುತ್ತಾರೆ. ಭೂಲೋಕಕ್ಕೆ ಬಂದ ಆ ತ್ರಿಮೂರ್ತಿಗಳು 'ದಿಗಂಬರಳಾಗಿ ಊಟ ಮಾಡ್ಸವ್ವಾ ತೃಪ್ತಿ' ಎಂದು ಅನುಸೂಯಾಳನ್ನು ಕೇಳುತ್ತಾರೆ. ಆಗ ತನ್ನ ಪತಿಯ ಸಲಹೆಯಂತೆ ಅನುಸೂಯಾ

ಪತಿಪಾದದ ದೂಳಪಾಕ ಆ ತ್ರಿಮೂರ್ತಿಗಳ ಮೇಲೆ ಸಿಂಪಡಿಸಲು ಆ ಮೂವರು ಶಿಶುಗಳಾಗುತ್ತಾರೆ.

ಮೂವರು ಶಿಶು ಆಗಿ ತೆರದಾರು ಬಾಯಿ
ಬೆತ್ತಲೆ ಆಗಿ ಹಾಲು ಕುಡಿಸ್ಯಾಳ ತಾಯಿ

ಪುರಾಣಗಳಲ್ಲಿ ಬರುವ ಅನುಸೂಯಾ, ಸಾವಿತ್ರಿ, ಮಂಡೋದರಿ–ಇವರೆಲ್ಲರೂ ಬೌದ್ಧಧರ್ಮೀಯರೆಂಬುದು ಗವಾಯಿಗಳ ಗ್ರಹಿಕೆ.

ಭಾರತದಲ್ಲಿ ಬೌದ್ಧಧರ್ಮ ಪ್ರವರ್ಧಮಾನಕ್ಕೆ ಬಂದದ್ದು, ಅಶೋಕ ಮುಂತಾದ ರಾಜರು ಬೌದ್ಧಧರ್ಮದ ಅನುಯಾಯಿಗಳಾದ ಚಾರಿತ್ರಿಕ ಸತ್ಯ ಗವಾಯಿಗಳ ಹಾಡಿನಲ್ಲಿದೆ.

ಭಗವಾನ ಬುದ್ಧನ ಪರಮ ಶಿಷ್ಯರೋ
ಮಿಲಿಂದರಾಜ ಬಿಂದುಸಾರ
ಮೌರ್ಯ ಚಂದ್ರಗುಪ್ತರೊ ಹರ್ಷವರ್ಧನರಾಜರೊ
ಸಾಮ್ರಾಟ ಚಕ್ರವರ್ತಿ ಅಶೋಕ ಭೂಪತಿಯರೊ
.... ಸಂಘಮಿತ್ರ, ರಾಜ ಮಹೇಂದ್ರರೊ

ಅಶೋಕನಲ್ಲದೆ ಅವನ ಮಕ್ಕಳಾದ ಸಂಘಮಿತ್ರ ಹಾಗೂ ಮಹೇಂದ್ರರು ಬುದ್ಧನ ಅನುಯಾಯಿಯಾದುದನ್ನು ಇಲ್ಲಿ ಗವಾಯಿಗಳು ಉಲ್ಲೇಖಿಸಿದ್ದಾರೆ.

ಆರ್ಯರು ವಿದೇಶದಿಂದ ಭಾರತಕ್ಕೆ ಬಂದವರೆಂಬುವುದು ಐತಿಹಾಸಿಕ ಸತ್ಯ. ವಿದೇಶದಿಂದ ಬಂದ ಆರ್ಯರು ದ್ರಾವಿಡರೊಡನೆ ಸಂಘರ್ಷಕ್ಕಿಳಿದು ತಮ್ಮ ಪ್ರಾಬಲ್ಯವನ್ನು ಮೆರೆದರು. ಅವರೇ ಚಾತುರ್ವರ್ಣ ವ್ಯವಸ್ಥೆಯನ್ನು ಪೋಷಿಸಿಕೊಂಡು ಬಂದರೆಂಬ ಚಾರಿತ್ರಿಕ ತಿಳುವಳಿಕೆ ಕಾಶೀನಾಥ ಗವಾಯಿಗಳಲ್ಲಿದೆ.

ಹೊರಗಿನಿಂದ ಬಂದರೊ ಆರ್ಯ ಬ್ರಾಹ್ಮಣರು,

.....................................................

ಆರು ಶಾಸ್ತ್ರ ಹದಿನೆಂಟು ಪುರಾಣ ವರ್ಣಾಶ್ರಮ ಮಾಡಿದರಾ
ಋಗ್ವೇದ, ಸಾಮವೇದ, ಯಜೂರ, ಅಥರ್ವವೇದ
ಜಾತಿ ಗೋತ್ರ ಕಟ್ಟಿದರಾ, ಕುಲ ಮಾಡಿ ತಲೆ ಕೆಡಸಿಟ್ಟಿದರಾ

ಆರ್ಯರಂತೆ ಇಸ್ಲಾಂ ಧರ್ಮದವರು, ಪಾದ್ರಿಗಳು ಕೂಡ ವಿದೇಶದಿಂದಲೇ ಬಂದವರಲ್ಲವೆ? ವ್ಯಾಪಾರಕ್ಕಾಗಿ ಬಂದ ಯುರೋಪಿಯನ್ನರು ಇಲ್ಲಿಯೇ ನೆಲೆಸಿ, ಸ್ಕೂಲ್, ಚರ್ಚುಗಳನ್ನು ನಿರ್ಮಿಸಿ, ಕ್ರೈಸ್ತಧರ್ಮ ಬೋಧಿಸುತ್ತಿರುವ ಬಗ್ಗೆ ಗವಾಯಿಗಳು ಹೀಗೆ ಹೇಳುತ್ತಾರೆ.

ಪರದೇಶದ ಪಾದ್ರಿಯ ಜನರು ವ್ಯಾಪಾರ ಮಾಡುತ ಬಂದಿದರಾ
ಮಿಶನ್‌ಸ್ಕೂಲ್, ಆಸ್ಪತ್ರೆ ಜಪದ ಗುಡಿಗಳು ಕಟ್ಟಿದರಾ
ಬೈಬಲ್ ಓದಿ ಯೇಸುವಿನ ಹಾದಿ ಹೊರಗಿನ ತತ್ವಹಿಡಿಸಿದರಾ

ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳೂ ಹೊರಗಿನಿಂದ ಬಂದವುಗಳು ಎಂಬ ಚಾರಿತ್ರಿಕ ತಿಳುವಳಿಕೆ ಇಲ್ಲಿದೆ. ಅಂತೆಯೇ 'ಹೊರಗಿನ ತತ್ವ ಹಿಡಿಸಿದರಾ' ಎಂಬ ಮಾತು ಬಂದಿದೆ.

ಹನ್ನೆರಡನೆಯ ಶತಮಾನದ ಬಸವಾದಿ ಶರಣರ ಬದುಕು ಮತ್ತು ಅವರ ಹೋರಾಟಕ್ಕೆ ಸಂಬಂಧಪಟ್ಟ ಕೆಲವು ಐತಿಹಾಸಿಕ ಘಟನಾವಳಿಗಳನ್ನು ಕಾಶೀನಾಥ ಗವಾಯಿಗಳು ತಮ್ಮ ಹಾಡುಗಳಲ್ಲಿ ಉಲ್ಲೇಖಿಸಿದ್ದಾರೆ. ಬಸವಣ್ಣನವರ ಸಮಾನತೆಯ ತತ್ವ, ನೈತಿಕ ನಡೆಯನ್ನು ಮೆಚ್ಚಿ ಹಾಡಿದ್ದಾರೆ. ಬಸವಣ್ಣನವರನ್ನು 'ಪೂಜ್ಯಪುರುಷ', 'ಬಸವಣ್ಣ ಅಪ್ಪ' ಎಂದು ಗೌರವದಿಂದ ಕರೆದಿದ್ದಾರೆ.

ಬಾಗೇವಾಡಿಯಲ್ಲಿ ಬಸವ ಜನಿಸಿದರು
ಬ್ರಾಹ್ಮಣ ಮತ ಬಿಟ್ಟು ಕಲ್ಯಾಣದೊಳು
... 'ಕನ್ನಡ ನಾಡಿನ ಮುಖ್ಯಮಂತ್ರಿಯಾದರು
ಸಾಮಾಜಿಕ, ಧಾರ್ಮಿಕ, ನೈತಿಕ, ವೈಚಾರಿಕ
ವೀರಶೈವ ಧರ್ಮಕ್ರಾಂತಿ ಬೀರಿದರು
ಜಾತಿಗೋತ್ರ ಮುರಿದ ನೀತಿ ಸನ್ಮಾರ್ಗ ತೆರೆದ
ಮೇಲು-ಕೀಳು ಕಳೆದ....

ಎಂದು ಬಸವಣ್ಣನವರ ತತ್ವ ಮತ್ತು ಹೋರಾಟವನ್ನು ವಿವರಿಸಿದ್ದಾರೆ. ಅಲ್ಲದೆ ಅಲ್ಲಮ ಪ್ರಭುವಿನ ಅಧ್ಯಕ್ಷತೆಯಲ್ಲಿ ಅಸಂಖ್ಯ ಶರಣರು ಅನುಭವ ಮಂಟಪದ ಚರ್ಚೆಯಲ್ಲಿ ತೊಡಗಿಸಿಕೊಂಡಿದ್ದನ್ನೂ ಹೇಳಿದ್ದಾರೆ. ಶರಣ ಚರಿತ್ರೆಯಲ್ಲಿ ಬರುವ ಮಹತ್ವದ ಘಟನೆಯೆಂದರೆ, ಅವರು ನೆರವೇರಿಸಿದ ಪ್ರತಿಲೋಮ ವಿವಾಹ. ಜಾತಿ ಕಟ್ಟಳೆಯನ್ನು ಮೀರಿ ಶರಣರು ಸಮಗಾರ ಹರಳಯ್ಯನ ಮಗನಿಗೂ ಹಾಗೂ ಬ್ರಾಹ್ಮಣ ಮಂತ್ರಿ ಮಧುವರಸನ ಮಗಳಿಗೂ ಮದುವೆ ಮಾಡಿಸಿದ್ದು ಕಲ್ಯಾಣ ಕ್ರಾಂತಿಗೆ ಮುಖ್ಯ ಕಾರಣ. ಶರಣರ ಹೋರಾಟಕ್ಕೆ ಒಂದು ನಿರ್ಣಾಯಕ ತಿರುವು ನೀಡಿದ್ದು ಈ ಪ್ರತಿಲೋಮ ವಿವಾಹ. ನಂತರ ಅಧಿಕಾರಶಾಹಿ ದಬ್ಬಾಳಿಕೆ, ಹಾಗೂ ಪುರೋಹಿತಶಾಹಿಗಳ ಕುತಂತ್ರಗಳಿಂದಾಗಿ ಶರಣರು ಕಲ್ಯಾಣ ಬಿಟ್ಟು ಹೋಗಬೇಕಾಯಿತು. ಕಾಶೀನಾಥ ಗವಾಯಿಗಳ ಒಂದು ಹಾಡಿನಲ್ಲಿ ಈ ಘಟನೆಯ ವಿವರವಿದೆ.

ಅನುಭವ ಮಂಟಪದೊಳೂ ಶರಣ ಶರಣೆಯರೊಳೂ
ಆತ್ಮ ಪರಮಾತ್ಮ ಅನುಭಾವ ತಿಳಿಸಿದರು
...............................................
ಮಧುಭಟ್ಟನ ಮಗಳಿಗೆ, ಹರಳಯ್ಯನ ಮಗನಿಗೆ
ಜಾತಿ-ಗೋತ್ರ ಮುರಿದು ಮದುವೆ ಮಾಡಿದರು
ಶೆಟ್ಟೇರು ಭಟ್ಟರು ಕೂಂಡಿ ಮಂಚಣ್ಣನವರು
ಕಲ್ಯಾಣ ಕದನ ಹಚ್ಚಿ ಕಾಡಿದರು
ಉಳಿದ ಶರಣರು ಸಾಹಿತ್ಯ ಉಳಿಸಿ, ಉಳುವಿಯಲ್ಲಿ ಕೂಡಿದರು

ಕಲ್ಯಾಣ ಕ್ರಾಂತಿಯ ನಂತರ ಚೆನ್ನಬಸವಣ್ಣನ ನೇತೃತ್ವದಲ್ಲಿ ಉಳಿದ ಶರಣರು ಉಳುವಿಯ ಕಡೆಗೆ ಹೊರಟದ್ದು, ತಮ್ಮ ಸಾಹಿತ್ಯವನ್ನು ರಕ್ಷಿಸಿಕೊಂಡದ್ದು ಇವೆಲ್ಲ ಚಾರಿತ್ರಿಕ ಘಟನೆಗಳೇ ಆಗಿವೆ.

ಬಸವಣ್ಣನವರು ತಮ್ಮ ಬದುಕಿನ ಕೊನೆಯ ದಿನಗಳಲ್ಲಿ ಸನಾತನ ಹಿಂದೂಗಳಿಂದ ಅನುಭವಿಸಿದ ನೋವನ್ನು ಕುರಿತು ಹೀಗೆ ಹೇಳಿದ್ದಾರೆ.

'ಕಾಯಕವೇ ಕೈಲಾಸ' ಅಂದ್ರೊ ಬಸವೇಶಾ
...................................................
ಹಿಂದೂ ಜನರೇ ಬಸವಣ್ಣಗ ಹಾಕ್ಯಾರೊ ವಿಷ
ಕೊಂಡಿ ಮಂಚಣ್ಣಕೊಟ್ಟಾರೋ ವನವಾಸ
ಹಂಪಿಗೆ ಅಳುತಾ ಹೋದರೋ ಬಸವೇಶಾ
ವೀರಶೈವ ಅಂದೇ ಆಗ್ಯಾದ ನಾಶಾ

ಬಸವಣ್ಣನವರು ಹಂಪಿಗೆ ಹೋದರು ಎನ್ನುವಲ್ಲಿ ಚಾರಿತ್ರಿಕ ದೋಷವಿರುವುದನ್ನು ಗಮನಿಸಬಹುದು. ಕಾಶೀನಾಥ ಗವಾಯಿಗಳು ಈ ಹಾಡು ಬರೆಯುವಾಗ ಬಸವಣ್ಣನವರ ಚರಿತ್ರೆಗೆ ಸಂಬಂಧಿಸಿದಂತೆ ಇನ್ನೂ ಕೆಲವು ವಿವರಗಳು ಅಸ್ಪಷ್ಟವಾಗಿದ್ದವು.

ಗಾಂಧೀಜಿ-ಅಂಬೇಡ್ಕರ ನಡುವಿನ ಕೆಲವು ಚಾರಿತ್ರಿಕ ಸಂದರ್ಭಗಳೂ ಸಹ ಕಾಶೀನಾಥ ಗವಾಯಿಗಳ ಹಾಡುಗಳಲ್ಲಿವೆ. ಗಾಂಧೀಜಿ ಪಾಕಿಸ್ತಾನ ವಿಭಜನೆಗೆ ಒಪ್ಪಿದ್ದು, ಬಂಗ್ಲಾ ವಿಮೋಚನೆಗೆ ನಡೆದ ಯುದ್ಧ, ಗಾಂಧೀಜಿಯ ಉಪವಾಸ ಇತ್ಯಾದಿಗಳನ್ನು ತಮ್ಮ ಹಾಡುಗಳಲ್ಲಿ ಪ್ರಸ್ತಾಪಿಸಿದ್ದಾರೆ. ಗಾಂಧೀಜಿಯವರ ಅಹಿಂಸಾ ಹೋರಾಟವು ಬುದ್ಧನ ಅಹಿಂಸೆ ತತ್ವದಿಂದಲೇ ಪ್ರೇರಿತವಾದುದು ಎಂದು ಗವಾಯಿಗಳು ತಮ್ಮ ಹಾಡಿನಲ್ಲಿ ಪ್ರತಿಪಾದಿಸಿದ್ದಾರೆ. ಭಾರತ ಸ್ವಾತಂತ್ರ್ಯವನ್ನು ಪಡೆದು, ಮೊಟ್ಟಮೊದಲ ಬಾರಿಗೆ ಕೆಂಪು ಕೋಟೆಯ ಮೇಲೆ ತಿರಂಗಾ ಧ್ವಜವನ್ನು ಹಾರಿಸಿದ ಆ ಚಾರಿತ್ರಿಕ ದಿನವನ್ನು ಕುರಿತು 'ಒನ್ನಿಸೊ ಸೈತಾಳಿಸ ಪಂದರಾ ಆಗಸ್ಟ್ ತಿರಂಗಿ, ತಿರಂಗಿ, ಝುಂಡವಾ ಏರಿತಾ' ಎಂದು ಹಾಡಿ ಆ ಸಂಭ್ರಮದ ದಿನವನ್ನು ದಾಖಲಿಸಿದ್ದಾರೆ.

## ರಾಷ್ಟ್ರಪ್ರೇಮ ಮತ್ತು ರಾಜಕೀಯ ವಿಚಾರ

ಕಾಶೀನಾಥ ಗವಾಯಿಗಳು ಒಬ್ಬ ಅಪ್ಪಟ ದೇಶಪ್ರೇಮಿಯಾಗಿದ್ದರು. ದೇಶದ ಐಕ್ಯತೆಯನ್ನು ಪ್ರತಿಪಾದಿಸುವ ಹಲವು ಕವಿತೆಗಳನ್ನು ರಚಿಸಿದ್ದಾರೆ. ೧೯೬೨ರಲ್ಲಿ ಚೀನಾ ಭಾರತದ ಮೇಲೆ ಆಕ್ರಮಣ ಮಾಡಿದಾಗ ಸೈನಿಕರಿಗಾಗಿ ತಮ್ಮ ದೇಹದ ಸೇರು ರಕ್ತವನ್ನು ದಾನ ಮಾಡಿದ್ದಾರೆ; ಇತರರಿಂದಲೂ ರಕ್ತದಾನ ಮಾಡಿಸಿದ್ದಾರೆ. ದಲಿತ ಯುವಕರು ಸೈನ್ಯ ಸೇರಿ ದೇಶ ಸೇವೆ ಕೈಗೊಳ್ಳಬೇಕೆಂದು ತಮ್ಮ ಕವಿತೆಗಳ ಮೂಲಕ ಕರೆಕೊಟ್ಟಿದ್ದಾರೆ. ರಾಷ್ಟ್ರಕ್ಕೆ, ನಾಡು-ನುಡಿಗೆ ಗವಾಯಿಗಳು ತಮ್ಮದೇ ಆದ ಸೇವೆಯನ್ನು ಸಲ್ಲಿಸಿದ್ದಾರೆ. ಭಾರತ ಜನತೆ ಬಂಧುಪ್ರೇಮದಿಂದ ಬಾಳಬೇಕು; ಜೊತೆಗೆ ವಂದೇ ಮಾತರಂ ನುಡಿಯ ಬೇಕೆಂಬುದು ಅವರ ಆಶಯ.

ಭಾರತದೊಳು ಬಂಧು ಪ್ರೇಮ
ನುಡಿಯರಿ ವಂದೇ ಮಾತರಂ....
ನುಡಿದ ಹಾಗೆ ನಡಿಬೇಕೋ ತಮ್ಮಾ

ಜಾತಿಯ ಭೇದ ಭಾವವು ದೇಶದ ಏಕತೆ ಮತ್ತು ಸಮಗ್ರತೆಗೆ ಅಡ್ಡಿಯುಂಟು

ಮಾಡುತ್ತದೆ. ಅದಕ್ಕಾಗಿ ಭೇದಭಾವ ತೊರೆದು ದೇಶವನ್ನು ಬಲಿಷ್ಠಗೊಳಿಸಬೇಕೆಂಬುವುದು ಗವಾಯಿಗಳ ವಿಚಾರ. ನಮ್ಮ ನಮ್ಮೊಳಗಿನ ಕಚ್ಚಾಟ, ತಿಕ್ಕಾಟಗಳು ವೈರಿಗಳು ಆಕ್ರಮಣಕ್ಕೆ ಸುಲಭ ದಾರಿ ಮಾಡಿಕೊಡುತ್ತವೆ ಎಂಬ ಸತ್ಯವನ್ನು ಗವಾಯಿಗಳು ಬಹಳ ವರ್ಷಗಳ ಹಿಂದೆಯೇ ಸಾರಿ ಹೇಳಿದ್ದಾರೆ.

ಚೀನಾ ಅಮೆರಿಕಾ ಪಾಕಿಸ್ತಾನ
ಭಾರತ ಮ್ಯಾಲ ಇಟ್ಟಾರೋ ಕಣ್ಣ
ನಮ್ಮಲ್ಲಿ ಭೇದ ಭಾವದ ಚಿಹ್ನ
ಅನ್ಯರಿಗೆ ಮಾರ್ಗಾಯಿತಣ್ಣ

'ಭೂದೇವಿ ಭಾರತ ಮಾತಾ' ಎನ್ನುವ ಕವಿತೆಯಲ್ಲಿ ಗವಾಯಿಗಳ ದೇಶಪ್ರೇಮ, ಭಾರತ ಬಡವರ ಬಗ್ಗೆ ಅವರಿಗಿದ್ದ ಕಾಳಜಿ ಹಾಗೂ ಭ್ರಷ್ಟರ ಬಗ್ಗೆ ಕಠೋರ ನಿಲುವು ವ್ಯಕ್ತವಾಗಿದೆ.

ಭೂದೇವಿ ಭಾರತ ಮಾತಾ
ಹಿಂದೂಸ್ಥಾನದ ಜನತಾ
ಒಂದಾಗಿ ಸರಿಯಾಗಿ ನಡಸಾರೀ ಭಾರತ
ಬ್ರಿಟಿಷರ ಕೈಯೊಳಗೆ ಸ್ವರಾಜ್ಯ ಸೇರಿತ
ತಿಲಕ್ ಗಾಂಧೀ ಮಾಡಿದ್ದರೊ ಪಂಥ
ಭಾರತಕ್ಕೆ ಕುಬೇರನಿದ್ದ ಜವಾಹರಲಾಲ ಪಂಡಿತ
ಕುಡ್ಯಾರೊ ಎಲ್ಲರು ನೇತಾ....
ಮದ್ದು ಗುಂಡು ಇಲ್ಲದ ಜ್ಞಾನ ಬುದ್ಧ ಖಡ್ಗದಿಂದ
ಸಿದ್ಧವಾಗಿ ಸತ್ಯಾಗ್ರಹ ನಡಸಿದಾರೊ ಧುಂದ
ಬ್ರಿಟಿಷರು ಎದ್ದೋಡಿದಾರೊ ಹದ್ದು ಕಾಗೆ ಹಾಂಗ
ಒನ್ನಿಸೋ ಸೈತಾಳಿಸ ಪಂದರಾ ಆಗಸ್ಟ್
ತಿರಂಗಿ, ತಿರಂಗಿ, ಝುಂಡವಾ ಏರಿತ

ಬ್ರಿಟಿಷರು ಭಾರತ ಬಿಟ್ಟು ಹೋದ ಮೇಲೆ ಮುಂದೆ ನಮ್ಮವರೇ ಅಧಿಕಾರ ಹಿಡಿದು, ಭ್ರಷ್ಟರಾಗಿ, ಭಾರತಕ್ಕೆ ಆಪತ್ತು ತಂದೊಡ್ಡಿದ್ದನ್ನು ಗವಾಯಿಗಳು ಖಂಡಿಸಿದ್ದಾರೆ. ಅವರ ಕವಿತೆಗಳಲ್ಲಿ 'ನಾವು ಭಾರತ ಭೂಮಿ ಸೇವಾ ಮಾಡುವರೊ', 'ಭಾರತ ಭೂಮಿ ಸೇವೆಗಾಗಿ ಜೀವ ಕೊಡುವವರೊ', 'ಬೇರೆ ದೇಶದ ದುಷ್ಮನರ ಕೂಡ ಯುದ್ಧ ಮಾಡುವರೊ', 'ಮುಟ್ಟಿತಟ್ಟಿ ಎನ್ನುವರಿಗೆ ಮೆಟ್ಟಲಿ ಹೊಡೆಯವರೊ' ಎಂಬಿತ್ಯಾದಿ ದೇಶಭಕ್ತಿಯಿಂದ ಕೂಡಿದ ಹಲವಾರು ಉಕ್ತಿಗಳನ್ನು ಕಾಣಬಹುದಾಗಿದೆ.

ರಾಜಕೀಯ ವಿಷಯವಾಗಿಯೂ ಗವಾಯಿಗಳು ಹಲವು ಹಾಡುಗಳನ್ನು ರಚಿಸಿದ್ದಾರೆ. ಗಾಂಧೀಜಿ–ಅಂಬೇಡ್ಕರರ ಮಧ್ಯೆಯಿದ್ದ ರಾಜಕೀಯ ಭಿನ್ನಾಭಿಪ್ರಾಯಗಳು, ರಾಜಕೀಯ ಪಕ್ಷ ಮತ್ತು ನಾಯಕರ ಕುರಿತ ಪ್ರತಿಕ್ರಿಯೆಗಳು ಗವಾಯಿಗಳ ಹಾಡುಗಳಲ್ಲಿ ಸೇರಿವೆ. ಗಾಂಧೀಜಿಯವರು ಅಸ್ಪೃಶ್ಯರನ್ನು ಹರಿಜನರೆಂದು ಕರೆದಾಗ, ಅಂಬೇಡ್ಕರರು ಆ 'ಹರಿಜನ' ಎಂಬ ಪದವನ್ನು ವಿರೋಧಿಸಿದ್ದರು. ಅದನ್ನು ಗವಾಯಿಗಳು ತಮ್ಮ ಹಾಡಿನಲ್ಲಿ ಹೀಗೆ ಹೇಳಿದ್ದಾರೆ;

ಗಾಂಧೀ ಅಂದ ಹರಿಜನ
ದಾದಾ ಕೇಳಿ ಈ ವಚನ
ನಾವು ಹರಿ ಮಕ್ಕಳಾದರೆ
ನೀ ಯಾರ ಮಗನ?

ಅಸ್ಪೃಶ್ಯರನ್ನೇ ಏಕೆ ಹರಿಜನರೆಂದು ಕರೆಯಬೇಕು ಎಂದು ಪ್ರಶ್ನಿಸಿ, ದಿಕ್ಕಿಲ್ಲದ ಅನಾಥರನ್ನು ಹರಿಜನರೆಂದು ಕರೆದುದಕ್ಕೆ ಗವಾಯಿಗಳು ವಿರೋಧ ವ್ಯಕ್ತಪಡಿಸಿದ್ದಾರೆ. ಅವರ ಇನ್ನೊಂದು ಹಾಡಿನಲ್ಲಿ;

ಒಂದೇ ಸಮಾಜ ಮಾಡತೀನಂದ
ಗಾಂಧೀ ಹಿಂದೂಸ್ಥಾನಕೋ
ಹರಿಜನೆಂದು ಹೆಸರನಿಟ್ಟ
ಜಾತಿ ಗುರುತ ಸಿಗುವುದಕೊ
ತನ್ನ ಪಕ್ಷದ ಚರಖಾ ಇಟ್ಟ ತಿರಂಗಿ ಧ್ವಜಕೊ
ಪಾಕಿಸ್ತಾನ ಪಂಗಡ ಮಾಡದ
ಜಗಳವಾಡಿ ಸಾಯೋದಕೊ

ಎಂದು ಹೇಳಿದ್ದಾರೆ. ಹರಿಜನರೆಂದು ಗಾಂಧೀಜಿ ಕರೆದದ್ದು ಅಸ್ಪೃಶ್ಯರ ಜಾತಿಯ ಐಡೆಂಟಿಟಿಗೆಂಬ ಗ್ರಹಿಕೆ ಇಲ್ಲಿಯದು. ಅಲ್ಲದೆ ನಾಥೂರಾಮ ಗೂಡ್ಸೆ ಗಾಂಧೀಜಿಯವರನ್ನು ಕೊಂದ ಘಟನೆಯು ಅವರ ಕವಿಯಲ್ಲಿ ಬರುತ್ತದೆ.

ರಾಜಕಾರಣಿಗಳು ಮತ್ತು ರಾಜಕೀಯ ಪಕ್ಷಗಳ ಸ್ವಾರ್ಥ ಸಾಧನೆಯ ಬಗ್ಗೆ ಕಾಶೀನಾಥ ಗವಾಯಿಗಳ ಕವಿತೆಗಳಲ್ಲಿ ಆಕ್ರೋಶ ವ್ಯಕ್ತವಾಗಿದೆ. ಅಂದಿನ ಕಾಲದಲ್ಲಿ ಕಾಂಗ್ರೆಸ್ ಪಕ್ಷ ಮತ್ತು ಅದರ ನಾಯಕರೇ ಭಾರತವನ್ನು ಆಳುತ್ತಿದ್ದರು. ಅವರನ್ನು ಕುರಿತ ಗವಾಯಿಗಳ ನಿಲುವು ಕಠೋರವಾಗಿತ್ತು.

ಕಾಂಗ್ರೆಸ್ಸಿನವರು ಬಾಯಿಲೆ ಅಂತಾರ ಭಾರತವೆಲ್ಲ ಒಂದು
ಹೊಟ್ಟಾಗಿನ ಕೆಟ್ಟಗುಣ ಬಿಟ್ಟಿಲ್ಲಪ್ಪ ಒಂದು

ಎಂದು ಕಾಂಗ್ರೆಸ್ ಪಕ್ಷದ ವಿರುದ್ಧ ಕಿಡಿಕಾರಿದ್ದಾರೆ.

ಕಾಂಗ್ರೆಸ್ ಪಾರ್ಟಿಗೆ ನಿಂತಾರೊ ಎಂ.ಪಿ. ಎಮ್.ಎಲ್.ಎ. ಅಂತ
ಇಂಗ್ಲಿಷನೊಳಗೆ ಪತ್ರ ಬಂದರೆ ಕಾಲೇಜ ಹುಡುಗನಿಗೆ ತೋರಿಸುವ
ಪಾರ್ಲಿಮೆಂಟ ಮೀಟಿಂಗದೊಳಗೆ ಕ್ವಾಡಗಾಗಿ ಕುಂತ

ಎಂದು ದಡ್ಡ ಲೀಡರುಗಳ ಕುರಿತು ವ್ಯಂಗ್ಯವಾಡಿದ್ದಾರೆ.

ಸಮಕಾಲೀನ ರಾಜಕೀಯ ಘಟನಾವಳಿಗೂ ಕಾಶೀನಾಥ ಗವಾಯಿಗಳು ಸ್ಪಂದಿಸಿದ್ದಾರೆ. ರಾಮ ಮಂದಿರ - ಬಾಬ್ರಿ ಮಜ್ಜಿದ ವಿವಾದದ ಬಗ್ಗೆ ಪ್ರಗತಿಪರವಾದ, ಆರೋಗ್ಯಕರ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. 'ಬಡ ರಾಮಣ್ಣನಿಗೊಂದ ಮನಿಯಿಲ್ಲ, ರಾಮ ಮಂದಿರ ಕಟ್ಟುವರೊ' ಎಂದು ಹೇಳಿ ರಾಮಮಂದಿರಕ್ಕಿಂತಲೂ ತುರ್ತಾಗಿ ಬೇಕಾಗಿರುವುದು ಬಡವರಿಗೆ ನಿವೇಶನ ಎಂದು ಪ್ರತಿಪಾದಿಸಿದ್ದಾರೆ.

ವಿ.ಪಿ. ಸಿಂಗ್ ಸರ್ಕಾರ ಜಾರಿಗೆ ತಂದ ಮಂಡಲ ವರದಿಯ ಬಗ್ಗೆ ಮೆಚ್ಚುಗೆ ಗವಾಯಿಗಳ ಹಾಡಿನಲ್ಲಿದೆ. ವಿ.ಪಿ. ಸಿಂಗರ ಮಂಡಲ್ ವರದಿ ಜಾರಿ, ಪ್ರಕಾಶ ಅಂಬೇಡ್ಕರರಿಗೆ ರಾಜ್ಯ ಸಭಾ ಸದಸ್ಯತ್ವ, ಬೌದ್ಧರಿಗೆ ಸವಲತ್ತು. ಮುಂತಾದ ಕಾರ್ಯಗಳ ಪ್ರಶಂಸೆ ಕಾಶೀನಾಥ ಗವಾಯಿಗಳ ಕವಿತೆಯಲ್ಲಿ ಕಾಣಬಹುದಾಗಿದೆ.

ವಿ.ಪಿ. ಸಿಂಗ್ ಸರ್ಕಾರದವರೊ ನೀತಿ ನ್ಯಾಯದಿಂದ ನಡೆದಾರೊ
ಭಾರತ ಬಡವರಿಗಾಗಿ ಮೀಸಲಾತಿ ಹಕ್ಕು ಇಡಸಿದರೋ
ರೈತ ಕೂಲಿಕಾರ ಬಡವರ ಸಾಲ ಮನ್ನಾ ಮಾಡಿದರೊ
ಒಂದು ರೂಪಾಯಿ ನಾಣ್ಯದ ಮೇಲೆ ಅಂಬೇಡ್ಕರರ ಭಾವಚಿತ್ರ ಮುದ್ರಿಸಿದರು
ಬಾದಾಗ ಭಾರತ ರತ್ನ ಭವ್ಯ ಪದವಿ ಘೋಷಿಸಿದರೊ

ಹೀಗೆ ವಿ.ಪಿ. ಸಿಂಗ್ ಸರ್ಕಾರದ ಒಂದೊಂದೇ ಸಾಧನೆಗಳನ್ನು ಪಟ್ಟಿ ಮಾಡಿ, ಅವುಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಭಾರತದ ಇಂದಿನ ಭ್ರಷ್ಟ ರಾಜಕೀಯ ವ್ಯವಸ್ಥೆಗೆ, ಇಂದಿನ ದುರ್ಗತಿಗೆ, ರಾಜಕಾರಣಿಗಳೇ ಕಾರಣವೆಂದು ಹೇಳಿ, ಗಾವಾಯಿಗಳು ಅಂಥವರನ್ನು ಮುಠ್ಠಾಳರೆಂದು ಜರೆದಿದ್ದಾರೆ.

ದಡ್ಡ ಯಡ್ಡ, ಮುಠ್ಠಾಳ ಮಂದಿ ಲೀಡರಾಗಿ ಬಂದಾರೊ
ಭಾರತಕೆ ಇಲ್ಲದ ಬಡತನ ಇವರೇ ತಂದುಕೊಂಡರೊ
ಖೂಬ್ ತಿಂದು ಕಾರಿನೊಳಗೆ ಮೆರಿತಾರೊ ಕ್ವಾಣೆನ್ಹಂಗ

ರಾಜಕಾರಣಿಗಳನ್ನು ಮತ್ತು ರಾಜಕೀಯ ಪಕ್ಷಗಳನ್ನು ಮುಲಾಜಿಲ್ಲದೆ ಟೀಕಿಸುವ ಗವಾಯಿಗಳು, ಅಂಬೇಡ್ಕರ ಸ್ಥಾಪಿಸಿದ ಆರ್.ಪಿ.ಐ. ಪಕ್ಷವನ್ನು ಸಮರ್ಥಿಸಿ, ಪ್ರಚಾರ ಗೀತೆಯನ್ನು ಬರೆದಿದ್ದಾರೆ.

ಕಾಂಗ್ರೆಸ್ ಪಾರ್ಟಿಗಳಿಗೆ ಠೋಕರಲಿಂದ ಹೊಡೆಯಿರಿ
ರಿಪಬ್ಲಿಕನ್ ಪಾರ್ಟಿಗೆ ಮತವನ್ನು ನೀಡರಿ
ಹಿಲಾಲಪೂರ ಧರಿತ ಸಂಗೀತೊ ಕಾಶೀನಾಥ
ಒಂದಾಗಿ ಸರಿಯಾಗಿ ನಡಸಾರೀ ಭಾರತ

ದಲಿತ ಕವಿಗಳಾಗಲಿ, ದಲಿತೇತರ ಕವಿಗಳಾಗಲಿ, ಕನ್ನಡದಲ್ಲಿ ಯಾರೂ ಅಂಬೇಡ್ಕರ ಪಕ್ಷವನ್ನು ಸಮರ್ಥಿಸಿ, ಕವಿತೆ ಬರೆದ ಉದಾಹರಣೆಗಳಿಲ್ಲ. ಈ ವಿಷಯದಲ್ಲಿ ಕಾಶೀನಾಥ ಗವಾಯಿಗಳೇ ಮೊದಲಿಗರು. ಇಂದಿನ ನಮ್ಮ ದಲಿತ ಕವಿಗಳು ತಮಗೆ ರಾಜಕೀಯ ಅಧಿಕಾರ ಕೊಟ್ಟ ಪಕ್ಷಗಳ ಪರವಾಗಿ ಚುನಾವಣೆಯಲ್ಲಿ ಪ್ರಚಾರ ಗೀತೆಗಳನ್ನು ಬರೆದುಕೊಟ್ಟು, ಪಕ್ಷಾಶ್ರಯ ಕವಿಗಳಾಗುತ್ತಿರುವುದನ್ನು ನೋಡಿದರೆ, ಗವಾಯಿಗಳು ನಮಗೆ ಶ್ರೇಷ್ಠರಾಗಿ ಕಾಣುತ್ತಾರೆ. ದಲಿತರ ಬಗ್ಗೆ, ಅಂಬೇಡ್ಕರರ ತತ್ವ ಸಿದ್ಧಾಂತಗಳ ಬಗ್ಗೆ ಅವರಿಗಿದ್ದ ಬದ್ಧತೆ ಎದ್ದು ಕಾಣುತ್ತದೆ.

### ಕಥನ ಗೀತೆಗಳು

ಕಾಶೀನಾಥ ಗವಾಯಿಗಳು ಎರಡು ಕಥನ ಗೀತೆಗಳನ್ನು ರಚಿಸಿದ್ದಾರೆ. ಒಂದು

ಮುಲ್ಲ-ಮಠಪತಿ, ಇನ್ನೊಂದು ಚೋಕಾ ಮೇಳಾ. ಮುಲ್ಲಾ-ಮಠಪತಿ ಗವಾಯಿಗಳ ಸೃಜನಶೀಲ ಪ್ರತಿಭೆಯಿಂದ ರಚನೆಯಾದ ಸ್ವತಂತ್ರ ಕೃತಿಯಾದರೆ, ಚೋಕಮೇಳಾ ಸಿದ್ಧವಸ್ತುವುಳ್ಳದು. ಇವುಗಳಲ್ಲಿ ಪ್ರಸಿದ್ಧವಾದುದು ಮುಲ್ಲಾ-ಮಠಪತಿ. ಕಥಾವಸ್ತು, ಕಲ್ಪನಾ ಶಕ್ತಿ, ನಿರೂಪಣೆ ಹಾಗೂ ಧೋರಣೆ ದೃಷ್ಟಿಯಿಂದ ಇದು ಗಮನ ಸೆಳೆಯುತ್ತದೆ. ಅದರ ಕಥಾ ವಸ್ತು ಹೀಗಿದೆ; ಮುಲ್ಲಾ-ಮಠಪತಿ ಬಹಳ ವರ್ಷಗಳಿಂದ ಗೆಳೆಯರಾಗಿದ್ದರು. ಸಾಹುಕಾರರಾದ ಇವರು ಊರಲ್ಲಿ ಹೊಲ ಮನಿ ನೋಡಿ ಸಾಲ ಕೊಡುತ್ತಿದ್ದರು. ಅವರಿಬ್ಬರೂ ಹೆಣ್ಣಿನ ಚಪಲವುಳ್ಳವರಾಗಿದ್ದರು ಮತ್ತು ಊರ ಬಡ ಹೆಣ್ಣಮಕ್ಕಳ ಮೇಲೆ ಕಣ್ಣಿಡುತ್ತಿದ್ದರು. ಹೊಲಗೇರಿಯಲ್ಲಿ ಓದಿದ ಸುಂದರ ಚೆಲುವೆ ಇದ್ದಳು. ಅವಳು ಗಂಡುಳ್ಳ ಗರತಿ. ಆಕೆಯ ಮೇಲೆ ಮಲ್ಲಾ-ಮಠಪತಿಯರ ದೃಷ್ಟಿ ಬಿತ್ತು. ಅವಳನ್ನು ಹೇಗಾದರೂ ಮಾಡಿ ವಲಿಸಿಕೊಳ್ಳಬೇಕೆಂದು ಮಲ್ಲಾ-ಮಠಪತಿಯರು ಅವಳ ಮನೆಯ ಸುತ್ತ ಸುತ್ತ ತೊಡಗಿದರು. ಇವರ ಮನಸ್ಸನ್ನು ತಿಳಿದ ಆ ಚಲುವೆ ಅವರಿಬ್ಬರಿಗೂ ಬುದ್ಧಿ ಕಲಿಸಬೇಕೆಂದು ನಿರ್ಧರಿಸಿ, ಒಂದು ದಿನ ಅವರನ್ನು ಕರೆದು ಹೀಗೆ ಹೇಳಿದಳು; ಆರು ತಿಂಗಳಿಂದಲೂ ನನಗೆ ನಿಮ್ಮದೇ ಧ್ಯಾನ. ಈ ದಿನ ಸಂಜೆ ಮನೆಯ ಕಡೆಗೆ ಬನ್ನಿ. ಮುಲ್ಲಾ-ಮಠಪತಿಯರು ಖುಷಿಯಿಂದ ರಾತ್ರಿ ಆ ಚೆಲುವೆಯ ಮನೆಗೆ ಬಂದಾಗ, ಬಾಗಿಲ ಕದ ಹಾಕಲಾಗಿತ್ತು. ಅವರು ಹೊರಬಾಗಿಲಲ್ಲಿ ನಿಂತು ಸನ್ನಿ ಮಾಡಿ ಬಾಗಿಲ ಕದ ತೆಗೆಯಲು ಕೇಳುತ್ತಾರೆ. ಒಳಗಿದ್ದ ಆಕೆ ನೀವು ಯಾರೆಂದು ಈ ರಾತ್ರಿಯಲ್ಲಿ ಗುರುತು ಸಿಗುತ್ತಿಲ್ಲ. ನಿಮ್ಮ ಗುರುತು ತೋರಿಸಿದರೆ, ಬಾಗಿಲು ಕದ ತೆರೆದು ಒಳಗೆ ಕರೆದುಕೊಳ್ಳುತ್ತೇನೆಂದು ಆ ಚೆಲುವೆ ನುಡಿದಳು. ಆಗ ಮುಲ್ಲಾ ಕದದ ಸಂದಿನಿಂದ ಗಡ್ಡದ ಗುರುತು ತೋರಿಸಿದ. ಮಠಪತಿ ಲಿಂಗದ ಗುರುತು ತೋರಿಸಿದ. ಆವಾಗ ಆ ಚೆಲುವೆ ಗಡ್ಡ-ಲಿಂಗಕ್ಕೆ ಗಂಟು ಹಾಕಿ ನಡುವೆ ಬೀಸುವ ಕಲ್ಲಿನ ಗೂಟವನ್ನು ಸಿಕ್ಕಿಸುತ್ತಾಳೆ. ಮುಲ್ಲಾ-ಮಠಪತಿಯರು ಇಡೀ ರಾತ್ರಿಯೆಲ್ಲ ಯಾತನೆಯಿಂದ ಒದ್ದಾಡುತ್ತಾರೆ; ಜನ ಅವರಿಗೆ ದಂಡ ವಿಧಿಸಿ, ಹೀನ ಶಿಕ್ಷೆಗೆ ಗುರಿಪಡಿಸುತ್ತಾರೆ. ಕೊನೆಗೆ 'ಪರನಾರಿಯರು ಬೇಕೆಂದು ಕೆಡಬ್ಯಾಡರಿ ಜನತಾ, ಎಲ್ಲ ನಾರಿಯರಲ್ಲಿ ಒಂದೇ ದ್ವಾರ ಐತಾ' ಎಂಬ ನೀತಿ ಸಂದೇಶದೊಂದಿಗೆ 'ಮುಲ್ಲಾ-ಮಠಪತಿ' ಕಥನಗೀತೆ ಕೊನೆಗೊಳ್ಳುತ್ತದೆ.

ಮುಲ್ಲಾ-ಪಠಪತಿ ಕಥನಗೀತೆ ಸರಳ ಹಾಗೂ ನೇರವಾಗಿದೆ. ಸನ್ನಿವೇಶ ಹಾಗೂ ದೃಶ್ಯಗಳು ಕಣ್ಣಿಗೆ ಕಟ್ಟುತ್ತವೆ. ಗೀತೆಯ ಆರಂಭದಲ್ಲಿ ಮುಲ್ಲಾ ಮಠಪತಿಯ ಗೆಳೆತನದ ಚಿತ್ರಣವಿದೆ.

ಮುಲ್ಲಾ-ಮಠಪತಿ ಮಿತ್ರರು ಜೊತಿ
ಭಾಳ ದಿನಗಳಿಂದ ಅವರು ಕೂಡ್ಯೆತಿ
ಮುಲ್ಲಾನ ಮಾರಿಮ್ಯಾಲ ಮಳಾಗಡ್ಡ ಭರ್ತಿ
ಮಠಪತಿ ಹಣಿತುಂಬ ವಿಭೂತಿ

ಮುಂದೆ ಹೊಲಗೇರಿ ಚೆಲುವೆಯ ಸೌಂದರ್ಯದ ವರ್ಣನೆ ಬರುತ್ತದೆ. ಈ ವರ್ಣನೆಯು ಪ್ರಾಚೀನ ಸಂಸ್ಕೃತ ಕವಿಗಳು ಮಾಡಿದ ಹೆಣ್ಣಿನ ವರ್ಣನೆಯ ರೀತಿಯಲ್ಲಿಯೇ

ಇದ್ದರೂ, ಸೌಂದರ್ಯವನ್ನೇ ಕಾಣದ ಅಂಧಕವಿಯೊಬ್ಬನ ಸೌಂದರ್ಯ ಕಲ್ಪನೆ ಆಶ್ಚರ್ಯ ಮೂಡಿಸುತ್ತದೆ. ಕಾಶೀನಾಥ ಗವಾಯಿಗಳು ತಮ್ಮ ಈ ಕಥನಗೀತೆಯಲ್ಲಿ ಸುಂದರ ಚೆಲುವೆಯ ಪ್ರತಿಮೆಯನ್ನೇ ಕಟೆದು ನಿಲ್ಲಿಸಿದ್ದಾರೆ.

ಹೊಲಗೇರಿದೊಳಗ ಇದ್ದಾಳೊ ಹೆಣ್ಣ
ಹೆಣ್ಣಿನ ಬಣ್ಣ ಬಂಗಾರದ ವರ್ಣ
ತುಟಿಯ ನೋಡಿದರ ತೊಂಡಿಯ ಹಣ್ಣ
ಹಲ್ಲು ಗಲ್ಲ ದಾಳಿಂಬಿಯ ಬಣ್ಣ
ಎದಿ ಮೇಲೆ ಕುಚಗಳು ಬೆಲ್ಲಪತ್ರಿ ವರ್ಣ
ಮೂಗು ಸಂಪಿಗೆತೆನಿ ಬಂಗಾರ ಕಿರಣ
ಕೈಕಾಲ ಬೆರಳ ಉಗುರ ಬಹಳ ಸಣ್ಣ
ನಿಂಬೆ ಹಣ್ಣ ಹೋಳಿನ ಪರಿ ಕಣ್ಣ...
ರೂಪದಲ್ಲಿ ಬೆಳದಿಂಗಳ ಗತಿ
ಥಳ ಥಳ ಹೊಳೆವ ಕಳೆಯುಳ್ಳ ಕಾಂತಿ

ಇಂತಹ ಅನುಪಮ ಚೆಲುವನ್ನು ಕಂಡೇ ಮುಲ್ಲಾ–ಮಠಪತಿಯ ಮನಸ್ಸು ಹುಚ್ಚಾಗಿದೆ. ಆದರೆ ಅವಳು ಗಂಡುಳ್ಳ ಗರತಿ; ಓದಿದ ಯುವತಿ. ಅಂತೆಯೇ ಮುಲ್ಲಾ–ಮಠಪತಿಗೆ ಪಾಠ ಕಲಿಸಲು ಮುಂದಾಗುತ್ತಾಳೆ. 'ಇಪತ್ತೇ ಬರ‍್ರೀ ನೀವು ಸಂಜಿಯ ಮುಂದಾ' ಎಂದು ಅವರನ್ನು ಕರೆಯುತ್ತಾಳೆ, ಆಗ ಮುಲ್ಲಾ–ಮಠಪತಿಗಳಿಗಾದ ಖುಷಿ ಎಂಥದ್ದು?

ಮುಲ್ಲಾ–ಮಠಪತಿ ಖುಷಿ ಆಗಿ ಆನಂದ
ಕುಣಿದಾಡ್ತಾರ ಮಠ ಮಸೀದಿ ಮುಂದಾ

ಅಷ್ಟೇ ಅಲ್ಲ, ಇಂದು ಯಾಕೋ ಬೇಗ ಹೊತ್ತು ಹೋಗುತ್ತಿಲ್ಲವೆಂಬ ಭಾವನೆ ಅವರಿಗೆ ಬರುತ್ತದೆ. ಬಾಗಿಲ ಕದ ಹಾಕಿ ಒಳಗಿದ್ದ ಚೆಲುವೆ ಮುಲ್ಲಾ-ಮಠಪತಿಗೆ ಏನಾದರೂ ನಿಮ್ಮ ಗುರುತು ತೋರಿಸಿದರೆ, ನಾನು ನಿಮ್ಮನ್ನು ಒಳಗೆ ಕರೆದುಕೊಳ್ಳುತ್ತೇನೆಂದು, ಉಪಾಯದಿಂದ ಅವರಿಬ್ಬರನ್ನೂ ಹಿಡಿಯುವ ಸನ್ನಿವೇಶ ಹೀಗಿದೆ.

ಏನಾರ ನಿಮ್ಮ ಖೂನಾ ತೋರಿಸಿರಿ ನನಗ
ಗುರುತ್ಹಿಡಿದು ಕರಕೋತೀನಿ ಒಳಗ

ತಟ್ಟ ಸಂದಿಯಂದು ಮುಲ್ಲಾ ಗಡ್ಡಾನೇ ಕೊಟ್ಟ
ದಡ್ಡ ಐನೋರ ಖೂನಾ ಲಿಂಗಾನೇ ಬಿಟ್ಟ
ಗಡ್ಡ–ಲಿಂಗಕ್ಕೆ ಹಾಕ್ಯಾಳೊ ಗಂಟ
ನಡು ಸಿಗಸ್ಯಾಳೊ ಬೀಸಕಲ್ಲ ಗೂಟ

ಆಗ ಮಠಪತಿ ಯಾತನೆ ತಾಳಲಾರದೆ 'ನಾ ಮಾತ್ರ ಸಾಯಿತೀನಿ ಎಂಥ ಮುಷ್ಕಿಲ್ ಬಂತಾ' ಎಂದರೆ, ಮುಲ್ಲಾ 'ಅಲ್ಲಾ ಅಲ್ಲಾ ಎ ಕ್ಯಾಹುವೆರೆ ಬಾತಾ' ಎಂದು ದುಃಖಿಸುತ್ತಾನೆ.

ಕಾಶೀನಾಥ ಗವಾಯಿಗಳ ಇನ್ನೊಂದು ಕಥನಗೀತೆ ಚೋಕಾಮೇಳಾ. ಮಹಾರಾಷ್ಟ್ರದ ಪಂಡರಾಪೂರ ವಿಠ್ಠಲನ ಭಕ್ತನಾದ ಚೋಕಾಮೇಳಾ ಒಬ್ಬ ದಲಿತ ಸಂತ. ಇಂದಿಗೂ ಪಂಡರಾಪೂರಧ ವಿಠ್ಠಲನ ಮಂದಿರದ ಎದುರುಗಡೆ ಚೋಕಾಮೇಳಾನ ದೇವಾಲಯವಿದೆ.

ವಿಠ್ಠಲನ ಪರಮಭಕ್ತನಾದರೂ ಅಸ್ಪೃಶ್ಯನೆಂಬ ಕಾರಣಕ್ಕಾಗಿ ಬ್ರಾಹ್ಮಣರಿಂದ ಚೋಕಾಮೇಳಾ ಅನುಭವಿಸಿದ ತೊಂದರೆ ಹಾಗೂ ಅವನ ಬದುಕಿನ ವೃತ್ತಾಂತವನ್ನು ಚೋಕಾಮೇಳಾ ಕಥನಗೀತೆ ಕಟ್ಟಿಕೊಡುತ್ತದೆ.

> ಚೋಕಾ ಮೇಳಾ ಭಕ್ತ ನಿರಾಳ
> ದಯಾ ಮಾಯಾ ನೀ ಜಗಪಾಳಾ
> ನಿನ್ನ ಮನಸ್ಸು ಬಹಳ ದಯಾಳ

ಎಂದು ಚೋಕಾ ಮೇಳಾನ ವ್ಯಕ್ತಿತ್ವ ಚಿತ್ರಣದೊಂದಿಗೆ ಆರಂಭವಾಗುವ ಗೀತೆ, ಚೋಕಾಮೇಳಾನ ಭಕ್ತಿ, ಉಚ್ಚವರ್ಗದವರಿಂದ ಅವನು ಅನುಭವಿಸಿದ ನೋವು ಮತ್ತು ಸಾವನ್ನು ಹೇಳುತ್ತದೆ. ಚೋಕಾಮೇಳಾನ ನಿಜಚರಿತ್ರೆಯನ್ನು ಮೊದಲು ಶೋಧಿಸಿ ತೆಗೆದವರು ಅಂಬೇಡ್ಕರರು ಎಂಬ ವಿಚಾರವೂ ಈ ಗೀತೆಯಲ್ಲಿ ಬಂದಿದೆ. ಚೋಕಾಮೇಳಾ ಇದೊಂದು ವ್ಯಕ್ತಿ ಕಥನ ಗೀತೆ. ಕನ್ನಡದ ಬೇರೆ ಯಾವ ಕವಿಯ ಕಾವ್ಯಕ್ಕೂ ಚೋಕಾಮೇಳಾ ವಿಷಯ ವಸ್ತುವಾದಂತೆ ತೋರುವುದಿಲ್ಲ. ಪ್ರಾಯಶಃ ಚೋಕಾಮೇಳಾನನ್ನು ಕುರಿತು ಗೀತೆ ಬರೆದ ಕನ್ನಡದ ಮೊದಲ ಹಾಗೂ ಏಕೈಕ ಕವಿ ಕಾಶೀನಾಥ ಗವಾಯಿ.

## ಸಮಾರೋಪ

ಕಾಶೀನಾಥ ಪಂಚಶೀಲ ಗವಾಯಿಗಳು ಹೈದ್ರಾಬಾದ ಕರ್ನಾಟಕದ ಹಿರಿಯ ತತ್ವಪದಕಾರರಲ್ಲಿ ಒಬ್ಬರಾಗಿದ್ದಾರೆ. ಹಿಲಾಲಪೂರದಂತಹ ಕುಗ್ರಾಮದ ಬಡದಲಿತ ಕುಟುಂಬದಲ್ಲಿ ಜನಿಸಿ, ತಮ್ಮ ಕಾವ್ಯ, ಗಾಯಕ, ಸಂಗೀತ ಪ್ರತಿಭೆಯ ಮೂಲಕ ನಾಡಿನ ಗಮನ ಸೆಳೆದರು. ಬಡತನ, ಅಸ್ಪೃಶ್ಯನೆಂಬ ಅವಮಾನ ಹಾಗೂ ಅಂಧತನ ಅವರ ಸಾಧನೆಗೆ ಅಡ್ಡಿ ಬರಲಿಲ್ಲ. ಅವುಗಳೆಲ್ಲವನ್ನು ಒಂದು ಸವಾಲಾಗಿ ಸ್ವೀಕರಿಸಿ ಸಮಾಜದಲ್ಲಿ ಬಹುದೊಡ್ಡ ಹೆಸರನ್ನು ಸಂಪಾದಿಸಿದರು. ದಲಿತರಂತೂ ಅವರನ್ನು ಅತ್ಯಂತ ಗೌರವ ಹಾಗೂ ಅಭಿಮಾನದಿಂದ ಕಂಡರು.

೫೦, ೬೦, ಹಾಗೂ ೭೦ರ ದಶಕದಲ್ಲಿ ದಲಿತರು ಮರಗೆಮ್ಮಾ, ಅಂಬಾಬಾಯಿ ಇತ್ಯಾದಿ ದೇವರುಗಳನ್ನು ನಂಬಿಕೊಂಡು ಬದುಕುತ್ತಿದ್ದರು. ಅವರಿಗೆ ಅಂಬೇಡ್ಕರ ಮತ್ತು ಅವರ ತತ್ವಸಿದ್ಧಾಂತಗಳು ಅಷ್ಟಾಗಿ ಗೊತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ಅಂಬೇಡ್ಕರ ಮತ್ತು ಬುದ್ಧರ ಜೀವನ ಹಾಗೂ ಸಂದೇಶಗಳುಳ್ಳ ಹಾಡುಗಳನ್ನು ಜನಪ್ರಿಯ ರಾಗದಲ್ಲಿ ರಚಿಸಿ, ಹಾಡಿ, ಪ್ರಚಾರ ಮಾಡಿ ಅವುಗಳನ್ನು ದಲಿತರ ಮನೆ ಮನೆಗೆ ತಲುಪುವಂತೆ ಮಾಡಿದರು. ಈ ಕಾರಣಕ್ಕಾಗಿಯೇ ಅವರು ಹೈದ್ರಾಬಾದ ಕರ್ನಾಟಕದ ತುಂಬೆಲ್ಲ ಸಂಚರಿಸಿದರು. ಹೋದಲ್ಲೆಲ್ಲ ಬುದ್ಧ-ಬಸವ-ಅಂಬೇಡ್ಕರರನ್ನು ಕುರಿತು ಹಾಡಿದರು. ಅಸ್ಪೃಶ್ಯತೆಯ ಆಚರಣೆ, ದಲಿತರ ಶೋಷಣೆ ಹಾಗೂ ಧಾರ್ಮಿಕ ಕಂದಾಚಾರಗಳ ವಿರುದ್ಧ ತಮ್ಮ ಹಾಡುಗಳ ಮೂಲಕ ದೊಡ್ಡ ಬಂಡಾಯವನ್ನೇ ಸಾರಿದರು. ಇದಕ್ಕಾಗಿ ಅವರು ಸವರ್ಣೀಯರ ವಿರೋಧವನ್ನು ಕಟ್ಟಿಕೊಳ್ಳಬೇಕಾಯಿತು.

ಕಾಶೀನಾಥ ಗವಾಯಿಗಳು ಅಂಧರಾಗಿದ್ದರೂ ಅಪಾರವಾದ ಮನೋಬಲವುಳ್ಳವರಾಗಿದ್ದರು. ಕಣ್ಣುಳ್ಳ ದಲಿತರು ಅಜ್ಞಾನ, ಅಂಧಕಾರದಲ್ಲಿ ಮುಳುಗಿ ಹೋಗಿದ್ದ ಸಂದರ್ಭದಲ್ಲಿ

ಗವಾಯಿಗಳು ತಮ್ಮ ಅಂತರಂಗದ ಕಣ್ಣಿನಿಂದ, ಜ್ಞಾನದ ಬೆಳಕಿನಿಂದ ದಲಿತರ ಬದುಕನ್ನು ಬೆಳಗಿದರು. ದೇವತೆಗಳ ಮುಂದೆ ಕೋಣಬಲಿ ಕೊಟ್ಟ ಕಾರ್ಯಾಚರಣೆ ಮಾಡುವುದು, ದೇವಿ ಹೆಸರಿನ ಮೇಲೆ ನಡೆಯುವ ಬೆತ್ತಲೆ ಸೇವೆ, ದೇವದಾಸಿ ಪದ್ಧತಿ ಮುಂತಾದ ಅನಿಷ್ಟ ಧಾರ್ಮಿಕ ಆಚರಣೆಗಳಲ್ಲಿ ದಲಿತರನ್ನು ಶೋಷಣೆ ಮಾಡಲಾಗುತ್ತಿತ್ತು. ಅತ್ಯಂತ ಹೀನವಾಗಿ ಅಮಾನವೀಯವಾಗಿ ನಡೆಸಿಕೊಳ್ಳಲಾಗುತ್ತಿತ್ತು. ಇಂತಹ ಅನಿಷ್ಟ ಪದ್ಧತಿಯ ವಿರುದ್ಧ ಗವಾಯಿಗಳು ತಮ್ಮ ಹಾಡಿನ ಮೂಲಕ ಸಮರವನ್ನೇ ಸಾರಿದರು. ಅವುಗಳ ವಿರುದ್ಧ ದೀರ್ಘ ಹೋರಾಟ ಮಾಡಿ ದಲಿತ ಸಮುದಾಯದಲ್ಲಿ ಜಾಗೃತಿಯನ್ನುಂಟು ಮಾಡಿದರು. ಮೇಲ್ಜಾತಿಯವರು ಒಡ್ಡಿದ ಹಲ್ಲೆ, ಕೊಲೆ ಬೆದರಿಕೆಗಳನ್ನು ಎದುರಿಸಿದರು. ಆದರೆ ಎಂದೂ ತಮ್ಮ ಹೋರಾಟದಿಂದ ಹಿಂದೆ ಸರಿಯಲಿಲ್ಲ. ಕೊಡದೂರು, ಡಾಕುಳಗಿ, ದೇವಗಿರಿ ಕಾರ್ಯಗಳನ್ನು ನಿಲ್ಲಿಸಲು ಜೀವದ ಹಂಗು ತೊರೆದು ಹೋರಾಡಿದರು. ಹಲಚೇರಿಯ ಮೇಲ್ಜಾತಿಯವರು ಮಾಡಿದ ಕೊಲೆಯ ಯತ್ನಕ್ಕೂ ಹೆದರಲಿಲ್ಲ. ಸಾಮಾಜಿಕ ನ್ಯಾಯಕ್ಕಾಗಿ ಕೊಲೆ ಬೆದರಿಕೆ, ಹಲ್ಲೆಯನ್ನು ಎದುರಿಸಿ, ಒಬ್ಬ ಅಂಧ ಕವಿ ಈ ಪರಿಯ ಹೋರಾಟ ಮಾಡಿರುವುದು ಬಹುಶಃ ಕರ್ನಾಟಕದ ಇತಿಹಾಸದಲ್ಲಿ ಮತ್ತೊಂದು ಉದಾಹರಣೆ ಸಿಗಲಿಕ್ಕಿಲ್ಲ. ಇದು ದಲಿತರ ಸಾಮಾಜಿಕ ಪರಿವರ್ತನೆಯ ಇತಿಹಾಸದಲ್ಲಿ ದಾಖಲೆಯಾಗಬೇಕಾದ ಸಂಗತಿ. ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಗವಾಯಿಗಳು ೬೦ ರಿಂದ ೮೦ರ ದಶಕದವರೆಗೆ ಒಂದು ಸಾಮಾಜಿಕ ಕ್ರಾಂತಿಯನ್ನೇ ಹುಟ್ಟುಹಾಕಿದರು. ಇದು ಅವರ ದೊಡ್ಡ ಸಾಧನೆ.

ಕಾಶೀನಾಥ ಗವಾಯಿಗಳ ಪ್ರಯತ್ನದ ಫಲವಾಗಿ ದಲಿತರಲ್ಲಿ ಅಂಬೇಡ್ಕರ ಪ್ರಜ್ಞೆ ಮೂಡಿತು. ಅವರು ಜಾಗೃತರಾದರು. ದಲಿತರ, ಬಡವರ ಮಕ್ಕಳನ್ನು ಶಾಲೆ, ಹಾಸ್ಟೆಲ್‌ಗಳಿಗೆ ಸೇರಿಸುವಲ್ಲಿಯೂ ಗವಾಯಿಗಳು ಶ್ರಮಿಸಿದ್ದಾರೆ. ಅನೇಕ ಜನ ದಲಿತ ಶಿಕ್ಷಕರು, ಅಧಿಕಾರಿಗಳು ಕಾಶೀನಾಥ ಗವಾಯಿಗಳಿಂದ ಪ್ರೇರಿತರಾಗಿ ಸಂಪ್ರದಾಯ, ಮೂಢ ನಂಬಿಕೆಗಳನ್ನು ತೊರೆದು ವೈಚಾರಿಕತೆಯನ್ನು ಮೂಡಿಸಿಕೊಂಡ ಉದಾಹರಣೆಗಳೂ ಇವೆ. ಬೀದರ, ಹುಮನಾಬಾದ, ಹಳ್ಳಿಖೇಡ(ಬಿ)ಗಳಲ್ಲಿಯ ಅಂಬೇಡ್ಕರ ಮೂರ್ತಿ ಸ್ಥಾಪನೆಯಲ್ಲಿ ಗವಾಯಿಗಳ ಪಾತ್ರವೂ ಗಣನೀಯವಾಗಿದೆ. ಹುಮನಾಬಾದದ ಅಂಬೇಡ್ಕರ ಮೂರ್ತಿಸ್ಥಾಪನೆಗಾಗಿ ೬೫ ತಾಸಿನ ಉಪವಾಸ ಸತ್ಯಾಗ್ರಹವನ್ನು ಸಹ ಮಾಡಿದ್ದಾರೆ. ಮೂರ್ತಿಸ್ಥಾಪನೆಗಾಗಿ ಗವಾಯಿಗಳು ಮಾಡಿದ ಹೋರಾಟ ಪ್ರತ್ಯೇಕವಾದ ಅಧ್ಯಾಯವೇ ಆಗಬಹುದು. ತಮ್ಮ ಕುಟುಂಬ ಹಾಗೂ ವೈಯಕ್ತಿಕ ಹಿತಾಸಕ್ತಿಗಿಂತಲೂ ಸಾಮಾಜಿಕ ಹಿತಾಸಕ್ತಿಗೆ ಹೆಚ್ಚು ಮಹತ್ವ ಕೊಟ್ಟರು. ಈ ಕಾರಣಕ್ಕಾಗಿ ಅವರು ಅಭಿನಂದನಾರ್ಹರು.

ಕಾಶೀನಾಥ ಗವಾಯಿಗಳ ಸಾಹಿತ್ಯದ ಬಗ್ಗೆ ಒಂದೆರಡು ಮಾತು ಹೇಳಲೇಬೇಕು. ಅವರು ಬರೆದ ಹಾಡುಗಳು ಅತ್ಯಂತ ಜನಪ್ರಿಯವಾಗಿ ಜಾನಪದ ಗೀತೆಗಳಂತೆ ದಲಿತ ಸಮುದಾಯದ ನಾಲಿಗೆಯ ಮೇಲೆ ಉಳಿದುಕೊಂಡು ಬಂದಿವೆ. ಇಡೀ ರಾತ್ರಿಯವರೆಗೂ ಆಗುವಷ್ಟು ಗವಾಯಿಗಳ ಹಾಡುಗಳನ್ನು ಹಾಡುವ ಅನೇಕ ದಲಿತ ಗಾಯಕರು ಈ ಭಾಗದಲ್ಲಿ ಸಿಗುತ್ತಾರೆ. ಗವಾಯಿಗಳ ತತ್ವಪದಗಳು ಸಾಂಪ್ರದಾಯಿಕ ತತ್ವಪದಗಳಿಗಿಂತಲೂ

ಭಿನ್ನವಾಗಿವೆ. ಸಾಮಾನ್ಯವಾಗಿ ತತ್ವಪದಗಳು ಪಾರಮಾರ್ಥಿಕ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಾಗಿ ಇರುತ್ತವೆ. ಅಲ್ಲಿ ದೇಹ-ಜೀವ, ಆತ್ಮ ಪರಮಾತ್ಮನ ಚಿಂತನೆ ನಡೆಯುತ್ತದೆ. ಆದರೆ ಗವಾಯಿಗಳ ತತ್ವಪದಗಳು ಬುದ್ಧ-ಬಸವ-ಅಂಬೇಡ್ಕರರ ತತ್ವಸಿದ್ಧಾಂತ ಹಾಗೂ ಸಾಮಾಜಿಕ ಚಿಂತನೆಗಳನ್ನು ಒಳಗೊಂಡಿವೆ. ಗವಾಯಿಗಳಿಗೆ ಆತ್ಮ-ಪರಮಾತ್ಮಕ್ಕಿಂತಲೂ ಸಮಕಾಲೀನ ತುರ್ತಿನ ಸಮಸ್ಯೆಗಳು ಮುಖ್ಯವಾಗಿ ಕಂಡಿವೆ. ಅಂತೆಯೇ ಸಮಕಾಲೀನ ಸಮಸ್ಯೆಗಳನ್ನು ಕುರಿತು ತಮ್ಮ ತತ್ವಪದಗಳಲ್ಲಿ ಚಿಂತಿಸಿದ್ದಾರೆ. ಗವಾಯಿಗಳ ತತ್ವಪದಗಳು ಜನಸಮ್ಮುಖವಾಗಿವೆ; ಮತ್ತು ಜನಪರ ಕಾಳಜಿಯನ್ನು ಪ್ರಕಟಿಸುತ್ತವೆ. ಅಂತೆಯೇ ಅವು ಜನಪ್ರಿಯವೂ ಆಗಿವೆ.

ಗವಾಯಿಗಳ ಕಾವ್ಯ ಎಲ್ಲಿಯೂ ಚರ್ಚೆಯಾಗದೆ ಇರುವುದು ಗಮನಿಸಬೇಕಾದ ಅಂಶವಾಗಿದೆ. ೫೦, ೬೦ರ ದಶಕದಲ್ಲಿ ಗವಾಯಿಗಳು ಕಾವ್ಯ ರಚನೆಗೆ ತೊಡಗಿಸಿದರು. ಅವರ ಬುದ್ಧ ವಚನಾಮೃತ (೧೯೫೪), ಹಾಗೂ ಬುದ್ಧ-ಬಸವ-ಅಂಬೇಡ್ಕರ ತತ್ವಜ್ಞಾನ (೧೯೬೪) ಪ್ರಕಟವಾದವು. ಇವುಗಳ ಬಗ್ಗೆ ಯಾರೂ ಚರ್ಚೆಯಲ್ಲಿ ಉಲ್ಲೇಖ ಕೂಡ ಮಾಡಿರುವುದು ಕಂಡುಬರುವುದಿಲ್ಲ. ಕೊನೆಯ ಪಕ್ಷ ಬೀದರ ಜಿಲ್ಲೆಯ ಸಾಹಿತ್ಯ ಕುರಿತು ವಿಚಾರಿಸುವಾಗಲಾದರೂ ಗವಾಯಿಗಳ ಕಾವ್ಯ ಚರ್ಚೆಗೆ ತೆಗೆದುಕೊಳ್ಳಬಹುದಾಗಿತ್ತು. ಪ್ರಾಯಶಃ ಗವಾಯಿಗಳು ೧೯೫೪ರಲ್ಲಿ ಪ್ರಕಟಿಸಿದ 'ಬುದ್ಧ ವಚನಾಮೃತ'ವೇ ಬೀದರ ಜಿಲ್ಲೆಯ ಮೊದಲ ಕವನ ಸಂಕಲನವಾಗಿರಬೇಕು. ಇದನ್ನು ಕಡೆಗಣಿಸಿ ಇದಾದ ಅನೇಕ ವರ್ಷಗಳ ನಂತರ ಬಂದ ಬೇರೊಬ್ಬರ ಕೃತಿಯನ್ನು ಬೀದರ ಜಿಲ್ಲೆಯ ಮೊದಲ ಪ್ರಕಟಿತ ಕವನ ಸಂಕಲನವೆಂದು ದಾಖಲಿಸಿದ್ದಾರೆ. ಈ ತಪ್ಪನ್ನು ಗಮನಿಸಬೇಕು. ಕಾವ್ಯತತ್ವ, ಕಾವ್ಯಾಂಶದ ದೃಷ್ಟಿಯಿಂದ ಅಲ್ಲದಿದ್ದರೂ ಕಾಲದ ದೃಷ್ಟಿಯಿಂದಲಾದರೂ ಕಾಶೀನಾಥ ಗವಾಯಿಗಳಿಗೆ ಮಹತ್ವವಿದೆ. ೫೦ ಮತ್ತು ೬೦ ದಶಕ ಆಗಿನ್ನೂ ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲ, ನವ್ಯರ ಕಾಲ. ಆ ಕಾಲ ಘಟ್ಟದಲ್ಲಿ ಬೀದರ ಜಿಲ್ಲೆಯಲ್ಲಿ ಕಾವ್ಯ ರಚನೆ ಮಾಡುತ್ತಿದ್ದ, ಕೃತಿ ಪ್ರಕಟಿಸಿದ ಏಕೈಕ ಕವಿ ಬಹುಶಃ ಕಾಶೀನಾಥ ಗವಾಯಿಯವರೆ.

ಕಾವ್ಯ ತತ್ವ ಮತ್ತು ಸತ್ವದ ದೃಷ್ಟಿಯಿಂದ ಗವಾಯಿಗಳ ಹಾಡುಗಳನ್ನು ಪರಿಶೀಲಿಸಿದಾಗ ಅಲ್ಲಿ ಕಾವ್ಯಾಂಶದ ಕೊರತೆ ಎದ್ದು ಕಾಣುತ್ತದೆ. ವಿಚಾರಗಳೇ ಕಾವ್ಯವಾಗುವುದಿಲ್ಲ; ಬದಲಿಗೆ ಅದು ಒಳ್ಳೆಯ ಗದ್ಯವಾಗುತ್ತದೆ. ಕಾವ್ಯಕ್ಕೆ ತನ್ನದೇ ಆದ ಪರಿಭಾಷೆ ಇದೆ; ಅಭಿವ್ಯಕ್ತಿಯ ಕ್ರಮವಿದೆ. ಅದನ್ನು ಅರಿತು ಕಾವ್ಯದಲ್ಲಿ ಬಳಸಿಕೊಂಡರೆ, ಕಾವ್ಯ ಹೆಚ್ಚು ಸತ್ವಶಾಲಿಯಾಗುತ್ತದೆ. ಇಲ್ಲದಿದ್ದರೆ ವಾಚ್ಯವಾಗುತ್ತದೆ. ಗವಾಯಿಗಳ ಬಹಳಷ್ಟು ರಚನೆಗಳು ವಾಚ್ಯವಾಗಿಯೇ ಇವೆ. ಆದರೆ ಕೆಲವಾದರೂ ಕಾವ್ಯಸತ್ವದ ದೃಷ್ಟಿಯಿಂದ ಗಮನ ಸೆಳೆಯುತ್ತವೆ. ಗವಾಯಿಗಳಿಗೆ ತಮ್ಮ ಹಾಡುಗಳ ಮೂಲಕ ಜನರಲ್ಲಿ ವೈಚಾರಿಕತೆ ಮೂಡಿಸಬೇಕಾಗಿತ್ತು. ವೈಚಾರಿಕತೆಯನ್ನು ಪ್ರತಿಪಾದಿಸುವ ಕಾವ್ಯದಲ್ಲಿ ಕಾವ್ಯಾಂಶದ ಕೊರತೆ ಸಹಜ. ಗವಾಯಿಗಳ ಕವಿತೆಗಳಲ್ಲಿ ಬರುವ ವಾಚ್ಯ ಒಂದು ರೀತಿಯಲ್ಲಿ ಸಕಾರಾತ್ಮಕ ಅಂಶವೇ ಆಗಿ ಪರಿಣಮಿಸಿದೆ. ಆ ಕಾರಣಕ್ಕಾಗಿಯೇ ಕಾವ್ಯತತ್ವದ ತಿಳಿವಳಿಕೆ ಇಲ್ಲದ ಅನಕ್ಷರಸ್ಥ ದಲಿತ ಸಮುದಾಯಕ್ಕೆ ಅದು ನೇರವಾಗಿ ಮುಟ್ಟುವಲ್ಲಿ ಯಶಸ್ವಿಯಾಯಿತು.

ಕಾಶೀನಾಥ ಗವಾಯಿಗಳು ಹೆಚ್ಚು ಓದಿದವರಾಗಿರಲಿಲ್ಲ. ಅದಕ್ಕಾಗಿ ಅವರಲ್ಲಿ ಕೆಲವು ಮಿತಿಗಳೂ ಇದ್ದವು. ಅವರಿಗೆ ಲೋಕಾನುಭವವಿತ್ತೇ ಹೊರತು ನಮ್ಮ ಸಂಸ್ಕೃತಿ ಪರಂಪರೆ ಹಾಗೂ ಇತಿಹಾಸದ ಬಗ್ಗೆ ಸಂಪೂರ್ಣ ತಿಳಿವಳಿಕೆ, ಆಳವಾದ ಅಧ್ಯಯನ ಇರಲಿಲ್ಲ. ಈ ಮಿತಿಗಳನ್ನು ಅವರ ಹಾಡುಗಳಲ್ಲಿ ಗುರುತಿಸಬಹುದಾಗಿದೆ. 'ವಂದೇ ಮಾತರಂ' ಅನ್ನು ಅವರು ತಪ್ಪಾಗಿ ಗ್ರಹಿಸಿಕೊಂಡಿದ್ದಾರೆ. ಅಂಬೇಡ್ಕರ ಕಾನೂನು ಮಂತ್ರಿಪದವಿಗೆ ರಾಜೀನಾಮೆ ಕೊಟ್ಟ ಕಾರಣ, ಅವರ ಪದವಿ-ಮುಂತಾದವುಗಳ ಬಗ್ಗೆ ಅವರ ಹಾಡುಗಳಲ್ಲಿ ತಪ್ಪಾಗಿ ಮೂಡಿ ಬಂದಿವೆ.

ಸುಮಾರು ಅರುವತ್ತು ವರ್ಷಗಳ ಕಾಲ ನಿರಂತರವಾಗಿ ಅಲೆದಾಡಿ ದಲಿತರ ಕಷ್ಟವನ್ನು ಕಂಡು ಮರುಗಿದರು; ದಲಿತರಿಗಾಗಿಯೇ ತಮ್ಮ ಜೀವನವನ್ನು ಸವೆಸಿದರು. ತಮ್ಮ ವೈಯಕ್ತಿಕ ಸುಖ, ಸಮಸ್ಯೆಗಳನ್ನು ಬದಿಗೊತ್ತಿ ತಮ್ಮ ಸಮಾಜಕ್ಕಾಗಿ ದುಡಿದರು. ಆದರೆ ಸಮಾಜದಿಂದ ಅವರು ಪಡೆದುದ್ದೇನು? ಇಂದಿಗೂ ಅವರ ಕುಟುಂಬ ಬಡತನ ದಲ್ಲಿಯೇ ಇದೆ; ಆರ್ಥಿಕ ಭದ್ರತೆ ಇಲ್ಲ. ಹಣಕ್ಕಾಗಿ, ಅನುಕೂಲತೆಗಳಿಗಾಗಿ ಅವರೆಂದೂ ಹಪಹಪಿಸಲಿಲ್ಲ. ಪ್ರಾಮಾಣಿಕವಾದ ಶುದ್ಧ ಮನಸ್ಸು ಹಾಗೂ ವೈಚಾರಿಕ ಬದ್ಧತೆಯಿಂದಾಗಿ ಅವರು ಶ್ರೇಷ್ಠ ವ್ಯಕ್ತಿಯಾದರು. ಅಂತೆಯೇ ಕೊನೆಯವರೆಗೂ ಬಡವರಾಗಿಯೇ ಉಳಿದರು.

ಕಾಶೀನಾಥ ಗವಾಯಿಗಳು ಸುಮಾರು ಎರಡು ನೂರಕ್ಕಿಂತಲೂ ಹೆಚ್ಚು ಉಪಯುಕ್ತ ವಾದ ತತ್ವಪದಗಳನ್ನು ರಚಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ ಅವರ ಸಮಗ್ರ ತತ್ವಪದಗಳನ್ನು ಒಟ್ಟಿಗೆ ಪ್ರಕಟಿಸಬೇಕಾದ ಅವಶ್ಯಕತೆ ಇದೆ. ಗವಾಯಿಗಳ ಸೇವೆಯನ್ನು ಸ್ಮರಿಸಿ, ನಾವು ಅವರಿಗೆ ನಿಜವಾದ ಗೌರವ ಸಲ್ಲಿಸಬೇಕಾದರೆ, ಅವರಿಗೆ ಸಂಬಂಧಿಸಿದಂತೆ ಮೂರ್‍ನಾಲ್ಕು ಕೆಲಸಗಳನ್ನು ತುರ್ತಾಗಿ ಮಾಡಬೇಕಾಗಿದೆ.

೧. ಹಿಲಾಲಪೂರ ಅಥವಾ ಬೀದರನಲ್ಲಿ ಗವಾಯಿಗಳ ಸ್ಮಾರಕ ನಿರ್ಮಿಸುವುದು.

೨. ಗವಾಯಿಗಳ ಸಮಗ್ರ ತತ್ವಪದಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

೩. ಗವಾಯಿಗಳ ಹೆಸರಿನಲ್ಲಿ ಹೈದ್ರಾಬಾದ ಕರ್ನಾಟಕ ಮಟ್ಟದಲ್ಲಿ ಪ್ರಶಸ್ತಿಯನ್ನು ಸ್ಥಾಪಿಸುವುದು. (ಸಾಹಿತ್ಯ, ಸಮಾಜ ಸೇವೆ, ಸಂಗೀತ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು ಗುರುತಿಸಿ, ಪ್ರತಿವರ್ಷ ಪ್ರಶಸ್ತಿ ನೀಡುವುದು)

೪. ಗವಾಯಿಗಳ ಹಾಡಿನ ಕ್ಯಾಸೆಟ್ ತಯಾರಿಸುವುದು.

ಈ ನಿಟ್ಟಿನಲ್ಲಿ ಪ್ರಗತಿಪರ ವಿಚಾರವುಳ್ಳ ದಲಿತ-ದಲಿತೇತರರು ಗಂಭೀರವಾಗಿ ಚಿಂತಿಸಬೇಕಾದ ಅಗತ್ಯವಿದೆ. ಇದುವೇ ಸಮಾಜಕ್ಕಾಗಿ ದುಡಿದ ಕಾಶೀನಾಥ ಗವಾಯಿಗಳಿಗೆ ಸಮಾಜ ಸಲ್ಲಿಸುವ ಅರ್ಥಪೂರ್ಣ ಗೌರವ ಹಾಗೂ ಶ್ರದ್ಧಾಂಜಲಿ.

❑

# ಅನುಬಂಧ

# ವಂದನ

ಪ್ರಥಮ ವಂದನ ಭೀಮರಾಜ ಚರಣ
ಬುದ್ಧಂ ಶರಣಂ ಗಚ್ಛಾಮಿ ॥ಪಲ್ಲ॥

ಒಂದೇ ಹವುದೋ ಮಾನವಪ್ರಾಣಿ
ತನು-ಮನ-ಧನ ಮಾಡಿ ಅರ್ಪಣ
ದೇವ ದಯಾನಿಧಿ ನೀ ಅಂತಃಕರುಣ
ಧಮ್ಮಂಗ್ ಶರಣಂಗ್ ಗಚ್ಛಾಮಿ
ಪ್ರಥಮ ವಂದನ... ॥೧॥
ಹದಿನಾಲ್ಕು ವಿದ್ಯಾಕ ನೀ ಶಿರೋಮಣಿ
ಭಾರತ ಘಟನಾ ಮಾಡಿ ನಿರ್ಮಾಣಿ
ಬುದ್ಧ ಮೂಲ ನೀ ಲೋಕ ಕಲ್ಯಾಣಿ
ಸಂಘಂ ಶರಂ ಗಚ್ಛಾಮಿ
ಪ್ರಥಮ ವಂದನ... ॥೨॥
ತ್ರಿಪಿಟಕ ತ್ರಿಧಮ್ಮ ಸೂತ್ರ ನೀ
ಆದಿ ಅನಾದಿ ಮೂಲ ಮಂತ್ರ ನೀ
ನೀಸುನ್ಯೆವೇ ನೀ ಶಬ್ದ ನೀರ್ಗುಣಿ
ಆತ್ಮ ಪರಾತ್ಮ ಅಂತರಯಾಮೀ
ಪ್ರಥಮ ವಂದನ... ॥೩॥
ಮಾಣಿಕ ಮಿತ್ರ ಭಜನ ಸಿಕಾಮಣಿ
ಹಗಲ ಇರುಳ ಬುದ್ಧನಾಮ ಸ್ಮರಣಿ
ಬಾಬಾ ಬೌದ್ಧಪ್ರಭು ಅಂತರವಾಣಿ
ಪಂಚಶೀಲ ಗವಾಯಿ ಸಂತ ದರುಶನಿ
ಪ್ರಥಮ ವಂದನ... ॥೪॥

❑

# ಪ್ರಾರ್ಥನೆ

ಪ್ರಾರ್ಥನೆ ಮಾಡುವೆ ಪಾವನ ಮಾಡೊ
ಬುದ್ಧಾಗಿ ಭಾರತವಾ, ಜಯ, ಜಯ ಭೀಮ ನಮೋ ದೇವಾ
ಜಯ ಭೀಮ ನಮೋ ದೇವಾ ॥೧॥

ಬಡವರಿಗೆ ಕರುಣದಿ ಕಾಪಾಡೋ
ಸದಾಕಾಲ ನಮ್ಮ ಸಂಕಟ ನೋಡೋ
ಮತ್ತೆ ಹುಟ್ಟಿ ಬಂದು ಸಹಾಯವ ನೀಡೋ
ಹೈರಾಣ ವನವಾಸ ಕಳೆ ನಮ್ಮ ಕೇಡೋ
ನೀ ನಿಜದಾರ ಅಂಬೇಡಕರ ನಿನ್ನ ಹೊರತ್ಯಾರಯ್ಯ
ಜಯ ಜಯ ಭೀಮ ನಮೋ ದೇವಾ ॥೨॥

ಅಂಬೇಡ್ಕರನೇ ಶಂಭೋ ಹರನೇ
ಅಂಬುಜಾಕ್ಕೆ ಭಾನು ನೀನೇ
ಉದಯವಾಗಿಹ ರವಿಚಂದ್ರಮನೇ
ಇತರ ಕತ್ತಲೆ ಹರಿದವನೇ
ಕಡೆಗಿದ್ದ ಜನರಿಗೆ ಕೊಡೆ ಹಚ್ಚಿದವನೇ ಮೃತ್ಯುಗಳ ಸಂಜೀವಾ
ಜಯ ಜಯ ಭೀಮ ನಮೋ ದೇವಾ ॥೩॥

ಬಾಬನ ಯೋಜನಕ ತಿಳಿಯರಿ ಸರ್ವಾ
ಬೌದ್ಧ ತಿಳಿಯದವ ಮಾನವ ದ್ರೋಹ
ಹಿಲಾಲಪುರವ ಭೀಮನಗರವ
ಬಾಬನ ಭಜನೆಗೆ ಬೌದ್ಧನ ವರವ
ಸಂಗೀತ ಪುತ್ರ ಬೌದ್ಧನ ಸ್ತೋತ್ರ, ಕೂಡಿರಿ ಭಾರತವಾ
ಜಯ ಜಯ ಭೀಮ ನಮೋ ದೇವಾ. ॥೪॥

❑

# ನುಡಿಯರಿ ವಂದೇ ಮಾತರಂ

ಭಾರತದೊಳು ಬಂಧು ಪ್ರೇಮ
ಆಗ್ರಿ ವಂದೇ ಮಾತರಂ, ನುಡಿರಿ ವಂದೇ ಮಾತರಂ
ನುಡಿದ ಹಾಗೆ ನಡಿಬೇಕೋ ತಮ್ಮಾ ॥ಪಲ್ಲ॥

ಆದಿ ಅನಾದಿ ಮಾನವ ಜನ್ಮಾ
ಶೋಧ ಮಾಡಿರಿ ಬೌದ್ಧ ಧರ್ಮಾ
ಹಾದಿ ತೋರಿಸಿ ಭೇದವ ಮುರಿದಾ
ಬಾಬಾ ಅಂಬೇಡಕರ ಭೀಮಾ
ಭಾರತದೋಳು ಬಂಧು ಪ್ರೇಮ... ॥೧॥

ಗಾಡಿ ಮೋಟಾರ ರೈಲು ವಿಮಾನ
ಪ್ರಯಾಣದಲ್ಲಿ ಸರಿಯ ಸಮಾನ
ಊರೋಳು ಬಂದು ಬಡಜನರನ್ನ
ಮುಟ್ಟಿ ತಟ್ಟಿ ಅನ್ನೋದ್ಯಾಕಣ್ಣ
ಭಾರತದೋಳು ಬಂಧು ಪ್ರೇಮ... ॥೨॥

ಚೈನಾ ಅಮೇರಿಕಾ ಪಾಕಿಸ್ತಾನ
ಭಾರತ ಮ್ಯಾಲ ಇಟ್ಟಾರೋ ಕಣ್ಣ
ನಮ್ಮಲ್ಲಿ ಭೇದಭಾವದ ಚಿಹ್ನ
ಬೇರೆಯವರಿಗೆ ಮಾರ್ಗಾಯಿತಣ್ಣ
ಭಾರತದೋಳು ಬಂಧು ಪ್ರೇಮ... ॥೩॥

ಅರಿವು ಇರುವಿನಲಿರುಹುವದೋ
ಮಾನವರಲ್ಲಿ ಏಕೆ ಬರುವಲ್ಲದೋ
ಒಂದಿರು ಮುಂದಾಗಿ ನಡಿಯುವದೋ
ಸರ್ವ ಇರುಗಳ ಸಾಲ ಹುತ್ತುವದೋ
ಭಾರತದೋಳು ಬಂಧು ಪ್ರೇಮ... ॥೪॥

ಒಕ್ಕಟ್ಟಾಗಿ ಇರುವೆನೆರೆವದೋ
ಮಿಟಾಯಿ ಸಕ್ರಿ ಕರಣಿ ತಿನುವದೋ
ತಿಳಿದು ಮಾನವರಾಗಿರಿ ಒಂದೋ
ಬುದ್ಧಾಗಿ ಭಾರತ ಉಳಿಸುವದೋ
ಭಾರತದೋಳು ಬಂಧು ಪ್ರೇಮ... ॥೫॥

ಭಾರತ ಬಂಧುಗಳೆಲ್ಲ ಕೂಡಿ
ಬೌದ್ಧ ಧರ್ಮ ಸ್ವೀಕಾರಮಾಡಿ
ಬಾಬಾ ಸಾಹೇಬರ ಲೇಖವ ನೋಡಿ
ಭಾರತ ಉಳಿಸಿರಿ ಒಕ್ಕಟ ಕೂಡಿ
ಭಾರತದೋಳು ಬಂಧು ಪ್ರೇಮ... ॥೬॥

ಮುಕ್ತಿ ಮಾರ್ಗ ಬೌದ್ಧಧರ್ಮ
ಭಕ್ತಿ ಸತ್ವ ಬಂಧು ಪ್ರೇಮ
ಕಾಶೀನಾಥ ತಿಳಿಸಿ ಉತ್ತಮಾ
ತಿಳಿಸಿನಿ ನಿಮ್ಗ ತಿಳಿತೆನ್ರೊ ತಮ್ಮಾ
ಭಾರತದೋಳು ಬಂಧು ಪ್ರೇಮ... ॥೭॥

# ಭಾರತ ಜ್ಯೋತಿ

ಭಾರತ ಜ್ಯೋತಿ ನಮ್ಮ ಭೀಮದೇವಾ
ಮಾನವ ತತ್ವವು ತಿಳಿಸಿರುವ ॥ಪಲ್ಲ॥

ಒಂದೇ ಮಾತಾ ಒಂದೇ ರಕ್ತ
ಒಂದೇ ಭಾರತ ಜನತಾ
ಒಂದೇ ನಡೆ-ನುಡಿ ಸಂಪೂರ್ಣವಾ
ಮಾನವ ತತ್ವವು ತಿಳಿಸಿರುವ ॥೧॥

ಉತ್ಪನ್ನ ಒಂದೇ ರಕ್ಷಣ ಒಂದೇ
ಜೀವನ ಲಯಾಕೃತ ಒಂದೇ
ಕುಲ ಎಣಿಸಿ ಕುಲಗೇಡಿ ಇರುವಾ
ಮಾನವ ತತ್ವವು ತಿಳಿಸಿರುವ ॥೨॥

ಮುಟಚಟನೊಳಗಾ ಹುಟ್ಟಿತೋ ಈ ಜಗಾ
ಮುಟ್ಟಿ ಎಂಬುವರು ಹುಟ್ಟಿರಿ ಹ್ಯಾಂಗಾ
ಅಕ್ಕಸಾಲಿಗ ಮಾಡಿದ ಲಿಂಗ-ಜನಿವಾರವಾ
ಮಾನವ ತತ್ವವು ತಿಳಿಸಿರುವ ॥೩॥

ಮುಟ್ಟಾದ ಮೂರು ದಿನಕಾ ಪಿಂಡ ಮೂಡಿ ಪಾಕಾ
ಹೊಲೆಯ ಮಾರ್ಗದಿಂದ ಹುಟ್ಟಿತು ಲೋಕಾ
ಮುಟ್ಟಿ-ತಟ್ಟಿ ಹೊಲೆಯ ಅಂದವ ಕತ್ತೆ ಜನ್ಮವಾ
ಮಾನವ ತತ್ವವು ತಿಳಿಸಿರುವ ॥೪॥

ಬೌದ್ಧ ಧರ್ಮದ ಧಮ್ಮಪದ ಓದಿ
ತಿಳಿದಿತೋ ಜನಕಾ ಬಾಬಾನ ಹಾದಿ
ಸಂಗೀತ ರಚನಾ ಹಿಲಾಲಪುರವಾ
ಮಾನವ ತತ್ವವು ತಿಳಿಸಿರುವ ॥೫॥

# ಭೂದೇವಿ ಭಾರತ ಮಾತಾ

ಭೂದೇವಿ ಭಾರತ ಮಾತಾ
ಹಿಂದೂಸ್ಥಾನದ ಜನತಾ
ಒಂದಾಗಿ ಸರಿಯಾಗಿ ನಡಸಾರೀ ಭಾರತ ||ಪಲ್ಲ||

ಬ್ರಿಟಿಷರ ಕೈಯೊಳಗೆ ಸ್ವರಾಜ್ಯ ಸೇರಿತ
ವಲ್ಲಭ ಭಾಯಿ, ತಿಲಕ್, ಗಾಂಧಿ ಮಾಡಿದರೊ ಪಂತ
ಭಾರತಕೆ ಕುಬೇರನಿದ್ದ ಜವಾಹರಲಾಲ ಪಂಡಿತ
ಕೂಡ್ಯಾರೊ ಎಲ್ಲರು ನೇತಾ ಅಂಬೇಡ್ಕರದರಲಿ ಜೋತಾ
ಒಂದಾಗಿ, ಸರಿಯಾಗಿ ನಡಸಾರೀ ಭಾರತ ||೧||

ಮದ್ದುಗುಂಡು ಇಲ್ಲದ ಜ್ಞಾನ ಬುದ್ಧ ಖಡ್ಗದಿಂದ
ಸಿದ್ಧವಾಗಿ ಸತ್ಯಾಗ್ರಹ ನಡಸಿದಾರೊ ಧುಂದಾ
ಹದ್ದು ಕಾಗಿ ಎದ್ದೋಡಿದ್ಹಾಂಗ ಬ್ರಿಟಿಷ ಜನಾಂಗ
ಒನ್ನಿಸೋ ಸೈದಾಳೀಸ ಪಂದರಾ ಆಗಸ್ಟ್
ತಿರಂಗಿ ತಿರಂಗಿ ಝುಂಡವಾ ಏರಿತಾ ||೨||

ಭಾರತ ಘಟನಾವನ್ನು ಭೀಮ ಬಾಬಾ ಬರೆದರೋ
ಒಪ್ಪಿದಾರೋ ಗಾಂಧಿ, ನೆಹರು, ರಾಜೇಂದ್ರ ಪ್ರಸಾದರೋ
ಅಷ್ಟುಮಂದಿ ಪ್ರಮಾಣ ಮಾಡಿ ದಪ್ತರ ಹಿಡಿದಾರೊ
ಈ ಸಂವಿಧಾನದೊಳಗಿನ ಬಳಕ ನೀವು ಮಾಡಬ್ಯಾಡರಿ ಧೋಖಾ ||೩||

ಕಾಂಗ್ರೆಸ್ ಪಾರ್ಟಿಗೆ ನಿಂತಾರೊ ಎಂ.ಪಿ. ಎಂ.ಎಲ್.ಎ.ಅಂತ
ಇಂಗ್ಲಿಷನೊಳಗ ಪತ್ರಬಂದರೇ ಶಾಲೆ ಹುಡುಗರಿಗೆ ತೋರಿಸುತಾ
ಪಾರ್ಲಿಮೆಂಟ ಮೀಟಿಂಗ್‌ದೊಳಗೆ ಕ್ವಾಡಗಾಗಿ ಕುಂತ
ಇದು ಪ್ರಜಾಪ್ರಭುತ ರಾಜ್ಯ, ಅನ್ಯಾಯ ಹುಕುಮತ
ರೂಪಾಯಿಗಿ ಮೂರು ಪಾವು ಅನಾಜ ಮಾರುತಾ ||೪||

ಧಡ್ಡಯಡ್ಡ ಮುಠ್ಠಾಳ ಮಂದಿ ಲೀಡರಾಗಿ ಬಂದರೊ
ಭಾರತಕ್ಕೆ ಇಲ್ಲದ ಬಡತನ ಇವರೇ ತಂದುಕೊಂಡರೊ
ಖೂಬ್ ತಿಂದು ಕ್ವಾಣೆನ್ಹಾಂಗ
ಮೇರಿತಾರೊ ಕಾರಿನೊಳಗೆ ||೫||

# ಹಿಂದೂ ಧರ್ಮದೊಳು ಉಳಿದು ಹಿಂದೆ ಬಿದ್ದೀರಿ

ಹಿಂದೂ ಧರ್ಮದೋಳು ಉಳಿದು, ಹಿಂದೆ ಬಿದ್ದೀರಿ
ಬೌದ್ಧ ಧರ್ಮ ಸುಧಾರಣರಾಗಿ ವಿದ್ಯಾ ಕಲಿಯಿರಿ ॥ಪಲ್ಲ॥

ಹಿಂದೂ ತತ್ವ ವೇದಗಳು ವಿಚಾರ ಮಾಡಿರಿ
ಕಟಗಿ, ಕಲ್ಲು, ಮಣ್ಣು, ಕಬ್ಬಿಣ, ಗೊಂಬಿ ದೇವರಂದಿರಿ
ಲಿಂಗ, ವಿಭೂತಿ, ಗಂಧ ಜನಿವಾರ ದಾರ ಹಾಕಿರಿ
ಮಠ-ಮಂದಿರ-ಮಸೂದಿಯೊಳಗಾ ಮುಟ್ಟಿತಟ್ಟಿರಿ
ಹಿಂದೂ ಧರ್ಮದೋಳು ಉಳಿದು... ॥೧॥

ಶ್ರಾವಣ ಸೋಮವಾರ ವಿಭೂತಿ ಹಚ್ಚಿ ಭಜನಾ ಮಾಡಿದಿರಿ
ಮೋಹರಮದೊಳಗಾ ಲಾಡಿಕಟ್ಟಿಕೊಂಡ ಅಳ್ಳಿ ಬಾಸ್ಯಾ ಆದಿರಿ
ಮೈಲಾರಲಿಂಗನ ವಗ್ಗೆರಾಗಿ ಕೊಟಂಬಿ ತುಂಬಿರಿ
ಜಾಣಿ-ಪೋತ್ಯಾ ಭೂತ್ಯಾ ಭೂತಾಳೇರಾಗಿ ಕಾರ್ಯಮಾಡಿದಿರಿ
ಹಿಂದೂ ಧರ್ಮದೋಳು ಉಳಿದು... ॥೨॥

ಗಂಡಿರಲಿಕ್ಕಾಗಿ ಮುತ್ತೈದಿ ಪತ್ನಿ ಬಳಿ-ತಾಳಿ ತಗದಿದೀರಿ
ಕಾಲುಂಗರ ಒಡಿದು ಕರಮಣಿ ಕಡಿದು ಅಗಸ್ಯಾಗ ಕೂಡಸೀರಿ
ಮೈತುಂಬ ಮಾಂಸ ಸುತ್ತಿಕೊಂಡ ಭೂತಾಳಿ ತಿರಗಿರೀ
ಹರಿದುಹೋಗ ಅರಬಿಗಿ ಆಸೆ ಬಿದ್ದು ಅಭಿಮಾನ ಕಳಕೊಂಡಿರಿ
ಹಿಂದೂ ಧರ್ಮದೋಳು ಉಳಿದು... ॥೩॥

ಅಣ್ಣ ಪೋತ್ಯಾ ತಮ್ಮ ಡಪ್ಪಗಾರ ತಂಗಿ ಜೋಗಣಿರಿ
ನಿಮ್ಮ ಮನಿ ಹೆಣ್ಣುಮಕ್ಕಳಿಗೆ ನೀವೇ ನಕರಿ ಆಡಿದಿರಿ
ಗೌಡ-ಕುಲಕರ್ಣಿ ಗುಡಿಮ್ಯಾಲ ಕುಂತು ನಕ್ಕು ನೋಡುತಾರರಿ
ಅಮೃತಬಾಯಿಲೆ ಹಸಿಕುರಿಗಾಂವ ಹರಿದು ಹಲ್ಲುಗಳು ಕಳಕೊಂಡಿರಿ
ಹಿಂದೂ ಧರ್ಮದೋಳು ಉಳಿದು... ॥೪॥

ಹಿಂದಿನ ಹಾವಳಿ-ಬೇಮಾರಿ ಇವಾಗ ಅವು ಏನು ಹೇಳ್ಯಾರಿ
ಅಂಬೇಡ್ಕರರು ಡಾಕ್ಟರ ಆಗಿದವರು ಕಂಡು ಓಡಿದು ಕೇಳ್ಯಾರಿ

ನೀವೇ ಪ್ರಜಾಕಾರು, ನೀವೇ ದೇವರ ಮನುಷ್ಯರು ನಿಮಗ್ಯಾಕ ಬೇಮಾರಿ
ಮಲೇರಿಯಾ ಡಾಕ್ಟರರು ಮನಿ-ಮನಿ ತಿರುಗಿ ಗುಳುಗಿ ನುಂಗಿಸಿದರಿ
ಹಿಂದೂ ಧರ್ಮದೋಳು ಉಳಿದು... ॥೫॥

ಮರಗವ್ವ, ದುರಗವ್ವ, ಮಾಪವ್ವ, ಎಲ್ಲವ್ವ, ಸಾಮವ್ವ ಪೋಚವರಿ
ಒಡವಿ ಒತ್ತಿ ಇಟ್ಟು ಸಾಲ ತಂದು ದೇವರಿಗೆ ಮಾಡಿದಿರೀ
ಪೋತ್ಯಾನ ತಲಿಮ್ಯಾಲ ಪಾದಕ ಜಡಿಗಳು ಮಳೆಗಾಲಕೇನಗತಿರಿ
ಸರ್ದಿಜ್ವರ ಹೈಜಾ ಬೇಮಾರಾಗಿ ದವಾಖಾನಿಗಿ ನಡದಾನರಿ
ಹಿಂದೂ ಧರ್ಮದೋಳು ಉಳಿದು... ॥೬॥

ಇಸ್ಮಾಲ, ಮಸ್ತಾನ, ಲಾಲ, ಮೌಲ, ಸೈಬಣ್ಣ, ಗೈಬಣ್ಣರೀ
ಹಾಜಿ, ಖಾಜಿ, ಹಸೇನಿ, ಹುಸೇನಿ, ರಾಣಾಣ, ಪೀರಾಣರೀ
ದರ್ಕಸದೊಳಗ ಹರಿಜನರೆಂದು ಹೆಸರು ಬರೆಸಿದಿರಿ
ಸರಕಾರ ನಿಮಗೆ ಹೊಲ-ಮಾದರೆಂದು ಹ್ಯಾಂಗ ತಿಳಿಬೇಕರಿ
ಮಸ್ತಾನ ತಂದೆ ಮೌಲಾ ಆದ ಮ್ಯಾಲೆ ಮುಸಲ್ಮಾನ ಅಲ್ಲೇನರಿ
ಹಿಂದೂ ಧರ್ಮದೋಳು ಉಳಿದು... ॥೭॥

ಕಲ್ಲು-ಕಟಗಿ ದೇವರ ಕಿತ್ತೊಗೆದು ಭೀಮ ಜಯಂತಿ ಮಾಡಿರಿ
ಕಲ್ಲು-ಕುಟ್ಟಿಗ್ಯಾರು, ಕುಂಬಾರ ಬಡಿಗೇರು ಕಾಲುಕೊಟ್ಟು ಕಡದಾರರಿ
ಇವು ದೇವರು ನಿಜ ಆದರ ಉಚ್ಚಕುಲದಾಗ್ಯಾಕ ಜ್ಯಾಣಿ-ಪೋತ್ಯಾರಿಲ್ಲರಿ?
ನೀವೇ ಕಂಡಲಿ ಭಂಡು ಬತ್ತಲೆಯಾಗಿ ಹುಟ್ಟುಡಗಿ ಉಟ್ಟುಕೊಂಡಿರಿ
ಹಿಂದೂ ಧರ್ಮದೋಳು ಉಳಿದು... ॥೮॥

ಭೀಮಬಾಬಾ ಜನ್ಮ ಎತ್ತಿ ದಾರಿ ತೋರಿಸಿದರಿ
ವಿದ್ಯೆ ಕಲಿತವರು ಇವತ್ತು ನಿಮ್ಮವರು ಆಫೀಸರ್ ಆಗಿದಾರರಿ
ಆರ್. ಭರಣಯ್ಯ ಸಾಹೇಬ್ರು ಮೈಸೂರ ಸರ್ಕಾರ ಸೆಕ್ರೆಟರಿ ಅಧಿಕಾರಿ
ಜ್ಯಾಣಿ, ಪೋತ್ಯಾ ಭೂತ್ಯಾ ಭೂತಾಳ್ಯಾರಾಗಿ ಏನೇನು ಗಳಿಸಿರಿ?
ಹಿಂದೂ ಧರ್ಮದೋಳು ಉಳಿದು... ॥೯॥

ಉತ್ಪನ್ನ ರಕ್ಷಣಕ ಅನಂತ ಪ್ರಭು ಭಗವಾನ ಇದ್ದವ ಬ್ಯಾರರಿ
ಆದಿ ಶಕ್ತಿ ಅಂಗದ ತುಂಬತಾಯಿ ಹಾಲು ಸೇರಿ
ಬೌದ್ಧ ದೀಕ್ಷೆಯಾಗಿ ಗುರುವಿನ ಪಾದಕ ಹೊಂದಿ ಮುಕ್ತಿ ಪಡಿಯರೀ
ಧರಿ ಹಿಲಾಲಪೂರ ಕರ ಮುಗಿದು ಕಂದಾ ಕಲಿರಂತ್ಹೇಳಿದರೀ
ಹಿಂದೂ ಧರ್ಮದೊಳು ಉಳಿದು... ॥೧೦॥

❑

# ಕಂಡ ದೇವರ ಕಾಲು ಬೀಳಬೇಡರಿ

ಜೈ ಜೈ ಭೀಮ ಭಗವಂತಾ, ನುಡಿಯಿರಿ ದೀನ ದಲಿತಾ
ಭಜನಾ ಮಾಡಿ ವರವ ಬೇಡಿ ಬೌದ್ಧ ಧರ್ಮ ಬೆಳೆಸುತ್ತಾ ॥ಪಲ್ಲ॥

ಭಜನವು ಮಾಡಿರಿ ಸೌಜನಾಗಿ ನಡಿಯಿರಿ
ಅಜರಾಮರ ಅಂಬೇಡಕರಾ ತಂದೆ ಎಂದು ತಿಳಿಯಿರಿ
ಸಂಘ ವಿದ್ವಾನ ಪುರುಷರದೋ ವಿದ್ಯೆ, ಬುದ್ಧಿ ಬರವುವದೋ
ಹಡೆದ ತಂದೆ-ತಾಯಿ ಸೇವಾ ಮಾಡಿ, ಬೌದ್ಧಗ ನೆನೆಸುತ್ತಾ
ಜೈ ಜೈ ಭೀಮ ಭಗವಂತಾ.... ॥೧॥

ಗುರು ಪುತ್ರ ಆಗಿ ನೋಡೋ ಬೌದ್ಧ ಮಂತ್ರ ಸಾಧನ ಮಾಡೋ
ಪಂಚಕ್ಷರಿ, ಷಡಕ್ಷರಿ, ಪಂಚಶೀಲ ನೋಡೋ
ಆತ್ಮ ಪರಮಾತ್ಮ ತಿಳಿಯೋ ನಿನ್ನೊಳು ನೀ ತಿಳಿದು ಉಳಿಯೋ
ಕಲ್ಲು-ಕಟಕಿ ಯಾವ ದೇವರಲ್ಲ ಈತನ ಹೊರತಾ
ಜೈ ಜೈ ಭೀಮ ಭಗವಂತಾ... ॥೨॥

ಹಿಂಸೆಯನ್ನು ಮಾಡಬೇಡರಿ, ಕಂಡ ದೇವರ ಕಾಲು ಬೀಳಬೇಡರಿ
ಜ್ಯಾಣಿ-ಜೋಗಣಿ, ಪೋತ್ಯಾ-ಭೂತಾಳ್ಯಾ ವಗ್ಗಾನ್ನಿನ ಬಿಡಬೇಡರಿ
ಇವು ಯಾವ ದೇವರು ನಿಮ್ಮಗಲ್ಲ ನಿಮ್ಮ ಸರಿ ಮಾತೇನಾಡಿಲ್ಲ
ಮುಟ್ಟಿ ಎಂದು ಕೆಳ ನೂಕಿದಾಗ ದೇವರು ಗಪ್ಪಾಯಿತು
ಜೈ ಜೈ ಭೀಮ ಭಗವಂತಾ... ॥೩॥

ಬಸವಣಪ್ಪ ಬಹಳ ಭಕ್ತ ಹುಟ್ಟಿ ಬಂದ ಬ್ರಾಹ್ಮಣ ಮತ
ವೀರಶೈವ ಧರ್ಮವನೆತ್ತಿ ಅನಸಿದ ಭಗವಂತ
ಮಾಡಿದ ಕುಲಕೊಂದು ಶರಣ ಕುಲವು ಎಲ್ಲಿ ಉಳಿತಣ್ಣ
ಬಾಬಾ ಬಂದು ಮಾಡಿ ಒಂದು ಬರೆದ ಸಂವಿಧಾನ
ಜೈ ಜೈ ಭೀಮ ಭಗವಂತಾ... ॥೪॥

ಧರಿನಾಡ ಹಿಲಾಲಪೂರ, ಗುರು ಬೌದ್ಧ ಬಸವೇಶ್ವರ
ಕುಡಿರಿ ಪ್ಯಾಲಾ ಪಡಿರಿ ಮುಕ್ತಿ ನುಡಿರಿ ಅಂಬೇಡಕರ
ಭಾರತ ಬಡ ಅಣ್ಣ-ತಮ್ಮರೇ, ಶಾಲೆ ಕಾಲೇಜ ಕಲಿಯುವರೇ
ಪದವಿ ಪಡೆದು ಒಂದೇ ಕೂಗಿ ಬೌದ್ಧ ಧರ್ಮ ಬೆಳೆಸುತ್ತಾ
ಜೈ ಜೈ ಭೀಮ ಭಗವಂತಾ... ॥೫॥

❑

# ದೇವತಾ ಕಾರ್ಯ ಮಾಡಬೇಡರಿ

ಮರಗವ್ ದುರ್ಗವ್ ದೇವತಿ ಕಾರ್ಯ ಮಾಡಬೇಡರಿ
ಕುರಿ, ಕೋಳಿ, ಕೋಣ ಕಡಿದು ಪಾಪಕ ಅಧಿಕಾರಿ
ಕಾಲಾನುಕಾಲ ಕಾರ್ಯಗಳು ಮಾಡುತ ಬಂದೇವರಿ
ಹೊಡಿವ ಕೋಣಿಗಿ ಅಡವಿ ಅಡವಿ ತಿರುಗಿ ಹಿಡಕೊಂಡ ತಂದೇವರಿ
ಮನಿಯ ಕೆಲಸ ಬಿಟ್ಟು ಮೂರು ತಿಂಗಳ ದುಡಿದೇವರಿ
ಹಂದ್ರನ ಅನ್ನ ಕುಂಬಾ ಕಿಚಡಿ ಟೆಂಗಿನ ಸಲುವಾಗಿರಿ ॥೧॥

ಡಪ್ಪು, ಡೊಳ್ಳು, ಹಲಗ್ಯಾ, ಸಿಂಗ್ಯಾ ಬಾಜ್ಯಾ ಭಾರಿಸಿರಿ
ಓಲಗ್ಯಾ ಓಲಗ್ಯಾ ಚಲಂಪೊಲಿಗ್ಯಾ ಹಕಾರಿ ಹೊಡದಿರಿ
ಭೂತಾಳ್ಯಾನ ಮೈಯಲ್ಲ ಮಾಂಸಹಾಕಿ ಊರಸುತ್ತ ತಿರಗಿಸಿರಿ
ಗಂಡುಳ್ಳ ಗರತಿಗಿ ಬಳಿ ಕಾಲುಂಗರ ಕರಮಣಿ ತೆಗಸಿರಿ ॥೨॥

ಹೊಲಗೇರಿ ಹೊರಗ ಹಾಕಿ ಊರು ಸುತ್ತ ಹೊಲಿಯಾಗ ತಿರಗಸಿರಿ
ದಿಕ್ಕಿಲ್ಲದವರಂತೆ ಅಗಸ್ಯಾಗ ತಂದು ಆಯರಿ ಮಾಡಿಸಿರಿ
ಊರು ಪಾಪಸುತ್ತಿ ವಂಶಕ್ಕೆ ಮಕ್ಕಳ ದೀಪಾ ಕಳಸಿರಿ
ಹುಚ್ಚರಂತೆ ಬೆತ್ತಲೆ ಗಂಧದ ಹುಟ್ಗಿ ಉಡಸಿರಿ ॥೩॥

ಪೋತ್ಯಾ, ಭೂತ್ಯಾ, ಭೂತಳ್ಯಾ ಜೋಗಣಿ ವೇಶ್ಯಾಂಗಣಿ ಬಿಡುಬೇಡರಿ
ಸಾವಿರ ಜನದಾಗ ಸೆರಗ ತೆಗೆದು ಕೈಮಾಡಿ ಕುಣಿಸಿರಿ
ಅಣ್ಣಾ ತಂಗೇರು ಒಬ್ಬರಿಗೊಬ್ಬರು ಚ್ಯಾಷ್ಟಿ ಮಾಡಿಸಿರಿ
ನಕರಿಯ ಕಂಡು ನಕ್ಕು ಊರವರು ರೊಕ್ಕ ಹಾಕ್ಯಾರರಿ ॥೪॥

ಖಾಸ ಅಣ್ಣಾ ತಮ್ಮದೇರು ಕಣ್ಣಿಲಿ ಕಂಡು ಸುಮ್ಮನೆ ಕೂಡಬೇಕರಿ
ಯೌವನ ಹುಡುಗಿನ ಎಲ್ಲ ಜಾತೇವರು ಮಕ್ಕಳ ಮಾಡ್ಯಾರರಿ
ಮುಪ್ಪಾದ ಮೇಲೆ ಮುಟ್ಟಿ ಅಂತರ ಹೊಲೆ ಮಾದ್ರ ಹೆಣ್ಣಿಗಿರಿ
ನಾಯಿ ಬೆಕ್ಕಿನಂತೆ ಮನಿಮನಿ ತಿರಗ ಮುಂದ ಮಾಯಕಾರ್ತಿ ಎಲ್ಲಾಳರಿ ॥೫॥

ಲಕ್ಷ್ಮಿ ಲಕ್ಕವ್ವ ಎಲ್ಲವ ಸಮವ ಮೈಸವ ಮಾಪೂರಿ
ಕೋಣ ಕುರಿದು ರಕ್ತ ಹರಿದು ವಾಸನೆ ಎಂಥದರಿ
ಹದ್ದು ಕಾಗಿ ನಾಯಿಯ ಕುಸ್ತಿ ಎಲುಬಿನ ಸುತ್ತಾರಿ
ಹೊಲೆ ಮಾದಿರು ತೆಲಿಪಾಲಕ ಹೊಡದಾಡಿ ಪೇಸಿಯ ತಿರಗಿರಿ ॥೬॥

ಪೋತ್ಯಾ, ಭೂತ್ಯಾರ ಕೂದಲ ಜಡಿಗಳು ಗಾರಮಳೆಗೇನಗತಿರಿ
ಹೇನು ಸೀರು ಖಜ್ಜಿ ಹುರುಕು ಉರಿಚಳಿ ಹತ್ಯಾವರಿ
ಹಸಿಕುರಿ ಗಾವುಹರಿದು ಹಲ್ಲ ಮುರಕೊಂಡು ನುಚ್ಚು ಕುಡಿದು ಮುಪ್ಪಾದಿರಿ
ಬಾಬನ ಉಪದೇಶ ಕೇಳಿ ಜಡಿ ಬೋಳಿಸಿ ಸುಖವಾಗಿ ಬಾಳಿರಿ ॥೭॥

ಎಲ್ಲಮ್ಮನ ಕೊಡ ಘಟಪರಡಿ ಪತ್ತಿ ಹಚ್ಚಿ ಸವಾರಿ ತುಂಬಿಸಿರಿ
ಪಟ್ಟಾ ಹಾಕಿ ಒತ್ತಾಯ ಪಡಿಸಿ ಎಣ್ಣಿಕುಳ್ಳಿ ನುಂಗಿಸಿರಿ
ಬ್ರಾಹ್ಮಣ ಬಾಲೇರಿಗೆ ಯಾವ ದೇವರ ಸವಾರಿನೇ ಬರೋದಿಲ್ಲರಿ
ಮಾನಮೇಟಿ ಕೋಣಿನತೆಲಿ ಕುಲಕರ್ಣಿ ಕೊಟ್ಟಾಗ್ಯಾಗ ಹೂಳತಾರರಿ ॥೮॥

ಮೂರು ವರ್ಷಕೊಮ್ಮೆ ಪಾಪಕರ್ಮ ಪದರೊಳ್ಳು ಕಟ್ಟಕೊಂಡಿರಿ
ವ್ಯಾಳ್ಯಾ ಅಂಸರಾ ಚಪಲಿ ಅನ್ನ ಬಟ್ಟಿಗಿ ಬಳಲಿರಿ
ಸಿಂದಿ ಕುಡ್ದು ಇದ್ದಷ್ಟು ಭೂಮಿ ಮಾರ್ಕೊಂಡು ಅತ್ತೀರಿ
ಅಂಬೇಡ್ಕರರ ತತ್ವವ ತಿಳಿದು ಗಂಭೀರಾಗಿ ಉಳಿಯಿರಿ ॥೯॥

ಡ್ವಾರ್ಯಾ ಸಮಗಾರ್ ಮಾದಿಗ ಹೊಲೆಯರು ಹೆಸರ್ಯಾಕ ಬಂದವರಿ
ಸತ್ತದು ಕೆಟ್ಟಿದು ಹೊಲಸ ಕೆಲಸ ಹಚ್ಚಿ ಹೊರಗ್ಹಾಕಿ ಬಿಟರರಿ
ಮದವಿ ಮುಂಜಿ ಸೊಬಾನ ಕಾರ್ಯಕ ಕಟಕಿಯ ಒಡದಿರಿ
ತಿಂಗಳು ದುಡಿದು ತಂಗಳ ತಿಂದು ಕೊಟ್ಟಿದಷ್ಟು ತಂದಿರಿ ॥೧೦॥

ಕಲ್ಲು ಕಟಗಿ ಕೊಡುಕುಳ್ಳಿ ಪರಡಿ ದೇವರ ತಗಿದೊಗಿರಿ
ಹುಟ್ಟಿದ ಮಕ್ಕಳಗಿ ಶಾಲೆಗೆ ಹಾಕಿ ಬೊರ್ಡಿಂಗದೊಳ್ ಬಿಡರಿ
ಬುದ್ಧ ಧರ್ಮದ ದೀಕ್ಷವು ಪಡೆದು ಒಕ್ಕಟ್ಟಾಗಿ ಉಳಿಯಿರಿ
ಪಂಚಶೀಲ ಗವಾಯಿ ಪ್ರಾರ್ಥನಾ ಮಾಡತಾನ ನಾಗಪೂರಕ ನಡಿರಿ ॥೧೧॥

❑

# ಭೀಮ ಗರ್ಜನೆ

ಭೀಮ ಗರ್ಜನಾ ಬುದ್ಧ ದುರುಶನಾ
ಕೋಟಿ ಕೋಟಿ ಮಾನವರನ್ನು ಮಾಡಿ ಪಾವನಾ ॥ಪಲ್ಲ॥

ಎಲ್ಲರ ಹಣೆಬರ ಬರದಾನ ಅಂತಿರಿ ಬ್ರಹ್ಮಾ
ಅದೇ ಬ್ರಹ್ಮನ ಹಣೆಬರಹ ಯಾರು ಬರದಾರ ಹೇಳೋ ತಮ್ಮಾ
ಭಾರತ ಜನಾಂಗ ಹಣೆಬಾರ ಬರೆದ ಅಂಬೇಡ್ಕರ ಭೀಮಾ
ಮಾಡಿ ಸರಿಸಮನಾ ಹಿಂದೂಸ್ಥಾನ ಒಂದೇ ಮಾತರಮಾ ॥೧॥

ರುದ್ರಾವತಾರ ದೇವರಂತಿರಿ ಕೈಯಲಿ ಹಿಡಿದ ತ್ರಿಶೂಲಾ
ಎಷ್ಟೋ ಮಾನವ ಪ್ರಾಣಿಗಳಿಗೆ ಕೊಲೆ ಮಾಡಿದನಲ್ಲಾ
ಜೀವಹಿಂಸೆ ಮಾಡಿದವರು ದೇವರಾಗೊದಿಲ್ಲ
ಅಹಿಂಸಾದ ನೇಮ, ಬೌದ್ಧ ಧರ್ಮ ತಿಳಿದ ಬಾಬಾ ಭೀಮ ॥೨॥

ರಘುಪತಿ ರಾಮನ ಕೈಯಲ್ಲಿ ಧನುಶ ಬಾಣಾ
ಎಷ್ಟೋ ಜೀವ ಜಂತುಗಳಿಗೆ ಕೊಂದುಹಾಕಿದ ಪ್ರಾಣಾ
ಶಂಭೂಕ ಮಹರ್ಷಿಗೆ ಶಿರ ಹಾರಿಸಿದನಾ
ಹಿಂಸೆ ರಾಮಚಂದ್ರ ಅವನೆ ದೇವರಾ, ಅಂದ್ರೊ ಹಿಂದೂ ಜನರಾ ॥೩॥

ಕೃಷ್ಣಾ ಸುದರ್ಶನ ಚಕ್ರಾದಿ ಎಷ್ಟೋ ಹೊಡದ ಶಿರಾ
ರೂಪವಂತಿ ನಾರೆರಿಗಿಟ್ಟಾ ಸಹಸ್ರಾರು ಗೋಪ್ಯಾರಾ
ಗೌಳಗಿತ್ತೇರ ಸೀರಿಯ ಕದ್ದು ಮಾಡಿದ ಗೋಚೇರಾ
ಹರಿಹರಾ ಬ್ರಹ್ಮರೆಲ್ಲ ಅಲ್ಲೊ ದೇವರ ಕೋಶವೇದಶಾಸ್ತ್ರ ॥೪॥

ಭಗವಾನ ಬುದ್ಧಧರ್ಮ ತಿಳಕೊಂಡವ ಮಹಾತ್ಮಾ
ಅಶೋಕಪತಿ ಅಂಗುಲಿಮಾಲಾ ಸಿದ್ಧಾರ್ಥ ಪ್ರಭುಗೌತಮಾ
ಸತ್ಯಮುಕ್ತಿ ಮಾರ್ಗವ ತೋರಿದಾ ಆಧುನಿಕಾ ಭೀಮಾ
ಗಾಂಧಿಗ ಉಳಿಸಿದ ಪ್ರಾಣ, ಸ್ವರಾಜ್ಯ ಪೂರ್ಣ ಮಾಡಿದ ರಕ್ಷಣಾ ॥೫॥

ಹಿಂದಿನ ಜನ್ಮದ ಪುಣ್ಯ ಆದ ಅಂತಾರ ಹಿಂದುಸ್ಥಾನ ಸಾಹುಕಾರ
ಇಂದ್ರಾಜಿ ಭೂಮಿ ಹಂಚರಿ ಅಂದರೆ ಆಕಿಗ್ಯಾಕ–ಬೈತಾರ
ಭೂಮಿ ಹಿಂಚಿಕೆ ಆಗಲಿಕ್ಕೆಬೇಕೊ ಕಾಯ್ದೆ ಮಾಡ್ಯಾನ ಕರಾರ
ಪ್ರಜಾಪ್ರಭುತ್ವ ಸಮಾನ ಸಮತಾ ಈ ಪಂಚಮಹಾಭೂತ ॥೬॥

ಋಗ್ವೇದ, ಸಾಮವೇದ, ಯಜುರ ಆಥರ್ವಣವೇದಾ
ರಾಮಾಯಣ ಭಗವತಗೀತಾ ಬೈಬಲ ಕುರಾನ ಭೇದ
ಸರ್ವಧರ್ಮ ಶೋಧಿಸಿ ಬಿಟ್ಟಾ, ಸ್ವೀಕರಿಸಿದ ಬೌದ್ಧ
ಭೀಮ ಬಾಬಾನ ಕೈಯೋ ಧರ್ಮಸಿಪಾಯಿಯೋ ಪಂಚಶೀಲ ಗವ್ವಾಯ್ಯೊ ॥೭॥

❑

# ದಲಿತರ ಪಿತಾ

ದಲಿತರ ಪಿತಾ ಜೈ ಭೀಮರಾಯಾ
ಬಡವರಿಗೆ ನೀನೇ ಶಿವರಾಯ
ಎಲ್ಲಿರುವದೊ ನಿನ್ನಯ ಛಾಯಾ
ಅಲ್ಲಿರುವದೊ ಎಲ್ಲವರ ಮಾಯಾ

ಆದಿ ಪ್ರಕಟ ಭಾರತೆಂಬೋ ಬೆಟ್ಟಾ
ಆದಿ ಅನಾದಿ ನೀ ಕಳೆದಿದಿ ಕಷ್ಟ
ಹಿಮಾಲಯ ಪರ್ವತಕ್ಕಿಂತ ಶ್ರೇಷ್ಠ
ನಿನ್ನಿಂದಲೇ ಪಾರ್ಲಿಮೆಂಟದಾಟ
ಭಾರತ ಬಡವರಿಗೆ ವಿದ್ಯಾಬುದ್ಧಿ ಕೊಟ್ಟ
ಸರಿಸಮಾನ ಸ್ವಾತಂತ್ರ ಮಾಡಿಟ್ಟ
ದಲಿತರ ಪಿತಾ ಜೈ ಭೀಮರಾಯ.... ॥೧॥

ಮುದ್ದು ಮುಖದ ಮೂರ್ತಿಯು ಹುಟ್ಟಿ
ಬುದ್ಧ ದೇವ ನಿನಗಾಗಿದ ಭೇಟ್ಟಿ
ಸಂವಿಧಾನ ಕಂಡವರಿಗೆ ಕೊಟ್ಟಿ
ಕಾಗಿ ಮನಿಯೊಳು ಕೋಗಿಲ ತತ್ತಿ ಇಟ್ಟಿ
ಐದು ಲಕ್ಷಕ್ಕೆ ಬೌದ್ಧ ದೀಕ್ಷೆ ಕೊಟ್ಟಿ
ಪಂಚಶೀಲ ಭಾರತ ಬೆಳಸಿಟ್ಟಿ
ದಲಿತರ ಪಿತಾ ಜೈ ಭೀಮರಾಯ.... ॥೨॥

ಹಳ್ಳಿ ಜನರ ಮಳ್ಳ ವಿಚಾರ
ಇನ್ನೂ ಬಿಟ್ಟಿಲ್ಲ ಕಳ್ಳಾಟ ಚೋರಾ
ಹಳ್ಳಿ ಹೋಟಲ ಕಪ್ಪು-ಬಸಿ ಬ್ಯಾರಾ
ಕುಲ ಕೇಳತಾರ ಅಂದು ಯಾತ್ರವರಾ
ತಾಯಿ ಹಾರೂರಕಿ ತಂದೆ ಭೀಮದೇವರಾ
ಯಾವ ಜಾತಿ ಹೇಳಿ ಭೂಮಿ ಬೀಜ ಬ್ಯಾರ
ದಲಿತರ ಪಿತಾ ಜೈ ಭೀಮರಾಯ.... ॥೩॥

ತನು-ಮನ-ಧನ ಮಾಡುವೆ ಅರ್ಪಣ
ನೀನೇ ಹುಟ್ಟಿ ಬಂದು ಮಾಡೊ ಸರಿ ಸಮನಾ
ತನು, ಮನದಿಂದ ಬೇಡಿಕೊಳ್ಳುವೆನಾ
ಹಣ, ಧನದಿಂದ ಇದ್ದೀನಿ ಬಡವ ನಾ
ಗುಡಿ-ಗೋಪುರ ಕಟ್ಟಿಸುವ ಯೋಜನ
ನಿನ್ನ ಜಾತ್ರಿ ಮಾಡೋದೆ ನನ್ನ ಜೀವನ
ದಲಿತರ ಪಿತಾ ಜೈ ಭೀಮರಾಯ.... ॥೪॥

ಧರಿ ಹಿಲಾಲಪೂರ ಗುರುವಿನ ಪುತ್ರ
ವರವಾಗೊ ಬೌದ್ಧ ನೀ ಅಂಬೇಡಕಾರ
ಹತ್ತೊಂಬತ್ತು ನೂರಾ ಐವತ್ತಾರಾ
ಮುಕ್ತಾಯದ ದಿನ ಆರನೆ ಡಿಸೆಂಬರಾ
ಮಹಾಬೋಧಿರೂಪಾ ನಿರ್ಮಾಣ ಆದಿ ನಿರ್ಧಾರ
ಏಪ್ರಿಲ ಹದಿನಾಲ್ಕು ತೊಟ್ಟಿಲ ತೂಗಿ ಜನರಾ
ದಲಿತರ ಪಿತಾ ಜೈ ಭೀಮರಾಯ... ॥೫॥

❑

# ಭೀಮ ದೇವರ ತೋಟ

ಏಳಿರಿ ದಲಿತರೆ ಬನ್ನಿ ಬೇಗ ಓಡುತ
ನೀಲಂ ಕಲ್ಮಿ ಮಾವಿನಹಣ್ಣು ಭೀಮದೇವರ ತೋಟ ॥ಪಲ್ಲ॥

ನಂಬಿಗೆಂಬ ಭೂಮಿ ಇದೆ ಅಂಬೇಡ್ಕರ ತೋಟ
ಗೌತಮಬುದ್ಧ ನೇಗಿಲ ಹೊಡೆದ ಹಸನ ಮಾಡಿ ಸ್ಪಷ್ಟ
ವಿದ್ಯಾಬುದ್ಧಿಯ ಎತ್ತುಗಳು ಹೂಡಿ ಮಟ್ಟಿಕಟ್ಟಿ ನೇಟ
ಜ್ಞಾನದ ಹಣೆಹಗ್ಗ ಬಾಬಾ ಹಾರಿಸಿ ಬಿಟ್ಟ ॥೧॥

ಮಾವಿನ ತೋಟದ ಒಡೆಯ ರಾಮಜಿ ಬಾಬಾ ಶ್ರೇಷ್ಠಾ
ಬಾವಿ ತೋಡಿದ ಭಗವಾನ ಬುದ್ಧಾ ತಿಳಿನೀರ ಕೊಟ್ಟ
ಬಾಬಾ ಕೂಗಿ ಮಟ್ಟಿ ಹೊಡಿದ್ರೋ ನೋಡಿ ಬಡವರಕಷ್ಟಾ
ರಮಾಬಾಯಿ ನೀರುಣಸಿದಳೋ ಭೀಮಬಾಯಿ ತಂದೂಟ ॥೨॥

ಪ್ರಥ್ವಿ, ಆಪ ತೇಜ ವಾಯು ಆಕಾಶ ತೋಟಾ
ಪಂಚತತ್ವಮಾವಿನ ಮರಗಳು ಬೆಳೆಯರಿ ಬಲಿಷ್ಠಾ
ಮೇಘವರ್ಣ ನೀಲಮ ಕಾಯಿ ಫಲಹತ್ತಿ ರೇಟಾ
ಅಶೋಕ ಚಕ್ರ ಧಮ್ಮಾದಯಾ ಸಮ್ಮಾ ಸಮ್ಮ ತ್ರೀಪೀಟ ॥೩॥

ಭೀಮ ಬಾಬಾಗ ಚಿಂತಿ ಇತ್ತೊ ಎಂದಾದವು ಗಿಡನೇಟಾ
ಮಾವಿನ ತೋಟದ ಭಾರಾ ಮಾವನವರಿಗೆ ಕೊಟ್ಟ
ಮಾವಿನ ತೋರಣ ಶಾಖಾ ನೀಲ ಪಂಚಶೀಲ ಬಾವೂಟ
ನಾಗಪೂರ ದೀಕ್ಷಾಭೂಮಿಗೆ ಮಾವಿನಹಣ್ಣಿನ ರಸದೂಟ ॥೪॥

ಮನಿಮನಿಗ ಅಂಬೇಡಕರ ಮಾವಿನ ಆಗಿ ಹಚ್ಚಿಟ್ಟಾ
ಬಡವರು ನೀರ್ಹಾಕಿ ಬೆಳಿರಿ ವಿದ್ಯಾ ಕಲಿಸಿ ರೇಟಾ
ಸಾಮಾಜಿಕ, ಧಾರ್ಮಿಕ, ರಾಜಕಿ ಅರಿತು ಆಗಿರಿ ಬುದ್ಧಿಷ್ಟಾ,
ಭೀಮಬಾಬಾ ತೋಟ ಕಾಯದ್ರೊ ನಿಂತುದಿಲ್ಲಿ ಪಾರ್ಲಿಮೆಂಟಾ ॥೫॥

ಗಿಡ ಇನ್ನೂ ಚಿಕ್ಕದಾಯಿತೋ ಎರಡೆಲಿ ಒಡೆದವ ದೇಟಾ
ಗಿಡದ ಬೇರು ರಸಪಾತಳಕ ಬಿಟ್ಟಿದವೋ ಸಾಕಷ್ಟಾ
ಗಿಡದ ಕೊನೆ ಟೊಂಗೆಗಳು ಶಿಖರ ಸೇರೆವ ಶ್ರೇಷ್ಠಾ
ಫಲಗಳು ಪಸರಿಸಲೆಂದು ಪಂಚಶೀಲಗವಾಯಿ ಬಾಯಿಬಿಟ್ಟಾ ॥೬॥

# ಆಕರ


| | | |
|---|---|---|
| ಪುರುಷೋತ್ತಮ ಬಿಳಿಮಲೆ | ೧೯೯೦ | 'ಬಂಡಾಯ-ದಲಿತ ಸಾಹಿತ್ಯ' ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು |
| ಕಾಶೀನಾಥ ಗವಾಯಿ | ೧೯೫೪ | 'ಬುದ್ಧ ವಚನಾಮೃತ' ಕೆ. ಕಾಶೀನಾಥರಾವ ಪಂಚಶೀಲ ಗವಾಯಿ |
| ಕಾಶೀನಾಥ ಗವಾಯಿ | - | 'ಏಳಿರಿ ದಲಿತರೆ' (ಹಸ್ತಪ್ರತಿ) |
| ಅಣ್ಣಾರಾವ ಸಿಂಧೆ ಮಾಸ್ತರ | - | ಸಂಗ್ರಹಿತ ಹಾಡುಗಳು (ಅಪ್ರಕಟಿತ) |


❑

# ಸಂದರ್ಶಕರ ಯಾದಿ

| | | |
|---|---|---|
| ಲಾಲಪ್ಪ ಲಕ್ಷ್ಮಣ ಪವಾರ | ವಯಸ್ಸು-೮೫ | ಹಿಲಾಲಪೂರ<br>ತಾ॥ ಹುಮನಾಬಾದ<br>ಜಿ॥ ಬೀದರ |
| ಮಹಾದೇವಿ | ೯೦ | ಹಿಲಾಲಪೂರ |
| ಅಮೀರಲಿ ಮಾಸ್ತರ | ೯೫ | ಸಿರಕಟನಳ್ಳಿ (ಚಟ್ನಳ್ಳಿ)<br>ತಾ॥ ಹುಮನಾಬಾದ<br>ಜಿ॥ ಬೀದರ |
| ಫಾತಿಮಾ | ೯೨ | ಸಿರಕಟನಳ್ಳಿ |
| ಮಾಣಿಕರಾವ ಜ್ಯೋತಿ | ೭೩ | ಬೀದರ<br>ಅಂಬೇಡ್ಕರ ಕಾಲೋನಿ |
| ಲಕ್ಷ್ಮಿ | ೬೮ | 'ಖಾನಾಪೂರ'<br>ತಾ॥ ಚಿಂಚೋಳಿ<br>ಜಿ॥ ಗುಲಬರ್ಗಾ |
| ಸರಸ್ವತಿ ದಾಂಡಗೆ | ೬೫ | ಘಾಟಹಿಪ್ಪರಗಾ<br>ತಾ॥ ಬಸವಕಲ್ಯಾಣ<br>ಜಿ॥ ಬೀದರ |
| ಗುಂಡಪ್ಪ ಸಿಂಗೆ | ೬೫ | ಘಾಟ ಹಿಪ್ಪರಗಾ |
| ಅಣ್ಣಪ್ಪ ಪೋಸ್ತೆ | ೬೫ | ಘಾಟ ಹಿಪ್ಪರಗಾ |
| ಮಾರುತಿ ಭೂರೆ | ೬೫ | ಘಾಟ ಹಿಪ್ಪರಗಾ |
| ರಾಮಚಂದ್ರ ಎಕ್ಕೆ | ೬೦ | ಘಾಟ ಹಿಪ್ಪರಗಾ |
| ದೇವಿಂದ್ರ ಸಿಂಗೆ | ೫೦ | ಖಾನಾಪೂರ<br>ತಾ॥ ಚಿಂಚೋಳಿ<br>ಜಿ॥ ಬೀದರ |
| ಮಹಾದೇವಿ ಕಾಶೀನಾಥ | ವಯಸ್ಸು ೫೮ | ಬೀದರ<br>ಅಂಬೇಡ್ಕರ ಕಾಲೋನಿ |

| | | |
|---|---|---|
| ಪ್ರಕಾಶ | ವಯಸ್ಸು-೨೮ | ಬೀದರ<br>ಅಂಬೇಡ್ಕರ ಕಾಲೋನಿ |
| ಚಂದ್ರಶೀಲಾ | ೨೫ | ಬೀದರ<br>ಅಂಬೇಡ್ಕರ ಕಾಲೋನಿ |
| ಭಾರತ ರತ್ನ | ೨೦ | ಬೀದರ<br>ಅಂಬೇಡ್ಕರ ಕಾಲೋನಿ |
| ಜಯಂತ | ೧೮ | ಬೀದರ<br>ಅಂಬೇಡ್ಕರ ಕಾಲೋನಿ |
| ಶಂಭುಲಿಂಗ ವಾಲ್ದೊಡ್ಡಿ | ೫೦ | ಬೀದರ |

**ಗಾಯಕರು**

| | | |
|---|---|---|
| ಶಿವರಾಮ ಚಾಮೂನಗರ | - | ಚಾಮೂನಗರ<br>ತಾ॥ ಹುಮನಾಬಾದ<br>ಜಿ॥ ಬೀದರ |
| ಹಣಮಂತ ಜೆಟ್ಟಪ್ಪ | - | ಸೋನಕೇರಾ<br>ತಾ॥ ಹುಮನಾಬಾದ<br>ಜಿ॥ ಬೀದರ |

❑

# ಶಬ್ದಾರ್ಥ

ಅಂಬುಜಾ = ಕಮಲ
ಅಡಿ, ಅಡಿ = ಅಡವಿ, ಅಡವಿ
ಅಡ್ಡಿ = ಅಳತೆ ಒಂದು ಮಾಪನ
ಅನಾಜ = ಆಹಾರ
ಅಂಸರ = ಕಷ್ಟ, ತೊಂದರೆ
ಅಲಾಯಿ = ಮೋಹರಂ ಹಬ್ಬದಲ್ಲಿ ಪೀರದೇವರ ಮುಂದೆ ಕುಣಿಯುವುದು
ಆಂಖೆ = ಕಣ್ಣುಗಳು
ಆಟ್ರಾಸೆ = ಹದಿನೆಂಟುನೂರು
ಎಡ್ಡು = ಎರಡು
ಒನ್ನಿಸೊ ಸ್ಯೆತಾಳಿಸ = ಹತ್ತೊಂಬತ್ತು ನೂರಾ ನಲವತ್ತೇಳು
ಕುಂಚಿ = ಕುಲಾಯಿ ಆಕಾರದ ಜನಪದ ಹೆಣ್ಣುಮಕ್ಕಳು ಹೊದ್ದುಕೊಳ್ಳುವ ವಸ್ತ್ರ
ಕುಡ್ಡ = ಕುರುಡ
ಖೂಬ್ = ಬಹಳ
ಗಾವು = ದೇವತೆಗಳಿಗೆ ಬಲಿ ನೀಡುವಾಗ ಕುರಿಮರಿಯನ್ನು ಬಾಯಿಯಿಂದ ಹರಿಯುವುದು.
ಗಾಥಾ = ನುಡಿ, ವಚನ
ಗಳು = ಒಂದು ಇಡಿಯಾದ ಕಬ್ಬು
ಟಕ್ಕಪಾರ = ತೀವ್ರ ಸ್ಪರ್ಧೆ
ಠೇಲ್ = ದಟ್ಟಣೆ
ಡೀಗಾರಿ = ಬಹಳ
ಚಾವಡಿ = ಹಳೆಯ ಕಾಲದ ಪಂಚಾಯತ್ ಕಛೇರಿ
ಧಮ್ಮಡಿ = ಬಾರಿಸುವ ಸಾಧನ
ನೇಹರಿ (ನ್ಯಾರಿ) = ಮುಂಜಾನಿನ ಊಟ
ಹಡೋಳಿ ಹೊಲ = ಅಸ್ಪೃಶ್ಯರಿಗಾಗಿ ಸರ್ಕಾರ ನೀಡಿದ ತುಂಡ ಭೂಮಿ
ಧೇಡ್ = ಹೊಲೆಯಾ
ಬಕ್ಕಳು = ಬಹಳ
ಪಲ್ಲು = ಉಡಿ

ಕನ್ನಡ ಬದುಕಿನಲ್ಲಿ ತತ್ವಪದಕಾರರ ಪ್ರಭಾವ ಅಪಾರವಾದುದು. ಹಾದಿ ತಪ್ಪಿದ ಪ್ರಭುತ್ವಕ್ಕೆ ತತ್ವ ಪದಕಾರರು ನೀಡಿದ ಮಾತಿನ ಚಾಟಿಯೇಟು ಚರಿತ್ರೆಯ ಅಧ್ಯಯನದಲ್ಲಿ ವಿಶೇಷವಾಗಿ ಪರಿಗಣಿಸಬೇಕಾದ ಸೂಕ್ತಿಗಳು. ಹೋರ ನೋಟದಲ್ಲಿ ಪರಕ್ಕೆ ಜೋತು ಬಿದ್ದವರಂತೆ ಕಂಡರೂ ಇವರಷ್ಟು ಆಳವಾಗಿ ಬದುಕನ್ನು ಅನ್ವೇಶಿಸಿದ ಸಾಧಕರು ಯಾರೂ ಇಲ್ಲ. ಸಮಾಜದ ಆರೋಗ್ಯಕ್ಕಾಗಿ ಹಗಲಿರುಳು ಧೇನಿಸಿದ ಚಿಂತಕರು ಇವರು. ಇಂಥ ಮಹಾಸಾಧಕರಲ್ಲೊಬ್ಬರಾದ ದಲಿತ ತತ್ತ್ವ ಪದಕಾರ ಕಾಶೀನಾಥ ಪಂಚಶೀಲ ಗವಾಯಿ ಯವರನ್ನು ಕುರಿತ ಒಂದು ಅಪರೂಪದ ಕೃತಿ.

• ಪ್ರೊ ಎಸ್. ಜಿ. ಸಿದ್ಧರಾಮಯ್ಯ

ಬೆಲೆ : ರೂ. ೪೦/-
ISBN : 81-7713-282-2

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು